ಸೋಮವಾರ, ಡಿಸೆಂಬರ್ 18, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫ್ಯಾಷನ್ ಶೋ
ಕೋಲ್ಕತ್ತದಲ್ಲಿ ಭಾನುವಾರ ನಡೆದ ಫ್ಯಾಷನ್ ಶೋದಲ್ಲಿ ಪಾಲ್ಗೊಂಡಿದ್ದ ರೂಪದರ್ಶಿ



'ಪ್ರಜಾವಾಣಿ' ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆ–2023

ಮೈಸೂರಿನ ಎಕ್ಸೆಲ್ ಪಬ್ಲಿಕ್ ಸ್ಕೂಲ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರೀಕ್ಷೆಯ ಜೊತೆಗೆ ಕುತೂಹಲ ಮೂಡಿಸಿದ್ದ 'ಪ್ರಜಾವಾಣಿ' ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆ–2023ಕ್ಕೆ ತೆರೆಬಿದ್ದಿದ್ದು ಮೈಸೂರು ವಲಯದ ಎಕ್ಸೆಲ್ ಪಬ್ಲಿಕ್ ಸ್ಕೂಲ್‌ನ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು.

ಜಯನಗರದ ವಿವೇಕ ಸಭಾಂಗಣದಲ್ಲಿ ಪರಿಶ್ರಮ ಪಿಯು ಕಾಲೇಜು ಹಾಗೂ ಭೀಮಾ ಗೋಲ್ಡ್ ಸಹಯೋಗದಲ್ಲಿ ನಡೆದ ಫೈನಲ್ಸ್‌ನಲ್ಲಿ, ಬೆಂಗಳೂರು ವಲಯದ ಜ್ಞಾನಾಕ್ಷಿ ವಿದ್ಯಾನಿಕೇತನ ತಂಡವು ದ್ವಿತೀಯ ಹಾಗೂ ಮಂಗಳೂರು ವಲಯದ ಲಿಟ್ಲ್‌ರಾಕ್ ಇಂಡಿಯನ್ ಸ್ಕೂಲ್ ತಂಡವು ತೃತೀಯ ಸ್ಥಾನ ಪಡೆಯಿತು. ಮಂಗಳೂರು, ಮೈಸೂರು, ಧಾರವಾಡ, ಮಂಗಳೂರು ಹಾಗೂ ಬೆಂಗಳೂರು ವಲಯಗಳಲ್ಲಿ ಜಯ ಸಾಧಿಸಿ, ಫೈನಲ್‌ಗೆ ಆಯ್ಕೆಯಾಗಿದ್ದ ಐದು ತಂಡಗಳು ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದವು.

8 ರಿಂದ 10ನೇ ತರಗತಿ ವಿದ್ಯಾರ್ಥಿ-ಗಳಿಗೆ ವಲಯವಾರು ನಡೆದ ಸ್ಪರ್ಧೆಯಲ್ಲಿ ನೂರಾರು ತಂಡಗಳು ಪಾಲ್ಗೊಂಡಿದ್ದವು. ಅದರಲ್ಲಿ ಜಯಿಸಿದವರು ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಫೈನಲ್ಸ್‌ನಲ್ಲಿ ಚುರುಕಿನ ಉತ್ತರ ನೀಡಿದವರು ಆಕರ್ಷಕ ಟ್ರೋಫಿ, ವಿಶೇಷ ಬಹುಮಾನ ಹಾಗೂ ಪ್ರಶಸ್ತಿ ಪತ್ರವನ್ನು ತಮ್ಮದಾಗಿಸಿಕೊಂಡರು.

ಫೈನಲ್ಸ್‌ನಲ್ಲಿ ಐದು ಸುತ್ತುಗಳಿದ್ದವು. ಪ್ರತಿಯೊಂದು ಸುತ್ತೂ ಕುತೂಹಲ ಹೆಚ್ಚಿಸುವಂತೆ ಮಾಡಿತ್ತು. ಪರದೆಯ ಮೇಲೆ ಪ್ರಶ್ನೆಗಳು ಮೂಡುತ್ತಿದ್ದಂತೆಯೇ ಆಲೋಚಿಸಿ, ಉತ್ತರಿಸುವ ಕೌಶಲ ತೋರಿದ ತಂಡಗಳು ತಮ್ಮ ಬುಟ್ಟಿಗೆ ಅಂಕವನ್ನು ಜಮೆ ಮಾಡಿಕೊಂಡು ಜಯದ ನಗೆ ಬೀರಿದವು.

ಕ್ವಿಜ್ ಮಾಸ್ಟರ್ ಸಾಮಾನ್ಯ ಜ್ಞಾನದ ಸುತ್ತಿನಲ್ಲಿ ಪ್ರತಿ ತಂಡಕ್ಕೂ ನೇರ ಪ್ರಶ್ನೆಗಳನ್ನು ಎಸೆದರು. ಮೊದಲ ಪ್ರಶ್ನೆಗೆ ಮೈಸೂರು ವಲಯದ ಭುವನ್ ಹಾಗೂ ಶ್ರೀನಂದಿನಿ ದಾಸ್ ಸರಿ ಉತ್ತರ ನೀಡಿ, 10 ಅಂಕ ಪಡೆದರು.

ಮತ್ತೊಂದು ಪ್ರಶ್ನೆ ಪರದೆಯ ಮೇಲೆ ಮೂಡುತ್ತಿದ್ದಂತೆ ಧಾರವಾಡ ವಲಯ ತಂಡ 'ಕ್ಯಾರೆಟ್ ತಿನ್ನುವುದು ಕಣ್ಣಿಗೆ ತುಂಬಾ ಒಳ್ಳೆಯದು' ಎಂಬ ಚುರುಕಿನ ಉತ್ತರ ನೀಡಿತು. ಪ್ರಶಸ್ತಿ ಪಡೆಯುವ ಹಂಬಲದಲ್ಲಿದ್ದ ಐದೂ ತಂಡಗಳು ನಿಗದಿತ ಸಮಯದಲ್ಲಿ ಆಲೋಚಿಸಿ ಉತ್ತರಿಸಿ ಪ್ರಶಸ್ತಿ ಪಡೆಯುತ್ತ ಹೆಜ್ಜೆ ಹಾಕಿದವು.

ಜಾಹೀರಾತೊಂದನ್ನು ಪ್ರದರ್ಶಿಸಿ ಈ ಸ್ಥಳ ಯಾವುದು ಎಂದು ಸವಾಲೆಸೆದಾಗ ಬೆಂಗಳೂರು ತಂಡ 'ನಂದಿಬೆಟ್ಟ' ಎಂದು ಸರಿ ಉತ್ತರ ನೀಡಿತು. 'ಮೈಸೂರಿನಲ್ಲಿನ ಚಾಮುಂಡಿ ಬೆಟ್ಟದ ಮೇಲಿರುವ ನಂದಿ ವಿಗ್ರಹದ ಬಲಭಾಗದ ಚಿತ್ರ ಇದು. ಇದರ ಎಡಭಾಗ ನಮಗೆಲ್ಲ ಹೇಗೆ ಪರಿಚಿತ' ಎಂಬ ಪ್ರಶ್ನೆಗೆ ಫೈನಲ್ಸ್‌ನಲ್ಲಿದ್ದ ತಂಡಗಳು ಸರಿಯುತ್ತರ ನೀಡಲು ಸಾಧ್ಯವಾಗಲಿಲ್ಲ. ಆಗ ಸಭಿಕರತ್ತ ಪ್ರಶ್ನೆ ತೇಲಿಬಂತು. ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ವಿದ್ಯಾರ್ಥಿಯೊಬ್ಬ, ಅದು 'ಪ್ರಜಾವಾಣಿ' ಲಾಂಛನ ಎಂದು ಹೇಳಿ ವಿಶೇಷ ಬಹುಮಾನ ಪಡೆದುಕೊಂಡ. ಹಲವು ಪ್ರೇಕ್ಷಕರು ಸರಿ ಉತ್ತರ ನೀಡಿ ಬಹುಮಾನ ಪಡೆದುಕೊಂಡಿದ್ದು ವಿಶೇಷ.

'ನಿಮ್ಮ ಆಯ್ಕೆ ನಮ್ಮ ಪ್ರಶ್ನೆ' ಸುತ್ತು ಆಸಕ್ತಿಕರ ವಾಗಿತ್ತು. ಸಾಹಿತ್ಯ, ಕ್ರೀಡಾ ಜಗತ್ತು, ಕಾನೂನು, ದೇಶ–ವಿದೇಶಗಳ ಕುರಿತು ಪ್ರಶ್ನೆ ಕೇಳಲಾಯಿತು. 'ಆರಕ್ಕೆ ಏರಲ್ಲ ಮೂರಕ್ಕೆ ಇಳಿಯೊಲ್ಲ' ಸುತ್ತಿನಲ್ಲಿ ಅಚ್ಚರಿ ಪ್ರಶ್ನೆಗಳು ತೇಲಿಬಂದವು. ಅಷ್ಟೇ ಜಾಣ್ಮೆ, ತಾಳ್ಮೆಯ ಉತ್ತರಗಳು ಬಂದವು. ಋಣಾತ್ಮಕ ಸುತ್ತಿನಲ್ಲಿ ತಪ್ಪು ಉತ್ತರ ನೀಡಿ ಅಂಕ ಕಳೆದುಕೊಂಡ ನಿರಾಶೆಗೆ ಒಳಗಾದ ಪ್ರಸಂಗವೂ ನಡೆಯಿತು.

'ರ್‍ಯಾಪಿಡ್ ಫೈರ್' ಸುತ್ತಿನಲ್ಲಿ 'ಡಿಫಾಲ್ಟ್' ಸರಿ ಉತ್ತರಕ್ಕೆ 10 ಅಂಕ, ತಪ್ಪು ಉತ್ತರಕ್ಕೆ ಮೈನಸ್ 5, 'ಸ್ಟೆಪ್ ಅಪ್' ತೆಗೆದುಕೊಂಡರೆ ಸರಿ ಉತ್ತರಕ್ಕೆ 15 ಅಂಕ, ತಪ್ಪು ಉತ್ತರಕ್ಕೆ ಮೈನಸ್ 7 ಅಂಕಗಳಿದ್ದವು. ಅಲ್ಲಿ ಕಡಿಮೆ ಅಂಕಗಳಿದ್ದ ತಂಡಗಳು ಅಂಕ ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡಿದವು. ಅಲ್ಲಿವರೆಗೆ ಮೂರನೇ ಸ್ಥಾನದಲ್ಲಿದ್ದ ಬೆಂಗಳೂರು ವಲಯದ ಆರ್ಯನ್, ಅಕ್ಷಯ್ ಕೊನೆ ಹಂತದಲ್ಲಿ ಚಮತ್ಕಾರ ಮಾಡಿದರು. ಈ ಸುತ್ತಿನಲ್ಲಿ 'ಸ್ಟೆಪ್ ಅಪ್' ತೆಗೆದುಕೊಂಡು ಅಂಕ ಹೆಚ್ಚಿಸಿಕೊಂಡು, 2ನೇ ಸ್ಥಾನಕ್ಕೆ ಜಿಗಿದರು. ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್ ಆಕರ್ಷಕವಾಗಿ ಸ್ಪರ್ಧೆ ನಡೆಸಿಕೊಟ್ಟರು.

ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ತಂಡಕ್ಕೆ ಟ್ಯಾಬ್, ತೃತೀಯ ಸ್ಥಾನ ಪಡೆದ ತಂಡಕ್ಕೆ ಸ್ಮಾರ್ಟ್‌ವಾಚ್ ಬಹುಮಾನ ನೀಡಲಾಯಿತು. 'ಪ್ರಜಾವಾಣಿ' ಕಾರ್ಯ-ನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಡೆಪ್ಯುಟಿ ಎಡಿಟರ್ ಎಂ.ನಾಗರಾಜ್ ಹಾಗೂ ಟಿಪಿಎಂಎಲ್ ನ್ಯಾಷನಲ್ ಸೇಲ್ಸ್ ಹೆಡ್ ಆನಂದ್ ಬಿಲ್ಡಿಕರ್ ಅವರು ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಬೆಂಗಳೂರು ಸಿಟಿ ಕೊ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಡ್ಯುಕ್ಸ್ ವೆಫಿ, ಎಂಎಸ್ಐಎಲ್ ವಿದ್ಯಾ ಆ್ಯಂಡ್ ಲೇಖಕ್ ಸಹಕಾರ ನೀಡಿವೆ. ಟಿ.ವಿ ಸಹಯೋಗವನ್ನು ಏಷ್ಯಾನೆಟ್ ಸುವರ್ಣ ನ್ಯೂಸ್ ಮತ್ತು ಜ್ಞಾನ ಸಹಯೋಗವನ್ನು ಕ್ಯೂರಿಯಾಸಿಟಿ ಸೊಲ್ಯುಷನ್ಸ್ ಸಂಸ್ಥೆಗಳು ನೀಡಿದ್ದವು.



ಬೆಂಗಳೂರಿನಲ್ಲಿ ನಡೆದ 'ಪ್ರಜಾವಾಣಿ' ರಸಪ್ರಶ್ನೆ ಸ್ಪರ್ಧೆ –2023ರಲ್ಲಿ ಚಾಂಪಿಯನ್ ಆದ ಮೈಸೂರು ವಲಯದ ಎಕ್ಸೆಲ್ ಪಬ್ಲಿಕ್ ಶಾಲೆಯ ನಂದಿನಿ ದಾಸ್ ಹಾಗೂ ಭುವನ್ ಅವರಿಗೆ ನಟ ರಮೇಶ್ ಅರವಿಂದ್ ಅವರು ಟ್ರೋಫಿ ವಿತರಿಸಿದರು. (ಎಡದಿಂದ) ದ್ವಿತೀಯ ಸ್ಥಾನ ಪಡೆದ ಬೆಂಗಳೂರು ವಲಯದ ಜ್ಞಾನಾಕ್ಷಿ ವಿದ್ಯಾನಿಕೇತನ ಶಾಲೆಯ ಆರ್ಯನ್ ಸುಬ್ರಹ್ಮಣ್ಯ ಮತ್ತು ಅಕ್ಷಯ್ ರಾವ್ ಹಾಗೂ ತೃತೀಯ ಸ್ಥಾನ ಪಡೆದ ಮಂಗಳೂರು ವಲಯದ ಲಿಟ್ಲ್ ರಾಕ್ ಇಂಡಿಯನ್ ಸ್ಕೂಲ್‌ನ ಲಿಖಿತ್ ಮತ್ತು ಅನುರಾಗ್ ಅವರಿಗೂ ಟ್ರೋಫಿ ವಿತರಣೆ ಮಾಡಲಾಯಿತು. – ಪ್ರಜಾವಾಣಿ ಚಿತ್ರ: ರಂಜು ಪಿ.

ವಿಶ್ವಾಸಕ್ಕೆ ಅರ್ಹರಾಗಿ ರಮೇಶ್ ಅರವಿಂದ್

'ಪ್ರಜಾವಾಣಿ' ನಾಡಿನ ಅತ್ಯಂತ ವಿಶ್ವಾಸಕ್ಕೆ ಅರ್ಹವಾದ ದಿನಪತ್ರಿಕೆ. ನೀವು ಸಹ ವಿಶ್ವಾಸಕ್ಕೆ ಅರ್ಹರಾಗುವ ವ್ಯಕ್ತಿಗಳಾಗಿ ಬೆಳೆಯಬೇಕು' ಎಂದು ನಟ ರಮೇಶ್ ಅರವಿಂದ್ ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, 'ಚಳಿ, ಮಳೆ, ನೋವು, ನಲಿವು, ಸೋಲು–ಗೆಲುವು ಏನೇ ಬಂದರೂ ಇಷ್ಟಪಟ್ಟು ಮಾಡುವ ಕೆಲಸವೇ ಪ್ಯಾಶನ್. ಸಾಗುವ ಹಾದಿಯಲ್ಲಿ ಏನಾದರೂ ಸಮಸ್ಯೆ ಎದುರಾದರೆ ಹಿಂದಕ್ಕೆ ಹೆಜ್ಜೆ ಇಡಬಾರದು. ಕಠಿಣ ಸವಾಲು ಎದುರಿಸಬೇಕು' ಎಂದರು. 'ನಾನು ಸಾಕಷ್ಟು ಸ್ಪರ್ಧೆ ನಡೆಸಿಕೊಟ್ಟಿದ್ದೇನೆ. ಪ್ರಶ್ನೆ ಕೇಳುವುದು ಸುಲಭ. ಉತ್ತರಿಸುವುದು ಕಷ್ಟ. ನೀವೆಲ್ಲ ಸಲೀಸಾಗಿ ಉತ್ತರಿಸಿದ್ದೀರಿ' ಎಂದು ರಮೇಶ್ ಶ್ಲಾಘಿಸಿದರು.



ರಸಪ್ರಶ್ನೆ ಸ್ಪರ್ಧೆ ನಡೆಸಿಕೊಟ್ಟ ಮೇಘವಿ ಮಂಜುನಾಥ್

ವಿಜೇತರ ಅಭಿಪ್ರಾಯಗಳು...

'ನಿತ್ಯ ದಿನಪತ್ರಿಕೆ ಓದುವ ಅಭ್ಯಾಸ'

ರಾಜ್ಯಮಟ್ಟಕ್ಕೆ ಎಲ್ಲ ಕಡೆಯಿಂದ ಪ್ರತಿಭಾವಂತರು ಬಂದಿರುತ್ತಾರೆ. ನಾವೇ ಗೆಲ್ಲುತ್ತೇವೆ ಎಂಬ ನಿರೀಕ್ಷೆ ಇರಲಿಲ್ಲ. ನಾವು ಚಾಂಪಿಯನ್ ಆಗಿದ್ದು ಬಹಳ ಖುಷಿಯಾಗಿದೆ. ಶಾಲೆಯ ಶಿಕ್ಷಕರ ಪ್ರೋತ್ಸಾಹದಿಂದ ಈ ಸಾಧನೆ ಸಾಧ್ಯವಾಗಿದೆ. ನಿತ್ಯ ದಿನಪತ್ರಿಕೆ ಓದುತ್ತಿದ್ದೆವು. ಯೂಟ್ಯೂಬ್, ಗೂಗಲ್‌ನಿಂದ ಮಾಹಿತಿ ಪಡೆಯುತ್ತಿದ್ದೆವು. ಇದೆಲ್ಲ ಉಪಯೋಗವಾಯಿತು.

ಭುವನ್ ಪಿ.ಎಂ. ಮತ್ತು ಶ್ರೀನಂದಿನಿ ದಾಸ್, ಪ್ರಥಮ ಸ್ಥಾನ ಪಡೆದವರು

'ಜಾದೂ ನಡೆಯಿತು'

ನಾವು ರಾಜ್ಯಮಟ್ಟಕ್ಕೆ ಬರುವುದೇ ಅನುಮಾನವಿತ್ತು. ವಲಯ ಮಟ್ಟದಲ್ಲಿ 'ಸ್ಟೆಪ್ ಅಪ್'ನಲ್ಲಿ ಜಾದೂ ನಡೆಯಿತು. ನಾವು 2 ಅಂಕಗಳಿಂದ ಮುನ್ನಡೆ ಸಾಧಿಸಿ ಗೆದ್ದೆವು. ಫೈನಲ್‌ನಲ್ಲಿ ಕೂಡ ನಾವು ಕೊನೇ ಕ್ಷಣದವರೆಗೆ ಮೂರನೇ ಸ್ಥಾನದಲ್ಲಿದ್ದೆವು. ಮತ್ತೆ 'ಸ್ಟೆಪ್ ಅಪ್' ನಮ್ಮ ಕೈಹಿಡಿಯಿತು. ಕೊನೇ ಕ್ಷಣದಲ್ಲಿ 15 ಅಂಕ ಗಳಿಸಿ ಎರಡನೇ ಸ್ಥಾನಕ್ಕೆ ಬಂದೆವು. ನಮ್ಮ ಅದೃಷ್ಟ ಚೆನ್ನಾಗಿತ್ತು. ಈ 'ಎಪಿಕ್' ಕ್ಷಣ ಮರೆಯಲ್ಲ.

ಆರ್ಯನ್ ಸುಬ್ರಹ್ಮಣ್ಯ ಹಾಗೂ ಅಕ್ಷಯ್ ರಾವ್, ದ್ವಿತೀಯ ಸ್ಥಾನ ಪಡೆದವರು

'ತೃತೀಯ ಸ್ಥಾನವೂ ದೊಡ್ಡ ಸಾಧನೆ'

ದ್ವಿತೀಯ ಸ್ಥಾನ ನಮಗೆ ಬರುತ್ತಿತ್ತು. ಕೊನೇ ಕ್ಷಣದಲ್ಲಿ ತಪ್ಪಿ ಹೋಯಿತು. ಅದಕ್ಕೆ ಬೇಸರವಿಲ್ಲ. ರಾಜ್ಯದ ವಿವಿಧ ವಲಯಗಳಿಂದ ಪ್ರಥಮ ಸ್ಥಾನ ಗಳಿಸಿ ಬಂದವರ ಮಧ್ಯೆ ತೃತೀಯ ಸ್ಥಾನ ಪಡೆದಿರುವುದು ಖುಷಿ ನೀಡಿದೆ.

ಅನುರಾಗ್ ಮತ್ತು ಲಿಖಿತ್, ತೃತೀಯ ಸ್ಥಾನ ಪಡೆದವರು

ಫಲಿತಾಂಶದ ವಿವರ

ಶಾಲೆ ಹೆಸರು	ವಿದ್ಯಾರ್ಥಿಗಳು	ವಲಯ	ಸ್ಥಾನ
ಎಕ್ಸೆಲ್ ಪಬ್ಲಿಕ್ ಸ್ಕೂಲ್	ಭುವನ್ ಪಿ.ಎಂ., ಶ್ರೀನಂದಿನಿ ದಾಸ್	ಮೈಸೂರು	ಪ್ರಥಮ
ಜ್ಞಾನಾಕ್ಷಿ ವಿದ್ಯಾನಿಕೇತನ	ಆರ್ಯನ್ ಸುಬ್ರಹ್ಮಣ್ಯ, ಅಕ್ಷಯ್ ರಾವ್	ಬೆಂಗಳೂರು	ದ್ವಿತೀಯ
ಲಿಟ್ಲ್‌ರಾಕ್ ಇಂಡಿಯನ್ ಸ್ಕೂಲ್	ಲಿಖಿತ್, ಅನುರಾಗ್	ಮಂಗಳೂರು	ತೃತೀಯ
ಸರ್ಕಾರಿ ಆದರ್ಶ ವಿದ್ಯಾಲಯ	ಸಮರ್ಥ್, ಪ್ರೀತಂ	ಧಾರವಾಡ	ನಾಲ್ಕನೇ ಸ್ಥಾನ
ತರಳಬಾಳು ಜಗದ್ಗುರು ಪ್ರೌಢಶಾಲೆ	ಮಾನಸಿ, ಸಿಂಚನಾ	ದಾವಣಗೆರೆ	ಐದನೇ ಸ್ಥಾನ

ಹೈದರಾಬಾದ್ ಕರ್ನಾಟಕ ಮೀಸಲಾತಿಯ ಫೆ. 1ರ ಸುತ್ತೋಲೆ ರದ್ದುಪಡಿಸಿದ ಕೆಎಟಿ

ಕೆಪಿಎಸ್‌ಸಿ ಜೆಇ, ಎಇ ಪಟ್ಟಿಗೆ ಕುತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹುದ್ದೆಗಳಿಗೆ ಆಯ್ಕೆ ಮಾಡುವಾಗ ಉಳಿಕೆ ವೃಂದದ ಹುದ್ದೆಗಳನ್ನು ಮೊದಲು ಭರ್ತಿ ಮಾಡಿ, ಕಲ್ಯಾಣ ಕರ್ನಾಟಕ (ಹೈ–ಕ) ಪ್ರದೇಶಕ್ಕೆ ಮೀಸಲಿಟ್ಟ ಹುದ್ದೆಗಳನ್ನು ನಂತರ ತುಂಬಬೇಕು' ಎಂದು ರಾಜ್ಯ ಸರ್ಕಾರ 2023ರ ಫೆ. 1ರಂದು ಹೊರಡಿಸಿದ್ದ ಸುತ್ತೋಲೆಯನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ರದ್ದುಪಡಿಸಿದೆ.

ಕೆಎಟಿಯ ಈ ಆದೇಶದಿಂದ ಕೆಪಿಎಸ್‌ಸಿ ಈಗಾಗಲೇ ಪ್ರಕಟಿಸಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಿರಿಯ ಎಂಜಿನಿಯರ್ (ಜೆಇ), ಸಹಾಯಕ ಎಂಜಿನಿಯರ್ (ಎಇ) ಸೇರಿದಂತೆ ವಿವಿಧ ಇಲಾಖೆಗಳ ಒಟ್ಟು 653 ಹುದ್ದೆಗಳ ಪಟ್ಟಿಗೆ ಕುತ್ತು ಎದುರಾಗಿದೆ.

ಈ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಕಾರ್ಯದರ್ಶಿಗೆ ಇದೇ 14ರಂದು ಪತ್ರ ಬರೆದಿರುವ ಕೆಪಿಎಸ್‌ಸಿ ಕಾರ್ಯದರ್ಶಿ ಕೆ.ಎಸ್. ಲತಾ ಕುಮಾರಿ, 'ಕೆಎಟಿ ಆದೇಶ ಪಾಲಿಸಿದರೆ ಹಲವು ನೇಮಕಾತಿ ಅಧಿ-ಸೂಚನೆಗಳಿಗೆ ತೊಂದರೆಯಾಗಲಿದೆ. ಹೀಗಾಗಿ, ಈ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ತುರ್ತಾಗಿ ಮೇಲ್ಮನವಿ ಸಲ್ಲಿಸಲು ಆಯೋಗದ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಈ ಪ್ರಕರಣದಲ್ಲಿ ನಿಯಮಗಳನ್ನು ರೂಪಿಸುವ ಸಕ್ಷಮ ಪ್ರಾಧಿಕಾರ ಸರ್ಕಾರವೇ ಆಗಿದ್ದು, ಕೆಎಟಿ ರದ್ದುಪಡಿಸಿರುವ ಆದೇಶದ ಕುರಿತಂತೆ ಸರ್ಕಾರದ ನಿಲುವು ತಿಳಿಸಬೇಕು' ಎಂದು ಮನವಿ ಮಾಡಿದ್ದಾರೆ.

'ಫೆ. 1ರ ಸುತ್ತೋಲೆ ಹಿಂಪಡೆಯುವ ಅಥವಾ ಮಾರ್ಪಡಿಸುವ ಅಧಿಕಾರ ಸರ್ಕಾರದ ವ್ಯಾಪ್ತಿಗೆ ಬರುತ್ತದೆಯೇ ಹೊರತು ಆಯೋಗದ ವ್ಯಾಪ್ತಿಯಲ್ಲಿ ಇಲ್ಲ. ವಿವಿಧ ಹುದ್ದೆಗಳ ನೇಮಕಾತಿಯ ಆಯ್ಕೆ ಪ್ರಕ್ರಿಯೆಯು ಅಂತಿಮ ಹಂತದಲ್ಲಿದೆ. ಸುತ್ತೋಲೆ ರದ್ದಾದರೆ ಕೈಗೊಳ್ಳಬೇಕಾದ ಮುಂದಿನ ಕ್ರಮದ ಬಗ್ಗೆ ಸೂಕ್ತ ನಿರ್ದೇಶನವನ್ನು ಅತೀ ಜರೂರಾಗಿ ನೀಡಬೇಕು' ಎಂದೂ ಪತ್ರದಲ್ಲಿ ಕೋರಿದ್ದಾರೆ.

ಕೆಎಟಿ ಮೆಟ್ಟಿಲೇರಿದ ಅಭ್ಯರ್ಥಿಗಳು: ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಇ ಮತ್ತು ಜೆಇ ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿ 2022ರ ಫೆ. 21ರಂದು ಅಧಿಸೂಚನೆ ಹೊರಡಿಸಿತ್ತು. ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಇದೇ ಆಗಸ್ಟ್ 17ರಂದು ಪ್ರಕಟಿಸಿದೆ. ಈ ಮಧ್ಯೆ, 2023ರ ಫೆ. 1ರಂದು, ಕಲ್ಯಾಣ ಕರ್ನಾಟಕ ಪ್ರದೇಶದ (ಹೈ–ಕ) ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳನ್ನು ಭರ್ತಿ ಮಾಡುವಾಗ ಪಾಲಿಸಬೇಕಾದ ನಿಯಮಗಳ ಕುರಿತು ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿತ್ತು. ಈ ಸುತ್ತೋಲೆಯಲ್ಲಿರುವ ನಿಯಮದಂತೆ ಈ ತಾತ್ಕಾಲಿಕ ಪಟ್ಟಿಯನ್ನು ಕೆಪಿಎಸ್‌ಸಿ ತಯಾರಿಸಿತ್ತು.

ಎಇ ಹುದ್ದೆಗೆ 1:3 ಅನುಪಾತದ ಪಟ್ಟಿಯಲ್ಲಿ ಹೆಸರು ಇದ್ದ, ಆದರೆ ತಾತ್ಕಾಲಿಕ ಆಯ್ಕೆ ಪಟ್ಟಿಯಿಂದ ಹೊರಗುಳಿದ ಅಭ್ಯರ್ಥಿಗಳಾದ ಎಂ. ಧನಂಜಯ ಮತ್ತು ಡಿ.ಎಸ್. ಸಾಗರ್ ಎಂಬ ಇಬ್ಬರು ಅಭ್ಯರ್ಥಿಗಳು ಈ ಸುತ್ತೋಲೆಯನ್ನು ಪ್ರಶ್ನಿಸಿ ಕೆಎಟಿ ಮೆಟ್ಟಿ-ಲೇರಿದ್ದರು. ಅಭ್ಯರ್ಥಿಗಳ ಪರವಾಗಿ ಆದೇಶ ನೀಡಿರುವ ಕೆಎಟಿ, 'ಆಟದ (ಅಧಿಸೂಚನೆಯಿಂದ ಅಂತಿಮಪಟ್ಟಿ ಸಿದ್ಧಪಡಿಸುವರೆಗಿನ ಅವಧಿ) ಮಧ್ಯೆ ನಿಯಮ ಬದಲಿಸಲು ಅವಕಾಶ ಇಲ್ಲ' ಎಂದು ಹೇಳಿದೆ. ಅಲ್ಲದೆ, 'ಕಾನೂನಿನಡಿ ಈ ಸುತ್ತೋಲೆ ಸಮರ್ಥ-ನೀಯವಲ್ಲ' ಎಂದು ಅಭಿಪ್ರಾಯಪಟ್ಟು ರದ್ದುಪಡಿಸಿದೆ.

'ಫೆ. 1ರ ಸುತ್ತೋಲೆಯಲ್ಲಿ ತಿಳಿಸಿದಂತೆ ಕಲ್ಯಾಣ ಕರ್ನಾಟಕ ಭಾಗಕ್ಕೆ ಮೀಸಲಿಟ್ಟಿರುವ ಹುದ್ದೆಗಳನ್ನು ಹಂಚಿಕೆ ಮಾಡಿ ವಿವಿಧ ಇಲಾಖೆಗಳ ತಾತ್ಕಾಲಿಕ ಮತ್ತು ಅರ್ಹತಾ ಪಟ್ಟಿಗಳನ್ನು ತಯಾರಿಸಲಾಗಿದೆ. ಕೆಎಟಿ ಆದೇಶ ಪಾಲಿಸಿದರೆ ಈ ಪಟ್ಟಿಗಳಲ್ಲಿ ಈಗಾಗಲೇ ಹೆಸರಿರುವ ಅಭ್ಯರ್ಥಿಗಳ ಬದಲು ಹೊಸ ಅಭ್ಯರ್ಥಿಗಳು ಸೇರ್ಪಡೆ ಆಗಲಿದ್ದಾರೆ' ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ಈ ಸುತ್ತೋಲೆ ಅನ್ವಯಿಸಿ ನಗರ ಗ್ರಾಮಾಂತರ ಯೋಜನಾ ಇಲಾಖೆಯಲ್ಲಿ ನಗರ ಯೋಜಕರು (ಎಇ) ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನೂ ಕೆಪಿಎಸ್‌ಸಿ ಪ್ರಕಟಿಸಿದೆ. ಅಲ್ಲದೆ, ನಗರ ಗ್ರಾಮಾಂತರ ಯೋಜನಾ ಇಲಾಖೆಯಲ್ಲಿ ಸಹಾಯಕ ನಗರ ಯೋಜಕರು (ಜೆಇ) ಮತ್ತು ಪೌರಾಡಳಿತ ನಿರ್ದೇಶನಾಲಯದಲ್ಲಿ ಕಿರಿಯ ಎಂಜಿನಿಯರ್ (ಜೆಇ) ಹುದ್ದೆಗಳಿಗೆ 1:3 ಅನುಪಾತದಲ್ಲಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನೂ ಬಿಡುಗಡೆ ಮಾಡಿದೆ.

ಅಂತಿಮ ಪಟ್ಟಿಗೆ ಗ್ರಹಣ!: 'ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಜೆಇ, ಎಇ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕೆಪಿಎಸ್‌ಸಿ ಆಗಸ್ಟ್ 17 ರಂದೇ ಪ್ರಕಟಿಸಿದೆ. ಆದರೆ, ಕೆಪಿಎಸ್‌ಸಿಯ ವಿಳಂಬ ನೀತಿಯಿಂದಾಗಿ ಇನ್ನೂ ಅಂತಿಮ ಆಯ್ಕೆ ಪಟ್ಟಿ ಪ್ರಕಟವಾಗಿಲ್ಲ. ಕೆಎಟಿ ಆದೇಶದಿಂದಾಗಿ ಅಂತಿಮ ಆಯ್ಕೆ ಪಟ್ಟಿ ಮತ್ತಷ್ಟು ವಿಳಂಬವಾಗಲಿದೆ' ಎಂದು ಹುದ್ದೆ ಆಕಾಂಕ್ಷಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಫೆ. 1ರ ಸುತ್ತೋಲೆಯಲ್ಲಿ ಏನಿದೆ?

ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಮೀಸಲಾತಿ ನೀಡುವಾಗ ಅನುಸರಿಸಬೇಕಾದ ವಿಧಿ–ವಿಧಾನಗಳನ್ನು 2023ರ ಫೆ. 1ರ ಸುತ್ತೋಲೆಯಲ್ಲಿ ವಿವರಿಸಲಾಗಿದೆ. ಈ ಸುತ್ತೋಲೆಯ ಪ್ರಕಾರ, 'ಹುದ್ದೆಗಳಿಗೆ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ ತಯಾರಿಸುವಾಗ, ಮೊದಲು ಮೆರಿಟ್ (ಅರ್ಹತಾ) ಪಟ್ಟಿ ತಯಾರಿಸಬೇಕು. ಅಭ್ಯರ್ಥಿಗಳು ಯಾವುದೇ ವೃಂದವನ್ನು ಆಯ್ಕೆ ಮಾಡಿಕೊಂಡಿದ್ದರೂ ಅದನ್ನು ಪರಿಗಣಿಸದೆ, ಮೊದಲು ಅನ್ಯ ವೃಂದದ ಹುದ್ದೆಗಳನ್ನು ತುಂಬಬೇಕು. ನಂತರ ಕಲ್ಯಾಣ ಕರ್ನಾಟಕ ಮೀಸಲಾತಿ ಅಡಿ ಮೀಸಲಿಟ್ಟ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು' ಎಂದಿದೆ.

ಕೆಎಟಿ ಆದೇಶದಲ್ಲಿ ಏನಿದೆ?

'ಮೆರಿಟ್ ಇರುವ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳನ್ನು ಮೊದಲು ಕಲ್ಯಾಣ ಕರ್ನಾಟಕ ವೃಂದದಲ್ಲಿಯೇ ಭರ್ತಿ ಮಾಡಬೇಕು. ನಂತರ ಕಲ್ಯಾಣ ಕರ್ನಾಟಕ ವೃಂದದಲ್ಲಿ ಆಯ್ಕೆಯಾಗದ ಕಡಿಮೆ ಮೆರಿಟ್ ಇರುವ ಅಭ್ಯರ್ಥಿಗಳನ್ನು ಮಿಕ್ಕುಳಿದ ವೃಂದಲ್ಲಿ ಅರ್ಹತೆಯ ಕ್ರಮದಲ್ಲಿ ಆಯ್ಕೆ ಮಾಡಬೇಕು' ಎಂದು ಕೆಎಟಿ ತನ್ನ ಆದೇಶದಲ್ಲಿ ವಿವರಿಸಿದೆ.

ಸುತ್ತೋಲೆ ರದ್ದತಿಯಿಂದ ಬದಲಾಗಲಿರುವ ಆಯ್ಕೆ ಪಟ್ಟಿ

ಇಲಾಖೆ	ಹುದ್ದೆ	ಸಂಖ್ಯೆ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ	ಸಹಾಯಕ ಎಂಜಿನಿಯರ್ (ಎಇ)	229+59 (ಹೈಕ)
ನಗರ ಮತ್ತು ಗ್ರಾಮಾಂತರ ಯೋಜನೆ	ನಗರ ಯೋಜಕರು(ಎಇ)	18+05(ಹೈಕ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ	ಕಿರಿಯ ಎಂಜಿನಿಯರ್ (ಜೆಇ)	89+47 (ಹೈಕ)
ಪೌರಾಡಳಿತ ನಿರ್ದೇಶನಾಲಯ	ಕಿರಿಯ ಎಂಜಿನಿಯರ್(ಜೆಇ)	74+15 (ಹೈಕ)
ಪೌರಾಡಳಿತ ನಿರ್ದೇಶನಾಲಯ	ಕಿರಿಯ ಆರೋಗ್ಯ ನಿರೀಕ್ಷಕರು	55+02 (ಹೈಕ)
ನಗರ ಮತ್ತು ಗ್ರಾಮಾಂತರ ಯೋಜನೆ	ಸಹಾಯಕ ನಗರ ಯೋಜಕರು(ಜೆಇ)	50+10(ಹೈಕ)

ಕುಕ್ಕೆ: 267 ಭಕ್ತರಿಂದ ಎಡೆಸ್ನಾನ ಸೇವೆ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಮಹತೋಭಾರ ಕುಕ್ಕೆ ಸುಬ್ರಹ್ಮಣ್ಯ ದೇವರ ಚಂಪಾಷಷ್ಠಿ ಜಾತ್ರಾ ಮಹೋತ್ಸವದ ಸ್ಕಂದ ಪಂಚಮಿಯ ದಿನವಾದ ಭಾನುವಾರ, ಕುಕ್ಕೆ ಸುಬ್ರಹ್ಮಣ್ಯದಲ್ಲಿ ಭಕ್ತರು ಎಡೆಸ್ನಾನ ಸೇವೆ ನೆರವೇರಿಸಿದರು. ಗೋವು ಆಹಾರ ಸೇವಿಸಿದ ಎಲೆಯ ಮೇಲೆ 267 ಭಕ್ತರು ಸ್ವಯಂ ಪ್ರೇರಿತರಾಗಿ ಉರುಳು ಸೇವೆ ನಡೆಸಿದರು.

ಧಾರ್ಮಿಕ ದತ್ತಿ ಇಲಾಖೆಯ ಶೈವಾಗಮ ಪಂಡಿತರ ಮಾರ್ಗದರ್ಶನದಂತೆ ದೇವರ ಮಧ್ಯಾಹ್ನದ ಮಹಾಪೂಜೆ ಬಳಿಕ ದೇವಳದ ಹೊರಾಂಗಣದ ಸುತ್ತ 432 ಬಾಳೆ ಎಲೆ ಹಾಕಿ, ಅದರ ಮೇಲೆ ನೈವೇದ್ಯ ಬಡಿಸಲಾಯಿತು. ಬಳಿಕ ದೇವಳದ ಗೋವುಗಳು ಅನ್ನ ಪ್ರಸಾದವನ್ನು ತಿಂದವು.

ದೇವಳದ ಎದುರಿನ ದರ್ಪಣ ತೀರ್ಥ ನದಿಯಲ್ಲಿ ಸ್ನಾನ ಮಾಡಿ ನಿಂತಿದ್ದ ಭಕ್ತರು ಹಸುಗಳು ತಿಂದ ಅನ್ನಪ್ರಸಾದದ ಮೇಲೆ ಉರುಳು ಸೇವೆ ಕೈಗೊಂಡರು. ಒಂದು ಸುತ್ತು ಪ್ರದಕ್ಷಿಣೆ ಬಳಿಕ ಭಕ್ತರು ನದಿಯಲ್ಲಿ ಸ್ನಾನ ಮಾಡಿ ದೇವರ ಪ್ರಸಾದ ಮತ್ತು ಭೋಜನ ಸ್ವೀಕರಿಸಿದರು.

ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮೋಹನರಾಂ ಸುಳ್ಳಿ, ಕಾರ್ಯನಿರ್ವಹಣಾಧಿಕಾರಿ ನಿಂಗಯ್ಯ, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ವನಜಾ ವಿ. ಭಟ್, ಶ್ರೀವತ್ಸ ಬೆಂಗಳೂರು, ಮನೋಹರ ರೈ, ಪಿಜಿಎಸ್‌ಎನ್ ಪ್ರಸಾದ್, ಪ್ರಸನ್ನ ದರ್ಬೆ, ಲೋಕೇಶ್ ಮುಂಡೋಕಜೆ, ಶೋಭಾ ಗಿರಿಧರ್, ದೇವಳದ ಅಧೀಕ್ಷಕ ಪದ್ಮನಾಭ ಶೆಟ್ಟಿಗಾರ್, ಹೆಬ್ಬಾರ್ ಪ್ರಸನ್ನ ಭಟ್ ಭಾಗವಹಿಸಿದ್ದರು.



ಕುಕ್ಕೆ ದೇವಳದಲ್ಲಿ ಭಾನುವಾರ ಭಕ್ತರು ಎಡೆಸ್ನಾನ ಸೇವೆ ಸಲ್ಲಿಸಿದರು

ತಿರುಚಿದ ವಿಡಿಯೊ: ಸಿದ್ದರಾಮಯ್ಯ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಸಭೆಯಲ್ಲಿ ನಾನು ಮಾತನಾಡಿದ್ದ ವಿಡಿಯೊವನ್ನು ತಪ್ಪು ಅರ್ಥ ಬರುವಂತೆ ಕತ್ತರಿಸಿ ಬಿಜೆಪಿ ನಾಯಕರು ವಿಕೃತ ಸಂತೋಷ ಪಡುತ್ತಿದ್ದಾರೆ. ಬಿಜೆಪಿ ನಾಯಕರ ಇಂತಹ ನಡವಳಿಕೆ, ಬಿಜೆಪಿ ಎಂದರೆ 'ಬೊಗಳೆ ಜನತಾ ಪಾರ್ಟಿ' ಎಂಬ ಕುಖ್ಯಾತಿಯನ್ನು ದೃಢೀಕರಿಸುವಂತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.


ತಮ್ಮ ಮಾತಿನ ವಿಡಿಯೊ ತುಣುಕು ಸಹಿತ 'ಎಕ್ಸ್' (ಟ್ವೀಟ್) ಮಾಡಿರುವ ಸಿದ್ದರಾಮಯ್ಯ, 'ತಿರುಚಿದ ವಿಡಿಯೊಗಳನ್ನು ನಂಬುವಷ್ಟು ಜನ ಮೂರ್ಖರಲ್ಲ. ನಿಮ್ಮ ಮಾನ ಮರ್ಯಾದೆ ಬಗ್ಗೆ ನಿಮಗೆ ಕನಿಷ್ಠ ಕಾಳಜಿ ಇದ್ದರೆ ಹಂಚಿಕೊಂಡಿರುವ ವಿಡಿಯೊವನ್ನು ತೆಗೆದುಹಾಕಿ ಕ್ಷಮೆ ಕೇಳಬೇಕು' ಎಂದು ಆಗ್ರಹಿಸಿದ್ದಾರೆ.

'ಫೇಕ್ ಸುದ್ದಿಗಳ ಸೃಷ್ಟಿ ಮತ್ತು ಪ್ರಸಾರವನ್ನೇ ನಂಬಿ ರಾಜಕಾರಣ ಮಾಡುವ ಬಿಜೆಪಿಯವರಿಗೆ ನನ್ನ ವಚನ ಬದ್ಧತೆ ಪ್ರಶ್ನಿಸುವ ನೈತಿಕತೆಯೇ ಇಲ್ಲ. ನರೇಂದ್ರ ಮೋದಿ ಅವರು ಮೌಲ್ಯಾಧಾರಿತ ರಾಜಕಾರಣ ಮತ್ತು ಸತ್ಯದ ಪರವಾಗಿದ್ದರೆ ಫೇಕ್ ನ್ಯೂಸ್ ಪೆಡ್ಲರ್‌ಗಳಾದ ಸಿ.ಟಿ ರವಿ ಮತ್ತು ಅಶ್ವತ್ಥನಾರಾಯಣ ಅವರನ್ನು ತಕ್ಷಣ ಪಕ್ಷದಿಂದ ಆಚೆಗಟ್ಟಲಿ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಮುಖ್ಯಮಂತ್ರಿಯಾಗಿದ್ದಾಗ ಯಡಿಯೂರಪ್ಪ ಏನು ಹೇಳಿದ್ದರು ಎನ್ನುವುದನ್ನು ನಾನು ಸದನದಲ್ಲಿ ವಿವರಿಸಿದ್ದೆ. ಅದನ್ನು ಕತ್ತರಿಸಿ, ಯಡಿಯೂರಪ್ಪ ಅವರು ಆಡಿದ ಮಾತನ್ನೇ ಸಿದ್ದರಾಮಯ್ಯ ಅವರ ಮಾತು ಎನ್ನುವಂತೆ ಬಿಜೆಪಿ-ಜೆಡಿಎಸ್‌ನವರು ಪ್ರಚಾರ ಮಾಡುತ್ತಿದ್ದಾರೆ' ಎಂದಿದ್ದಾರೆ.

'ಸಿ.ಟಿ. ರವಿ ಅವರೇ, ನೀವು ಮತ್ತು ನಿಮ್ಮ ಪಕ್ಷ ಇಂಥ ಅಗ್ಗದ ಚೇಷ್ಟೆಗಳನ್ನು ಮಾಡಿದ್ದರ ಫಲವೇ ಜನ ನಿಮ್ಮನ್ನು ಮನೆಯಲ್ಲಿ ಮತ್ತು ಪಕ್ಷವನ್ನು ವಿರೋಧ ಪಕ್ಷದ ಸ್ಥಾನದಲ್ಲಿ ಕುಳ್ಳಿರಿಸಿದ್ದಾರೆ. ಒಬ್ಬ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಪರದಾಡಬೇಕಾದ ದುಃಸ್ಥಿತಿಯಲ್ಲಿ ನಿಮ್ಮ ಪಕ್ಷ ಇದೆ. ಆದರೂ ನಿಮಗೆ ಬುದ್ಧಿ ಬಂದಂತೆ ಕಾಣುತ್ತಿಲ್ಲ. ಅಶ್ವತ್ಥನಾರಾಯಣ ಕೂಡ ಇದೇ ರೀತಿ ವಿಡಿಯೊ ಹಂಚಿಕೊಂಡಿದ್ದು ನೋಡಿ ಆಶ್ಚರ್ಯವಾಗುತ್ತಿದೆ' ಎಂದಿದ್ದಾರೆ.

ಆರ್‌ಎಸ್‌ಎಸ್: ಉಮಾಪತಿಗೆ ಜವಾಬ್ದಾರಿ



ಬೆಂಗಳೂರು: ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಕರ್ನಾಟಕ ದಕ್ಷಿಣ ಪ್ರಾಂತದ ನೂತನ ಪ್ರಾಂತಸಂಘ ಚಾಲಕರಾಗಿ ಜಿ.ಎಸ್. ಉಮಾಪತಿ ಕಾರ್ಯನಿರ್ವಹಿಸಲಿದ್ದಾರೆ.

ಉಮಾಪತಿ ಅವರು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಆಡನೂರು ಗ್ರಾಮದವರಾಗಿದ್ದಾರೆ. ಲೋಕೋಪಯೋಗಿ ಇಲಾಖೆಯಲ್ಲಿ ಅಧೀಕ್ಷಕ ಎಂಜಿನಿಯರ್ ಆಗಿ ಸೇವೆ ಸಲ್ಲಿಸಿ, 2018ರಲ್ಲಿ ಅವರು ನಿವೃತ್ತ-ರಾಗಿದ್ದರು. ವಿದ್ಯಾರ್ಥಿ ದೆಸೆಯಿಂದಲೇ ಆರ್‌ಎಸ್‌ಎಸ್ ಸ್ವಯಂಸೇವಕರಾಗಿದ್ದ ಅವರು, ಬಳಿಕ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು.

ಆರ್‌ಎಸ್‌ಎಸ್ ಬೆಂಗಳೂರು ಮಹಾನಗರದ ಸಂಘಚಾಲಕರಾಗಿ ಮಿಲಿಂದ್ ಗೋಖಲೆ ಹಾಗೂ ಮಂಗಳೂರು ವಿಭಾಗದ ಸಂಘಚಾಲಕರಾಗಿ ನಾರಾಯಣ ಶೆಣೈ ಜವಾಬ್ದಾರಿ ನಿರ್ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ದತ್ತಮಾಲೆ ಧರಿಸಿದ ಸಿ.ಟಿ.ರವಿ ಮತ್ತು ನೂರಾರು ಕಾರ್ಯಕರ್ತರು

ದತ್ತ ಮಾಲೆಧಾರಣೆಗೆ ಚಾಲನೆ

ಚಿಕ್ಕಮಗಳೂರು: ವಿಶ್ವ ಹಿಂದೂ ಪರಿಷತ್, ಬಜರಂಗದಳದ ನೇತೃತ್ವದಲ್ಲಿ ನಡೆಯುವ ದತ್ತ ಜಯಂತಿ ಮಾಲಧಾರಣೆ ಕಾರ್ಯಕ್ಕೆ ಭಾನುವಾರ ಚಾಲನೆ ದೊರೆಯಿತು. ಬಿಜೆಪಿ ಮುಖಂಡ ಸಿ.ಟಿ. ರವಿ ಸೇರಿ ನೂರಾರು ಕಾರ್ಯಕರ್ತರು ಮಾಲೆಧಾರಣೆ ಮಾಡಿಕೊಂಡರು.

ನಗರದ ಕಾಮಧೇನು ಗಣಪತಿ ದೇಗುಲದಲ್ಲಿ ದತ್ತಾತ್ರೇಯ ಸ್ವಾಮಿಗೆ ಪೂಜೆ ನೆರವೇರಿಸಲಾಯಿತು. ಇಂದಿನಿಂದ ಹತ್ತು ದಿನ ದತ್ತ ಜಯಂತಿ ಕಾರ್ಯಕ್ರಮಗಳು ನಡೆಯಲಿವೆ.

25ರಂದು ಚಿಕ್ಕಮಗಳೂರಿನಲ್ಲಿ ಶೋಭಾಯಾತ್ರೆ, 26ರಂದು ದತ್ತ ಪಾದುಕೆ ದರ್ಶನವನ್ನು ದತ್ತ ಮಾಲಧಾರಿಗಳು ಮಾಡಲಿದ್ದಾರೆ. ಮುಳ್ಳಯ್ಯನ ಗಿರಿ ಬಳಿಯ ಪ್ರವಾಸಿ ತಾಣಗಳಿಗೆ ಮುನ್ನೆಚ್ಚರಿಕೆಯಾಗಿ ಬೇರೆ ಪ್ರವಾಸಿಗರಿಗೆ ಡಿ.22ರಿಂದ 26ರವರೆಗೆ ಪ್ರವೇಶ ನಿರ್ಬಂಧಿಸಲಾಗಿದೆ

ಈ ಸಂದರ್ಭ ಮಾತನಾಡಿದ ಸಿ.ಟಿ.ರವಿ, 'ದತ್ತಪೀಠಕ್ಕೆ ಸೇರಿದ ಚರಾಸ್ತಿ ಮತ್ತು 1,861 ಎಕರೆ ಸ್ಥಿರಾಸ್ತಿಯನ್ನು ಪ್ರಭಾವಿಗಳು ಕಬಳಿಸಿದ್ದಾರೆ. ಇವುಗಳ ಪರಿಶೀಲನೆಗೆ ಹಿಂದೆ ಸಮಿತಿ ರಚನೆಯಾಗಿತ್ತು. ಅಕ್ರಮ ನಡೆಸಿದರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ದಿವಂಗತ ಇಎಸ್‌ವಿ ಜನ್ಮಶತಾಬ್ದಿ

ತಾರತಮ್ಯ ತೊಲಗಲಿ: ಸಿಜೆಐ ಚಂದ್ರಚೂಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಂವಿಧಾನಿಕ ಆಡಳಿತವು ಸಮಾಜವನ್ನು ಸಾರ್ವಜನಿಕ ಮತ್ತು ಖಾಸಗಿ ಎಂಬ ಅವಳಿತನ ಮೀರಿ ತನ್ನದೇ ಆದ ವಿವೇಚನಾತ್ಮಕ ದೃಷ್ಟಿಯಿಂದ ನೋಡುವಂತಿರಬೇಕು' ಎಂದು ಅಭಿಪ್ರಾಯಪಟ್ಟ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು, 'ನಮ್ಮಲ್ಲಿ ಮುಕ್ತ ಮನಸ್ಸು ಇದ್ದಾಗ ಮಾತ್ರವೇ ನ್ಯಾಯದ ತಾರ್ಕಿಕ ಅಂತ್ಯಗಳನ್ನು ಕಾಣಬಹುದು' ಎಂದರು.

ಸುಪ್ರೀಂ ಕೋರ್ಟ್‌ನ 19ನೇ ಮುಖ್ಯ ನ್ಯಾಯಮೂರ್ತಿ ಮತ್ತು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ-ಯಾದ ಮೊದಲ ಕನ್ನಡಿಗರು ಎಂಬ ಹೆಗ್ಗಳಿಕೆ ಹೊಂದಿರುವ ಇಂಗಳಗುಪ್ಪೆ ಸೀತಾರಾಮಯ್ಯ ವೆಂಕಟರಾಮಯ್ಯ ಅವರ ಜನ್ಮಶತಾಬ್ದಿ ಅಂಗವಾಗಿ; ಭಾರತ ವಿಶ್ವವಿದ್ಯಾಲಯದರಾಷ್ಟ್ರೀಯಕಾನೂನು ಶಾಲೆ (ಎನ್‌ಎಲ್‌ಎಸ್‌ಐಯು) ಸಹಯೋಗದಲ್ಲಿ ಭಾನುವಾರ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಸ್ಮಾರಕ ಉಪನ್ಯಾಸ ನೀಡಿದರು.

'ದಿವಂಗತ ಇ.ಎಸ್.ವೆಂಕಟರಾಮಯ್ಯ ಶಿಕ್ಷಕರು, ಶಿಕ್ಷಣವೇತ್ತರೂ ಆಗಿದ್ದರು. ಸಂಸ್ಕೃತದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದರು. ನ್ಯಾಯಾಂಗ, ಮಾಧ್ಯಮ ಸ್ವಾತಂತ್ರ್ಯ ಮತ್ತು ನಿರ್ಭೀತ ಪತ್ರಿಕೋದ್ಯಮವನ್ನು ಎತ್ತಿ ಹಿಡಿದಿದ್ದ ಸರ್ವೋತ್ತಮರೆನಿಸಿದ್ದರು' ಎಂದರು.

'ರಾಜ್ಯದ ಸಾಂವಿಧಾನಿಕ ಅಗತ್ಯಗಳು–ಸಾರ್ವಜನಿಕ ಮತ್ತು ಖಾಸಗಿ ಸ್ಥಳಗಳಲ್ಲಿನ ತಾರತಮ್ಯ' ಎಂಬ ಅಂಶಗಳನ್ನು ಕೇಂದ್ರವಾಗಿಸಿಕೊಂಡು ಮಾತನಾಡಿದ ಅವರು, 'ಸಾರ್ವಜನಿಕ ಮತ್ತು ಖಾಸಗಿತನ ಎಂಬುದರ ದ್ವಂದ್ವವು ಹಲವಾರು ವರ್ಷಗಳಿಂದ ನಮ್ಮ ಕಾನೂನುಗಳು ಸ್ತ್ರೀವಾದಿ ಮತ್ತು ಆರ್ಥಿಕ ವಿಮರ್ಶೆಯ ಆಧಾರಗಳಾಗಿವೆ. ಇವತ್ತು ತಂತ್ರಜ್ಞಾನ ಎಂಬುದು ಪ್ರಾದೇಶಿಕ ನಿರ್ಬಂಧಗಳನ್ನು ಕೊನೆಗೊಳಿಸಿದೆ. ಇವುಗಳ ಮಧ್ಯೆಯೇ, ನಮ್ಮ ಕಾನೂನುಗಳು ಸಾರ್ವಜನಿಕ ಮತ್ತು ಖಾಸಗಿತನದ ಚೌಕಟ್ಟುಗಳಲ್ಲಿರುವ ಲಿಂಗ, ಜಾತಿ, ಅಂಗವೈಕಲ್ಯದ ತಾರತಮ್ಯ ನಿವಾರಿಸಲು ಶ್ರಮಿಸುತ್ತಿವೆ' ಎಂದರು.

'ಗಂಡು ಅಥವಾ ಹೆಣ್ಣು ಮಗುವಿಗೆ ಶಿಕ್ಷಣ ನೀಡುವ ವಿಷಯದಲ್ಲಿ ಆರ್ಥಿಕ ಪ್ರಶ್ನೆ ಎದುರಾದಾಗ ಕುಟುಂಬವು ಗಂಡು ಮಗುವಿಗೆ ಆಯ್ಕೆಯ ಆದ್ಯತೆ ನೀಡುವುದನ್ನು ಹೆಚ್ಚಾಗಿ ನೋಡುತ್ತೇವೆ. ಸಾಮಾನ್ಯವಾಗಿ ಸಾಂವಿಧಾನಿಕ ಕಾನೂನಿನ ತತ್ವಗಳನ್ನು ಮನೆಯ ಮಿತಿಯೊಳಗೆ ಪರಿಚಯಿಸುವಾಗ ವಿವಾಹ ಎಂಬ ಸಂಸ್ಥೆ ದುರ್ಬಲಗೊಳ್ಳುವ ಅಪಾಯವಿದೆ. ಹೀಗಾಗಿ, ಸಮಾನತೆಯ ಪ್ರಜಾಪ್ರಭುತ್ವ ಎಂಬುದು ಸಾರ್ವಜನಿಕ ಸ್ಥಳಕ್ಕೆ ಮಾತ್ರವೇ ಸೀಮಿತವಾಗದೆ ಕುಟುಂಬದ ಒಳಗೂ ಗಟ್ಟಿಯಾಗಿ ಧ್ವನಿಸಬೇಕು' ಎಂದರು.

ಆಂಧ್ರಪ್ರದೇಶದ ರಾಜ್ಯಪಾಲರೂ ಆದ ನ್ಯಾಯಮೂರ್ತಿ ಎಸ್. ನಜೀರ್ ಅಹ್ಮದ್, ಸುಪ್ರೀಂ ಕೋರ್ಟ್ ನ್ಯಾಯ-ಮೂರ್ತಿಗಳಾದ ಹೃಷಿಕೇಶ ರಾಯ್ ಮತ್ತು ರಾಜೇಶ್ ಬಿಂದಾಲ್, ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ, ಹಿಮಾಚಲ ಪ್ರದೇಶದ ಮುಖ್ಯ ನ್ಯಾಯಮೂರ್ತಿ ಎಂ.ಎಸ್. ರಾಮಚಂದ್ರ ರಾವ್, ಕಲ್ಕತ್ತಾ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಟಿ.ಎಸ್.ಶಿವಜ್ಞಾನಂ, ಕರ್ನಾಟಕ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳು, ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ ಶೆಟ್ಟಿ ಸೇರಿ ಇತರರು ಹಾಜರಿದ್ದರು.



ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ (ಮಧ್ಯದಲ್ಲಿರುವವರು) ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಜೊತೆ ಗಹನ ಸಂಭಾಷಣೆ ನಡೆಸಿದರು. ಎನ್‌ಎಲ್‌ಎಸ್‌ಐಯು ಕುಲಪತಿ ಸುಧೀರ್ ಕೃಷ್ಣಸ್ವಾಮಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

'ನನ್ನ ತಾಯಿ ಬಂಡೆಯಂತೆ ನಿಂತಿದ್ದರು'

ವೆಂಕಟರಾಮಯ್ಯ ಅವರ ಪುತ್ರಿ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಮಾತನಾಡಿ, 'ಕಾಯಕವೇ ಕೈಲಾಸ ಎಂದು ನಂಬಿದ್ದ ನ್ಯಾಯಮೂರ್ತಿ ಇ.ಎಸ್. ವೆಂಕಟರಾಮಯ್ಯ ಬದುಕಿನುದ್ದಕ್ಕೂ ತಮ್ಮ ಕರ್ತವ್ಯಕ್ಕೆ ಬದ್ಧರಾಗಿದ್ದರು. ನೇರ ನಡೆ, ನುಡಿ ಮತ್ತು ವಾಸ್ತವದ ಅರಿವು ಹೊಂದಿದ್ದರು. ಅವರ ಏಳ್ಗೆಯಲ್ಲಿ ನಮ್ಮ ತಾಯಿ ಅವರ ಬೆನ್ನಿಗೆ ಬಂಡೆಯಂತೆ ನಿಂತಿದ್ದರು' ಎಂದರು.

ಸೋಮವಾರ, ಡಿಸೆಂಬರ್ 18, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 348 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ


ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭದ್ರತಾ ಲೋಪದ ಬಗ್ಗೆ ಸದನದಲ್ಲಿ ಗೃಹ ಸಚಿವರ ಹೇಳಿಕೆಗಾಗಿ ವಿಪಕ್ಷಗಳ ಒತ್ತಾಯ

ಶಾ ಹೇಳಿಕೆ: ಬಿಗಿಪಟ್ಟಿಗೆ ಸಜ್ಜು

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಚಳಿಗಾಲ ಅಧಿವೇಶನದ ಕೊನೆಯ ವಾರದಲ್ಲಿ ವಾಗ್ವಾದ, ಗದ್ದಲ ಇನ್ನಷ್ಟು ತೀವ್ರಗೊಳ್ಳುವ ಸಾಧ್ಯತೆ ಇದೆ. ಸಂಸತ್ತಿನಲ್ಲಿ ಡಿಸೆಂಬರ್ 13ರಂದು ಆದ ಭದ್ರತಾ ಲೋಪದ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹೇಳಿಕೆ ನೀಡಬೇಕು ಎಂಬ ಬೇಡಿಕೆಗೆ ಇನ್ನಷ್ಟು ಬಲ ನೀಡಲು ವಿರೋಧ ಪಕ್ಷಗಳು ಸಜ್ಜಾಗಿವೆ. ಅಧಿವೇಶನವು ಶುಕ್ರವಾರ ಕೊನೆಗೊಳ್ಳಲಿದೆ.



ಅಮಿತ್ ಶಾ

ಅದರಲ್ಲೂ ಮುಖ್ಯವಾಗಿ, ಪ್ರಧಾನಿ ನರೇಂದ್ರ ಮೋದಿ ಅವರು ಹಿಂದಿ ದಿನ-ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಭದ್ರತಾ ಲೋಪದ ಬಗ್ಗೆ ಮಾತನಾಡಿರುವ ಕಾರಣ, ವಿರೋಧ ಪಕ್ಷಗಳು ಶಾ ಅವರ ಹೇಳಿಕೆಗೆ ಇನ್ನಷ್ಟು ಬಲವಾಗಿ ಆಗ್ರಹಿಸುವ ನಿರೀಕ್ಷೆ ಇದೆ.

ಮೋದಿ ಅವರು ನೀಡಿರುವ ಸಂದರ್ಶನ, ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು 13 ಸಂಸದರನ್ನು ಅಮಾನತು ಮಾಡಿದ ನಿರ್ಧಾರವನ್ನು ಸಮರ್ಥಿಸಿಕೊಂಡು ಲೋಕಸಭಾ ಸದಸ್ಯರಿಗೆ ಬರೆದ ಪತ್ರ ಹಾಗೂ ಶಾ ಅವರು ಸುದ್ದಿವಾಹಿನಿಯೊಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆಡಿರುವ ಕೆಲವು ಮಾತುಗಳು ಸಂಘರ್ಷಕ್ಕೆ ಸಜ್ಜಾಗಿರುವುದರ ಸೂಚನೆ ಎಂಬಂತೆ ವಿರೋಧ ಪಕ್ಷಗಳು ಗ್ರಹಿಸಿವೆ. ಈ ಮೂವರ ಮಾತುಗಳು, ಸದನದಲ್ಲಿ ಹೇಳಿಕೆ ನೀಡುವ ಬಗ್ಗೆ ಮಾತು ಕೊಡಲು ಆಗದು ಎಂಬ ಸೂಚನೆ ನೀಡುತ್ತಿವೆ ಎಂದು ಕೂಡ ವಿರೋಧ ಪಕ್ಷಗಳು ಭಾವಿಸಿವೆ.

ವಿರೋಧ ಪಕ್ಷಗಳ ‘ಇಂಡಿಯಾ’ ಮೈತ್ರಿಕೂಟದ ಸದಸ್ಯರು ಶುಕ್ರವಾರದ ಕಲಾಪದ ಸಂದರ್ಭದಲ್ಲಿ ಎಂಥದ್ದೇ ಪರಿಸ್ಥಿತಿ ಎದುರಾದರೂ ಎದುರಿಸಲು ಸಿದ್ಧ ಎಂಬ ಧೋರಣೆಯನ್ನು ತಳೆದಿದ್ದರು. ಮೈತ್ರಿಕೂಟದ ಹಿರಿಯ ಸದಸ್ಯರು ಕೂಡ ಭಿತ್ತಿಪತ್ರಗಳನ್ನು ಹಿಡಿದುಕೊಂಡು ಲೋಕಸಭೆ ಪ್ರವೇಶಿಸಿದ್ದರು. 13 ಜನ ಸಂಸದರನ್ನು ಅಮಾನತು ಮಾಡಿದ್ದು ಕೂಡ ಅವರು ಭಿತ್ತಿಪತ್ರಗಳನ್ನು ಹಿಡಿದಿದ್ದಕ್ಕೆ ಹಾಗೂ ಶಾ ಅವರ ಹೇಳಿಕೆಗೆ ಆಗ್ರಹಿಸಿ ಸಂಸತ್ತಿನಲ್ಲಿ ಘೋಷಣೆ ಕೂಗಿದ್ದಕ್ಕೆ ಎಂಬುದು ಇಲ್ಲಿ ಉಲ್ಲೇಖಾರ್ಹ.

ಭಾರತೀಯ ದಂಡ ಸಂಹಿತೆ, ಅಪರಾಧ ದಂಡಪ್ರಕ್ರಿಯಾ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಕಾಯ್ದೆಯ ಬದಲಿಗೆ ಜಾರಿಗೆ ತರಲು ಉದ್ದೇಶಿಸಿರುವ ಮೂರು ಪ್ರತ್ಯೇಕ ಮಸೂದೆಗಳಿಗೆ ಲೋಕಸಭೆಯ ಅಂಗೀಕಾರ ಪಡೆಯಲು ಸರ್ಕಾರವು ಸೋಮವಾರ ಮುಂದಾಗುವ ನಿರೀಕ್ಷೆ ಇದೆ. ಹೀಗಾಗಿ, ಸದನದಲ್ಲಿ ವಿರೋಧ ಪಕ್ಷಗಳ ನಡುವೆ ಸಮನ್ವಯ ಯಾವ ರೀತಿಯಲ್ಲಿ ಇರಬೇಕು ಎಂಬ ಕುರಿತು ಚರ್ಚಿಸಲು ವಿರೋಧ ಪಕ್ಷಗಳ ನಾಯಕರು ಸೋಮವಾರ ಬೆಳಿಗ್ಗೆ ಸಭೆ ನಡೆಸಲಿದ್ದಾರೆ.

ಈ ಮಸೂದೆಗಳಲ್ಲಿನ ಹಲವು ಅಂಶಗಳ ಬಗ್ಗೆ ವಿವಿಧ ರಾಜಕೀಯ ಪಕ್ಷಗಳು ಗಂಭೀರ ತಕರಾರುಗಳನ್ನು ಎತ್ತಿವೆ. ವಿರೋಧ ಪಕ್ಷಗಳ ಕೆಲವು ಸಂಸದರನ್ನು ಸದನದಿಂದ ಅಮಾನತು ಮಾಡಿದ ಕ್ರಮವು ವಿರೋಧ ಪಕ್ಷಗಳ ಪಾಲಿಗೆ ಸರಿಕಂಡಿಲ್ಲ. ಅದರಲ್ಲೂ, ಪ್ರಮುಖರಾದ ಕೆ. ಕನಿಮೊಳಿ, ಪಿ.ಆರ್. ನಟರಾಜನ್, ರಾಜ್ಯಸಭಾ ಸದಸ್ಯ ಡೆರೆಕ್ ಒಬ್ರಯಾನ್ ಅವರ ಅಮಾನತು ಮಾಡಲಾಗಿದೆ. ಬಿರ್ಲಾ ಅವರು ಬರೆದಿರುವ ಪತ್ರದಲ್ಲಿ ಯಾವುದೇ ವಿಷಯ ಕುರಿತು ಉತ್ತರ ಇಲ್ಲ. ಬದಲಿಗೆ, ತಮ್ಮ ಸಮರ್ಥನೆ ಇದೆ ಹಾಗೂ ಸರ್ಕಾರವನ್ನು ರಕ್ಷಿಸುವ ಪ್ರಯತ್ನ ಇದೆ ಎಂದು ವಿರೋಧ ಪಕ್ಷಗಳು ಭಾವಿಸಿವೆ.

ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಅವರು ಅಧಿವೇಶನ ನಡೆಯುತ್ತಿರುವ ಹೊತ್ತಿನಲ್ಲಿ ಭದ್ರತಾ ಲೋಪದ ವಿಚಾರದ ಬಗ್ಗೆ ಸಂಸತ್ತಿನ ಹೊರಗಡೆ ಮಾತನಾಡಿದ್ದರೂ, ಸಂಸತ್ತಿನಲ್ಲಿ ಹೇಳಿಕೆ ನೀಡಲು ಅವರು ಒಪ್ಪುತ್ತಿಲ್ಲವಾದ ಕಾರಣ ಸರ್ಕಾರದ ವಿರುದ್ಧ ಕಠಿಣ ನಿಲುವು ತಾಳಬೇಕು ಎಂಬ ಅಭಿಪ್ರಾಯವನ್ನು ಡಿಎಂಕೆ, ತೃಣಮೂಲ ಕಾಂಗ್ರೆಸ್ ಹಾಗೂ ಸಿಪಿಎಂ ಹೊಂದಿವೆ.

ಭದ್ರತಾ ಲೋಪದ ಘಟನೆ ನಡೆದ ಮಾರನೆಯ ದಿನ ಮೋದಿ ಮತ್ತು ಶಾ ಅವರು ಸಂಸತ್ತಿಗೆ ಬಂದಿರಲಿಲ್ಲ. ಮೋದಿ ಅವರು ಸೋಮವಾರ ತಮ್ಮ ಕ್ಷೇತ್ರವಾದ ವಾರಾಣಸಿಯಲ್ಲಿ ಇರಲಿದ್ದಾರೆ.

‘ಭದ್ರತಾ ಲೋಪ: ಹಗುರವಾಗಿ ಪರಿಗಣಿಸಲಾಗದು’

ನವದೆಹಲಿ (ಪಿಟಿಐ): ಸಂಸತ್ತಿನ ಭದ್ರತಾ ಲೋಪವನ್ನು ಹಗುರವಾಗಿ ಪರಿಗಣಿಸಲು ಆಗದು, ಈ ವಿಚಾರವಾಗಿ ಯಾರೂ ಕಚ್ಚಾಟದಲ್ಲಿ ತೊಡಗಬಾರದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.



ಹಿಂದಿ ದಿನಪತ್ರಿಕೆ ‘ದೈನಿಕ್ ಜಾಗರಣ್’ಗೆ ಸಂದರ್ಶನ ನೀಡಿರುವ ಅವರು, ‘ಘಟನೆಯ ಬಗ್ಗೆ ತನಿಖಾ ಸಂಸ್ಥೆಗಳು ತನಿಖೆ ಕೈಗೊಂಡಿವೆ. ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿವೆ. ಈ ಘಟನೆಯ ಹಿಂದಿರುವ ವ್ಯಕ್ತಿಗಳನ್ನು ಪತ್ತೆ ಮಾಡಬೇಕು ಹಾಗೂ ಅವರ ಉದ್ದೇಶ ಏನಿತ್ತು ಎಂಬುದನ್ನು ಕಂಡುಕೊಳ್ಳಬೇಕು’ ಎಂದು ಹೇಳಿದ್ದಾರೆ.

ಭದ್ರತಾ ಲೋಪವು ‘ನೋವಿನ ಸಂಗತಿ ಹಾಗೂ ಕಳವಳಕಾರಿ’ ಎಂದು ಮೋದಿ ಅವರು ಹೇಳಿದ್ದಾಗಿ ಪತ್ರಿಕೆಯು ತಿಳಿಸಿದೆ.

ಮಧ್ಯಪ್ರದೇಶ, ಛತ್ತೀಸಗಢ ಹಾಗೂ ರಾಜಸ್ಥಾನದಲ್ಲಿ ಹೊಸಮುಖಗಳನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಬಿಜೆಪಿ ಆಯ್ಕೆ ಮಾಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಮೋದಿ ಅವರು, ‘ಈ ನಾಯಕರು ಅನುಭವ ಹೊಂದಿದ್ದಾರೆ, ಕಷ್ಟಪಟ್ಟು ಕೆಲಸ ಮಾಡಿದ್ದಾರೆ’ ಎಂದು ಹೇಳಿದ್ದಾರೆ.

ದೇಶದಲ್ಲಿ ಸಮಾಜದ ಮೇಲೆ ಪ್ರಭಾವ ಬೀರುವ ಬಹುದೊಡ್ಡ ವರ್ಗವೊಂದು ಹೊಸ ರೀತಿಯಲ್ಲಿ ಆಲೋಚನೆ ನಡೆಸದೆ ಇರುವುದು, ಸೀಮಿತವಾದ ದೃಷ್ಟಿಕೋನ ಹೊಂದಿರುವುದು ದುರದೃಷ್ಟಕರ ಸಂಗತಿ ಎಂದು ಹೇಳಿದರು.

9ನೇ ಪುಟ ನೋಡಿ



ವಜ್ರ ವಹಿವಾಟು ಕೇಂದ್ರ

ಗುಜರಾತ್‌ನ ಸೂರತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಉದ್ಘಾಟಿಸಿದ ಆಧುನಿಕ ಶೈಲಿಯ ಅಂತರರಾಷ್ಟ್ರೀಯ ವಜ್ರ ಮತ್ತು ಚಿನ್ನ ವಹಿವಾಟು ಕೇಂದ್ರ ‘ಸೂರತ್ ಡೈಮಂಡ್ ಬೌರ್ಸ್’ (ಎಸ್‌ಡಿಬಿ) ಅನ್ನು ಸಾರ್ವಜನಿಕರು ವೀಕ್ಷಿಸಿದರು–ಪಿಟಿಐ ಚಿತ್ರ 9

ಮಕ್ಕಳ ಅಶ್ಲೀಲ ವಿಡಿಯೊ, ಚಿತ್ರಗಳ ನೈಜತೆ ಪತ್ತೆಹಚ್ಚಲು ವಿಫಲ

ಕೃತಕ ಬುದ್ಧಿಮತ್ತೆ ಎಡವಟ್ಟು ಪೊಲೀಸರಿಗೆ ತಲೆನೋವು

• ಚೇತನ್ ಬಿ.ಸಿ.

ಬೆಂಗಳೂರು: ಮಕ್ಕಳಿಗೆ ಸಂಬಂಧಿಸಿದ ಅಶ್ಲೀಲ ವಿಡಿಯೊ ಹಾಗೂ ಫೋಟೊಗಳನ್ನು ಪತ್ತೆಹಚ್ಚಲು ಸಾಮಾಜಿಕ ಮಾಧ್ಯಮ ಕಂಪನಿಗಳು ಅಳವಡಿಸಿಕೊಂಡಿರುವ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ(ಎಐ)ದಲ್ಲಿ ಲೋಪದೋಷಗಳು ಕಂಡುಬಂದಿದ್ದು, ಸುಳ್ಳು ಪ್ರಕರಣಗಳು ಹೆಚ್ಚುತ್ತಿವೆ.

ವಿಡಿಯೊ ಹಾಗೂ ಚಿತ್ರಗಳ ನೈಜತೆ ಪತ್ತೆಹಚ್ಚಲು ಎ.ಐ ತಂತ್ರಜ್ಞಾನವು ವಿಫಲವಾಗಿದ್ದು, ಸಿಐಡಿ ಪೊಲೀಸರಿಗೂ ತಲೆನೋವಾಗಿದೆ. ಈ ಪ್ರಕರಣದಲ್ಲಿ ತನಿಖೆ ನಡೆಸುವ ಪೊಲೀಸರ ಸಮಯ ಸಹ ವ್ಯರ್ಥವಾಗುತ್ತಿದೆ. ರಾಜ್ಯದಲ್ಲಿ ಸಾವಿರಾರು ಸುಳ್ಳು ಪ್ರಕರಣಗಳು ಪತ್ತೆಯಾಗುತ್ತಿವೆ.

ಸಣ್ಣ ಮಕ್ಕಳು ಮನೆಯ ಹೊರಭಾಗದಲ್ಲಿ ನಗ್ನವಾಗಿ ಆಟವಾಡುತ್ತಿರುವ ಅಥವಾ ಸಮುದ್ರ ತೀರದಲ್ಲಿ ಸ್ನಾನ ಮಾಡುವ ವಿಡಿಯೊ ಹಾಗೂ ಫೋಟೊಗಳನ್ನು ಈ ತಂತ್ರಜ್ಞಾನವು ಅಶ್ಲೀಲವೆಂದೇ ಪರಿಗಣಿಸುತ್ತಿದೆ ಎಂದು ತನಿಖಾಧಿಕಾರಿಗಳು ಹೇಳುತ್ತಾರೆ.

ವರ್ಷ	ಎ.ಐ ಆಧರಿತ ದೂರುಗಳು	ನೈಜ ಪ್ರಕರಣಗಳು
2020	8,396	91
2021	2,937	37
2022	38,945	518
2023	1,89,069	174

ಮಕ್ಕಳ ಅಶ್ಲೀಲ ವಿಡಿಯೊ ಹಾಗೂ ಚಿತ್ರಕ್ಕೆ ಸಂಬಂಧಿಸಿದಂತೆ 2019–2020 ಹಾಗೂ 2022–23ರ ನಡುವೆ ಎನ್‌ಸಿಆರ್‌ಬಿ ಮೂಲಕ ರಾಜ್ಯ ಸಿಐಡಿ ವಿಭಾಗಕ್ಕೆ 2.29 ಲಕ್ಷ ಪ್ರಕರಣಗಳು ಬಂದಿದ್ದವು. ಆ ಪೈಕಿ 820 ಮಾತ್ರ ನೈಜ ಪ್ರಕರಣಗಳು ಆಗಿದ್ದವು ಎಂದು ಮೂಲಗಳು ಹೇಳಿವೆ.

ಅಮೆರಿಕದ ಸ್ವಯಂ ಸೇವಾ ಸಂಸ್ಥೆಯು ಕೇಂದ್ರ ಗೃಹ ಇಲಾಖೆಯೊಂದಿಗೆ ಮಕ್ಕಳ ಮೇಲಿನ ದೌರ್ಜನ್ಯ, ಸಾಮಾಜಿಕ ಮಾಧ್ಯಮಗಳಲ್ಲಿನ ಅಶ್ಲೀಲ ವಿಡಿಯೊ ಹಾಗೂ ಚಿತ್ರಕ್ಕೆ ಸಂಬಂಧಿಸಿದ ದತ್ತಾಂಶ ಹಂಚಿಕೊಂಡಿತ್ತು. ಈ ಮಾಹಿತಿಯನ್ನು ಕೇಂದ್ರವು ರಾಜ್ಯಕ್ಕೆ ರವಾನಿಸಿತ್ತು.

ರಾಜ್ಯದ ಸಿಐಡಿಯಲ್ಲಿ ಮಕ್ಕಳ ಅಶ್ಲೀಲ ವಿಡಿಯೊ ಪತ್ತೆಗೆ ಪ್ರತ್ಯೇಕ ವಿಭಾಗವಿದೆ. ಈ ವಿಭಾಗವು 2022–23ರಲ್ಲಿ ಸ್ವೀಕರಿಸಲಾದ 1.89 ಲಕ್ಷ ಪ್ರಕರಣಗಳಲ್ಲಿ 174 ಮಾತ್ರ ನೈಜವಾಗಿವೆ. ವಿಡಿಯೊ ನೈಜತೆ ಪತ್ತೆಮಾಡಲು ಎ.ಐ ತಂತ್ರಜ್ಞಾನವನ್ನು ಮತ್ತಷ್ಟು ಉನ್ನತೀಕರಿಸಬೇಕಿದೆ ಎಂದು ತನಿಖಾಧಿಕಾರಿಗಳು ಹೇಳುತ್ತಾರೆ.

ಬಹುತೇಕ ಪ್ರಕರಣದಲ್ಲಿ ಎಐ ತಂತ್ರಜ್ಞಾನವು ತಪ್ಪು ಮಾಹಿತಿ ನೀಡುತ್ತಿರುವ ಪರಿಣಾಮ ನೈಜವಾದ ಪ್ರಕರಣಗಳನ್ನು ಪತ್ತೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಅಧಿಕಾರಿಯೊಬ್ಬರು ಹೇಳಿದರು.

‘ಎಐ ತಂತ್ರಜ್ಞಾನಕ್ಕೆ ನಿಖರವಾದ ಹೆಚ್ಚು ದತ್ತಾಂಶ ನೀಡಬೇಕು. ಸರಿಯಾದ ದತ್ತಾಂಶ ನೀಡದಿದ್ದರೆ ಅದು ಪರಿಣಾಮಕಾರಿ ಆಗಿರುವುದಿಲ್ಲ. ಎಐ ಮೇಲೆ ಇನ್ನೂ ಕೆಲಸಗಳು ನಡೆಯುತ್ತಿವೆ’ ಎಂದು ಧಾರವಾಡದ ಐಐಐಟಿಯ ಪ್ರೊ.ಉತ್ಕರ್ಷ್ ಖೈರೆ ಹೇಳುತ್ತಾರೆ.

ಗ್ರಾಮೀಣ ಭಾಗದಲ್ಲಿ ಪೋಷಕರು ಪುಟ್ಟ ಮಕ್ಕಳಿಗೆ ಬಟ್ಟೆ ಹಾಕಿರುವುದಿಲ್ಲ. ನಗ್ನವಾಗಿಯೇ ಮಕ್ಕಳು ಆಟವಾಡು-ತ್ತಿರುವ ಫೋಟೊಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಳ್ಳುತ್ತಾರೆ. ಅದು ಅವರ ಸಂಸ್ಕೃತಿಯಲ್ಲಿ ಅಪರಾಧ ಅಲ್ಲದಿದ್ದರೂ ಈ ತಂತ್ರಜ್ಞಾನವು ಅಶ್ಲೀಲವೆಂದು ಹೇಳುತ್ತಿದೆ ಎಂದು ತನಿಖಾಧಿಕಾರಿಗಳು ಹೇಳುತ್ತಾರೆ.





ಮಲದ ಗುಂಡಿ ಸ್ವಚ್ಛತೆಗೆ ಮಕ್ಕಳ ಬಳಕೆ • ‘ಪ್ರಜಾವಾಣಿ’ ವರದಿ ಉಲ್ಲೇಖ

ಪ್ರಾಂಶುಪಾಲೆ, ಶಿಕ್ಷಕ ಬಂಧನ

ಪ್ರಜಾವಾಣಿ ವಾರ್ತೆ

ಕೋಲಾರ: ಮಾಲೂರು ತಾಲ್ಲೂಕಿನ ಯಲುವಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳನ್ನು ಮಲದ ಗುಂಡಿಯೊಳಗೆ ಇಳಿಸಿ ಸ್ವಚ್ಛಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಲೆಯ ಪ್ರಾಂಶುಪಾಲೆ ಭಾರತಮ್ಮ ಮತ್ತು ಚಿತ್ರಕಲಾ ಸಹ ಶಿಕ್ಷಕ ಮುನಿಯಪ್ಪ ಅವರನ್ನು ಭಾನುವಾರ ರಾತ್ರಿ ಮಾಸ್ತಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಈ ಬೆಳವಣಿಗೆ ನಂತರ ಶಾಲೆಯ ಮೂವರು ಸಿಬ್ಬಂದಿ ತಲೆಮರೆಸಿಕೊಂಡಿದ್ದಾರೆ.



ಭಾರತಮ್ಮ



ಮುನಿಯಪ್ಪ

ವಸತಿ ಶಾಲೆಯ ಪ್ರಾಂಶುಪಾಲೆ, ಚಿತ್ರಕಲಾ ಸಹ ಶಿಕ್ಷಕ, ಪ್ರಭಾರ ವಾರ್ಡನ್ ಮಂಜುನಾಥ್, ಅತಿಥಿ ಶಿಕ್ಷಕ ಅಭಿಷೇಕ್, ಸ್ವಚ್ಛತಾ ಸಿಬ್ಬಂದಿ ಕಲಾವತಿ ವಿರುದ್ಧ ಪ್ರಕರಣ ದಾಖಲಾಗಿದೆ. ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಆರ್.ಶ್ರೀನಿವಾಸ್ ಹಾಗೂ ಸಹಾಯಕ ನಿರ್ದೇಶಕ ಶಿವಕುಮಾರ್ ಅವರು ದೂರು ನೀಡಿದ್ದರು.

ಈ ಪೈಕಿ ನಾಲ್ವರ ವಿರುದ್ಧ ದೌರ್ಜನ್ಯ ಪ್ರಕರಣ ಮತ್ತು ಅನುಮತಿ ಇಲ್ಲದೇ ಮಕ್ಕಳ ವಿಡಿಯೊ ಸೆರೆ ಹಿಡಿದು ಹಂಚಿಕೊಂಡಿರುವುದಕ್ಕೆ ಒಬ್ಬರ ವಿರುದ್ಧ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ.

> **ಜನರನ್ನು ಮಲದ ಗುಂಡಿಗೆ ಇಳಿಸಿ, ಸ್ವಚ್ಛತೆ ಮಾಡಿಸುವುದನ್ನು ಬಸವಲಿಂಗಪ್ಪ ನಿಷೇಧಿಸಿದ್ದರು. ವಸತಿ ಶಾಲೆಯಲ್ಲಿ ಮಲದ ಗುಂಡಿ ಸ್ವಚ್ಛತೆಗೆ ಶಾಲಾ ಮಕ್ಕಳನ್ನೇ ಬಳಸಿಕೊಂಡದ್ದು ಖಂಡನೀಯ**
> **ಡಾ.ಜಿ.ಪರಮೇಶ್ವರ,** ಗೃಹ ಸಚಿವ

> **‘ಪ್ರಜಾವಾಣಿ’ ವರದಿ ಗಮನಿಸಿದ್ದು, ಇದೊಂದು ಗಂಭೀರವಾದ ವಿಷಯ. ವಸತಿ ಶಾಲೆಯ ಪ್ರಾಂಶುಪಾಲರು ಹಾಗೂ ಶಿಕ್ಷಕರು ಭಾರಿ ಲೋಪ ಎಸಗಿದ್ದಾರೆ. ತನಿಖೆಗೆ ಆದೇಶಿಸಿದ್ದೇನೆ**
> **ಡಾ.ಎಚ್.ಸಿ.ಮಹದೇವಪ್ಪ,** ಸಮಾಜ ಕಲ್ಯಾಣ ಸಚಿವ

ಇದಕ್ಕೂ ಮೊದಲು ಭಾರತಮ್ಮ, ಮಂಜುನಾಥ್ ಹಾಗೂ ಮುನಿಯಪ್ಪ ಅವರನ್ನು ಇಲಾಖೆಯು ಅಮಾನತುಗೊಳಿಸಿತ್ತು. ಅಭಿಷೇಕ್ ಹಾಗೂ ಕಲಾವತಿ ಅವರಿಗೆ ಕೆಲಸಕ್ಕೆ ಹಾಜರಾಗದಂತೆ ಸೂಚಿಸಲಾಗಿತ್ತು. ಮೂವರ ಅಮಾನತು ಆದೇಶದಲ್ಲಿ ‘ಪ್ರಜಾವಾಣಿ’ ವರದಿ ಉಲ್ಲೇಖಿಸಲಾಗಿದೆ.

ಮಲದ ಗುಂಡಿ ಸ್ವಚ್ಛಗೊಳಿಸಲು ಮಕ್ಕಳನ್ನು ಇಳಿಸಿದ್ದನ್ನು ‘ಪ್ರಜಾವಾಣಿ’ ಭಾನುವಾರ ಮುಖಪುಟದಲ್ಲಿ ವರದಿ ಮಾಡಿತ್ತು. ಇದಕ್ಕೆ ಸ್ಪಂದಿಸಿದ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಪ್ರಕರಣದ ತನಿಖೆ ನಡೆಸಿ, ವರದಿ ನೀಡಲು ಅಧಿಕಾರಿಗಳಿಗೆ ಸೂಚಿಸಿದ್ದರು.

ಯಲುವಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಬೆಳಿಗ್ಗೆಯಿಂದ ಸಂಜೆಯವರೆಗೂ ನ್ಯಾಯಾಧೀಶರು, ಹಿರಿಯ ಅಧಿಕಾರಿಗಳು, ಪೊಲೀಸರು, ಸಾಮಾಜಿಕ ಹೋರಾಟಗಾರರು, ದಲಿತ ಸಂಘಟನೆಯ ಪ್ರತಿನಿಧಿಗಳು ಮತ್ತು ಪೋಷಕರು ಭೇಟಿ ನೀಡುತ್ತಲೇ ಇದ್ದರು.

9ನೇ ಪುಟ ನೋಡಿ

ಅತ್ಯಾಚಾರ ಆರೋಪ: ಸಜ್ಜನ್ ಜಿಂದಾಲ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಮುಂಬೈ: ಜೆಎಸ್‌ಡಬ್ಲ್ಯು ಉದ್ಯಮ ಸಮೂಹದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಸಜ್ಜನ್ ಜಿಂದಾಲ್ ವಿರುದ್ಧ ಮಹಿಳೆಯೊಬ್ಬರು ಅತ್ಯಾಚಾರ ಆರೋಪದ ಅಡಿ ದೂರು ನೀಡಿದ್ದಾರೆ. ಇಲ್ಲಿನ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್ (ಬಿಕೆಸಿ) ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಮಹಿಳೆಯ ಆರೋಪವನ್ನು ಜಿಂದಾಲ್ ಅಲ್ಲಗಳೆದಿದ್ದಾರೆ.



ಸಜ್ಜನ್ ಜಿಂದಾಲ್

ದೂರು ನೀಡಿರುವ 30 ವರ್ಷ ವಯಸ್ಸಿನ ಮಹಿಳೆ ವೃತ್ತಿಯಲ್ಲಿ ವೈದ್ಯೆ, ನಟಿ ಹಾಗೂ ಮಾಡೆಲ್ ಆಗಿದ್ದಾರೆ. ಇವರು ಮುಂಬೈನವರು. ಕೆಲವು ಸಿನಿಮಾಗಳಲ್ಲೂ ನಟಿಸಿದ್ದಾರೆ.

9ನೇ ಪುಟ ನೋಡಿ

ಬೆತ್ತಲೆ ಪ್ರಕರಣ: ಸಿಐಡಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಹೊಸ ವಂಟಮೂರಿಯಲ್ಲಿ ಮಹಿಳೆಯನ್ನು ಬೆತ್ತಲೆಗೊಳಿಸಿ, ಮೆರವಣಿಗೆ ಮಾಡಿ, ಹಲ್ಲೆ ಮಾಡಿದ್ದ ಪ್ರಕರಣದ ತನಿಖೆಯನ್ನು ರಾಜ್ಯ ಸರ್ಕಾರ ಸಿಐಡಿಗೆ ಹಸ್ತಾಂತರಿಸಿದೆ.

ರಾಜ್ಯ ಕಾನೂನು ಸುವ್ಯವಸ್ಥೆ ಎಡಿಜಿಪಿ ಆರ್.ಹಿತೇಂದ್ರ ಅವರು ಸಿಐಡಿ ಡಿಜಿಪಿ ಅವರಿಗೆ ಶನಿವಾರ ಪತ್ರ ಬರೆದಿದ್ದಾರೆ. ಸಿಐಡಿ ಅಧಿಕಾರಿಗಳು ಕೈಗೊಳ್ಳುವ ತನಿಖೆಗೆ ಬೆಳಗಾವಿ ನಗರ ಪೊಲೀಸ್ ಆಯುಕ್ತರು ಮಾಹಿತಿ ನೀಡಬೇಕು ಎಂದೂ ನಿರ್ದೇಶನ ನೀಡಿದ್ದಾರೆ.

ಮಹಿಳೆ ಮೇಲೆ ದೌರ್ಜನ್ಯ ಎಸಗಿದ್ದ ಪ್ರಕರಣ ರಾಷ್ಟ್ರ ಮಟ್ಟದಲ್ಲಿ ತೀವ್ರ ಖಂಡನೆಗೆ ಗುರಿಯಾಗಿದ್ದು, ಕರ್ನಾಟಕ ಹೈಕೋರ್ಟ್ ಕೂಡ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

ರಾಷ್ಟ್ರೀಯ ಮಹಿಳಾ ಆಯೋಗ, ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗ ಹಾಗೂ ಬಿಜೆಪಿಯ ಸತ್ಯ ಶೋಧನಾ ತಂಡದ ಸದಸ್ಯರು ಶನಿವಾರ ಭೇಟಿ ನೀಡಿದ್ದರು. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸಿಬ್ಬಂದಿ ಕೂಡ ಭಾನುವಾರ ಸ್ಥಳಕ್ಕೆ ಬಂದು ಪರಿಶೀಲಿಸಿದರು. ಆಯೋಗವು ಡಿ.18 ಅಥವಾ 19ರಂದು ಭೇಟಿ ನೀಡಲಿದೆ ಎಂದು ಮೂಲಗಳು ತಿಳಿಸಿವೆ.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಪ್ರಕರಣವನ್ನು ಸಿಐಡಿಗೆ ವಹಿಸಲು ನಿರ್ಧರಿಸಿದೆ. ಸೋಮವಾರ ಸಿಐಡಿ ಅಧಿಕಾರಿಗಳ ತಂಡ ಪರಿಶೀಲನೆಗೆ ಆಗಮಿಸುವ ಸಾಧ್ಯತೆ ಇದೆ ಎಂದಿವೆ.

ಪ್ರೇಮಿಗಳಿಬ್ಬರು ಮನೆ ಬಿಟ್ಟು ಹೋಗಿದ್ದ ಕಾರಣಕ್ಕೆ, ಯುವಕನ ತಾಯಿಯ ಮೇಲೆ ದೌರ್ಜನ್ಯ ಎಸಗಲಾಗಿದೆ. ವಾರದ ಹಿಂದೆ ಘಟನೆ ನಡೆದಿದ್ದು, ಈ ಸಂಬಂಧ ಪೊಲೀಸರು ಈಗಾಗಲೇ 11 ಆರೋಪಿಗಳನ್ನು ಬಂಧಿಸಿದ್ದಾರೆ.

ನದಿಯಲ್ಲಿ ಮುಳುಗಿ ಒಂದೇ ಕುಟುಂಬದ ಐವರ ಸಾವು

ಪ್ರಜಾವಾಣಿ ವಾರ್ತೆ

ಶಿರಸಿ: ತಾಲ್ಲೂಕಿನ ಭೈರುಂಬೆ ಸಮೀಪ ಭೂತನಗುಂಡಿಯಲ್ಲಿ ಶಾಲ್ಮಲಾ ನದಿಪಾತ್ರಕ್ಕೆ ಪಿಕ್‌ನಿಕ್‌ಗೆ ಹೋಗಿದ್ದ ನಗರದ ರಾಮನಬೈಲ್ ಹಾಗೂ ಕಸ್ತೂರಬಾನಗರದ ಒಂದೇ ಕುಟುಂಬದ ಐವರು ನೀರಿನಲ್ಲಿ ಮುಳುಗಿ ಭಾನುವಾರ ಮೃತಪಟ್ಟಿದ್ದಾರೆ.

ಮಹಮದ್ ಸಲೀಂ (44), ಉಮರ್ ಸಿದ್ದೀಕ್ (14), ನಬಿಲ್ ಶೇಖ್ (22), ನಾದಿಯಾ ಶೇಖ್ (22), ಮಿಸಬಾ ಅಹ್ಮದ್ (21) ನೀರು ಪಾಲಾದವರು. ಸ್ನಾನಕ್ಕೆ ತೆರಳಿದ್ದ ಇಬ್ಬರು ನೀರಿನ ಸೆಳೆತಕ್ಕೆ ಸಿಕ್ಕಿದ್ದು, ಅವರ ರಕ್ಷಣೆಗೆ ಧಾವಿಸಿದ ಇತರ ಮೂವರು ನೀರುಪಾಲಾದರು.

‘ನುರಿತ ಈಜುಗಾರರ ನೆರವಿನಲ್ಲಿ ಮೃತದೇಹಗಳಿಗಾಗಿ ಹುಡುಕಾಟ ನಡೆದಿದ್ದು, ಸಂಜೆಯ ವೇಳೆಗೆ ಐವರ ಮೃತದೇಹಗಳನ್ನು ಹೊರಕ್ಕೆ ತೆಗೆಯಲಾಯಿತು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಕುಟುಂಬದ 20 ಸದಸ್ಯರು ಸೇರಿ ಪಿಕ್‌ನಿಕ್‌ಗಾಗಿ ಭೂತನ ಗುಂಡಿಗೆ ತೆರಳಿದ್ದರು. ಈ ವೇಳೆ ನಾದಿಯಾ ಶೇಖ್, ನಬಿಲ್ ಶೇಖ್ ಆಳ ಪ್ರದೇಶದಲ್ಲಿ ನೀರಿನ ಸೆಳೆತಕ್ಕೆ ಸಿಕ್ಕಿದರು. ಹತ್ತಿರವೇ ಇದ್ದ ಸಲೀಂ, ಉಮರ್ ಹಾಗೂ ಮಿಸಬಾ ಅವರ ರಕ್ಷಣೆಗಾಗಿ ನೀರಿನತ್ತ ಧಾವಿಸಿದ್ದರು. ಯಾರಿಗೂ ಈಜು ಬರುತ್ತಿರಲಿಲ್ಲ. ಎಲ್ಲರೂ ಆಳ ಪ್ರದೇಶದಲ್ಲಿ ಮುಳುಗಿದರು’ ಎಂದು ಪ್ರತ್ಯಕ್ಷದರ್ಶಿಗಳಾದ ಕುಟುಂಬಸ್ಥರು ತಿಳಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅಭಿಮಾನಿಗಳ ಆಗ್ರಹ

ವಿಷ್ಣುವರ್ಧನ್ ಪುಣ್ಯಭೂಮಿಗಾಗಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಟ, ದಿವಂಗತ ವಿಷ್ಣುವರ್ಧನ್ ಅವರ ಪುಣ್ಯಭೂಮಿ ಅಭಿವೃದ್ಧಿಪಡಿಸಬೇಕು’ ಎಂದು ಒತ್ತಾಯಿಸಿ ಅವರ ಅಭಿಮಾನಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಬೃಹತ್ ಪ್ರತಿಭಟನೆ ನಡೆಸಿದರು.

ಡಾ. ವಿಷ್ಣುವರ್ಧನ್ ಅಭಿಮಾನಿ ಸಂಘಗಳ ಒಕ್ಕೂಟದ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ನಗರದ ಹಲವು ಪ್ರದೇಶಗಳು ಹಾಗೂ ಹೊರ ಜಿಲ್ಲೆಗಳ ಅಭಿಮಾನಿಗಳು ಪಾಲ್ಗೊಂಡಿದ್ದರು. ವಿಷ್ಣುವರ್ಧನ್ ಅವರ ಭಾವಚಿತ್ರ ಹಾಗೂ ಕನ್ನಡ ಬಾವುಟ ಹಿಡಿದು ಬೇಡಿಕೆ ಈಡೇರಿಕೆಗಾಗಿ ಘೋಷಣೆ ಕೂಗಿದರು.



ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಅಭಿಮಾನಿಗಳು ಡಾ. ವಿಷ್ಣುವರ್ಧನ್ ಅವರ ಭಾವಚಿತ್ರ ಹಾಗೂ ಬಾವುಟಗಳನ್ನು ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

ಪ್ರತಿಭಟನೆ ಅಂಗವಾಗಿ ಸ್ವಾತಂತ್ರ್ಯ ಉದ್ಯಾನದ ಸುತ್ತಮುತ್ತಲಿನ ಸ್ಥಳಗಳಲ್ಲಿ ಬ್ಯಾನರ್‌ಗಳನ್ನು ಪ್ರದರ್ಶಿಸಲಾಗಿತ್ತು. ಅಲ್ಲಲ್ಲ ವಿಷ್ಣುವರ್ಧನ್ ಅವರ ಭಾವಚಿತ್ರಕ್ಕೆ ಹೂವಿನ ಅಲಂಕಾರ ಮಾಡಲಾಗಿತ್ತು.

ಅಭಿಮಾನಿಗಳು, ವಿಷ್ಣುವರ್ಧನ್ ಅವರ ಭಾವಚಿತ್ರಕ್ಕೆ ನಮಸ್ಕರಿಸಿ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿದರು. ‘ಮೇರುನಟನಿಗೆ ಪುಣ್ಯ ಭೂಮಿ ಏಕಿಲ್ಲ? ತಾರತಮ್ಯ ಏಕೆ? ಪುಣ್ಯಭೂಮಿ ವಿಚಾರದಲ್ಲಿ ಸರ್ಕಾರದ ಮೌನವೇಕೆ? ಎಂಬಿತ್ಯಾದಿ ಘೋಷಣೆಯುಳ್ಳ ಫಲಕಗಳನ್ನು ಪ್ರತಿಭಟನಕಾರರು ಪ್ರದರ್ಶಿಸಿದರು.

9ನೇ ಪುಟ ನೋಡಿ



ಇಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ರಾಜರಾಜೇಶ್ವರಿನಗರ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಸಮಿತಿ, ಸಂಸದ ಡಿ.ಕೆ.ಸುರೇಶ್ ಮತ್ತು ಕೆಪಿಸಿಸಿ ವಕ್ತಾರೆ ಎಚ್.ಕುಸುಮಾ ಅವರ ಅಭಿಮಾನಿ ಬಳಗದ ಸಹಯೋಗದಲ್ಲಿ ನಾಗರಬಾವಿಯ ಬಿಡಿಎ ಕಾಂಪ್ಲೆಕ್ಸ್ ಆವರಣದಲ್ಲಿ ಸೋಮವಾರ ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 8 ರಿಂದ ಮಧ್ಯಾಹ್ನ 3ರವರೆಗೆ ನಡೆಯುವ ಶಿಬಿರದಲ್ಲಿ ವಿವಿಧ ಕಾಯಿಲೆಗಳ ತಪಾಸಣೆ, ಚಿಕಿತ್ಸೆ, ಔಷಧ ನೀಡಲಾಗುತ್ತದೆ. ಉಚಿತ ರಕ್ತದಾನ ಶಿಬಿರ, ನೇತ್ರ ತಪಾಸಣೆ, ಅಗತ್ಯವಿರುವವರಿಗೆ ಉಚಿತ ಕನ್ನಡಕ ವಿತರಿಸಲಾಗುತ್ತದೆ. ತಜ್ಞ ವೈದ್ಯರು ತಪಾಸಣೆ ಮಾಡಿ ಚಿಕಿತ್ಸೆ ನೀಡುವರು ಎಂದು ರಾಜರಾಜೇಶ್ವರಿನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಂಪುರ ನಾಗೇಶ್ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9740022329, 9731015032

3 ವರ್ಷಗಳಲ್ಲಿ ಭಾರತ ಜಗತ್ತಿನ ಮೂರನೇ ಆರ್ಥಿಕ ಶಕ್ತಿ: ಪ್ರಲ್ಹಾದ ಜೋಶಿ

‘ಮುಂದಿನ ವರ್ಷವೇ 4ನೇ ಸ್ಥಾನಕ್ಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು:10 ವರ್ಷಗಳ ಹಿಂದೆ ಜಗತ್ತಿನ ದುರ್ಬಲ ಆರ್ಥಿಕ ರಾಷ್ಟ್ರ ಎಂದು ಕರೆಯಲ್ಪಡುತ್ತಿದ್ದ ಭಾರತ ಈಗ ಜಗತ್ತಿನ 5ನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರ ಹೊಮ್ಮಿದ್ದು, ಮುಂದಿನ ವರ್ಷ ಇದೇ ವೇಳೆಗೆ ನಾಲ್ಕನೇ ಸ್ಥಾನಕ್ಕೆ ಏರುವುದಾಗಿ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ವಿಶ್ವಾಸ ವ್ಯಕ್ತಪಡಿಸಿ-ದ್ದಾರೆ.

ಶಿವಾಜಿನಗರ ವಿಧಾನಸಭಾ ಕ್ಷೇತ್ರದ ವಸಂತನಗರ ವಾರ್ಡ್‌ನಲ್ಲಿ ಭಾನುವಾರ ಕೇಂದ್ರ ಸರ್ಕಾರದ ಜನಪರ ಯೋಜನೆಗಳ ಕುರಿತು ಆರ್‌ಸಿ ಡಿಜಿಟಲ್ ವಾಹನದ ಮೂಲಕ ಸಾರ್ವಜನಿಕರಿಗೆ ಮಾಹಿತಿ ನೀಡಿದರು.

‘ಜಗತ್ತಿನಲ್ಲಿ ಅಭಿವೃದ್ಧಿ ಹೊಂದಿದ, ಅಭಿವೃದ್ಧಿ ಹೊಂದುತ್ತಿರುವ ಮತ್ತು ಅಭಿವೃದ್ಧಿ ಹೊಂದದೇ ಇರುವ ಹಿಂದುಳಿದ ರಾಷ್ಟ್ರಗಳು ಎಂಬುದಾಗಿ ವಿಭಾಗಿಸಲಾಗಿದೆ. ಇದು ಬಹಳ ಹಳೆಯ ಪರಿಭಾಷೆ. 10 ವರ್ಷಗಳಿಂದ ಮೋದಿಯವರ ನೇತೃತ್ವದಲ್ಲಿ ಅಭಿವೃದ್ಧಿ ಹೊಂದುವತ್ತ ದೊಡ್ಡ ಹೆಜ್ಜೆಯನ್ನು ಇಡಲಾಗಿದೆ. ಮುಂದಿನ 10 ವರ್ಷವೂ ನಾವು ಕೆಲಸ ಮಾಡುತ್ತಲೇ ಇರುತ್ತೇವೆ’ ಎಂದು ಹೇಳಿದರು.

‘2009-14 ನಡುವಿನ ಅವಧಿಯಲ್ಲಿ ನಾವು ವಿರೋಧಪಕ್ಷದಲ್ಲಿದ್ದೆವು. ಆಗ ಸಂಸತ್ತಿನಲ್ಲಿ ಭಾರತದ ಆರ್ಥಿಕ ಸ್ಥಿತಿಯು ಗಂಭೀರವಾಗಿರುವುದು, ಭಾರತದ ಬ್ಯಾಂಕ್‌ಗಳ ಎನ್‌ಪಿಎ ಪರಿಣಾಮದ ಚರ್ಚೆ ನಡೆಯುತ್ತಿತ್ತು’ ಎಂದರು.

‘ಈಗ ನಾವು ಇಂಗ್ಲೆಂಡ್ ಅನ್ನು ಹಿಂದಕ್ಕೆ ಹಾಕಿ ಐದನೇ ಸ್ಥಾನ ಪಡೆದಿದ್ದೇವೆ. ಮುಂದಿನ ಮೂರು ವರ್ಷಗಳಲ್ಲಿ ಜಗತ್ತಿನ 3ನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರ ಹೊಮ್ಮಬೇಕು ಎಂಬುದು ಪ್ರಧಾನಿ ಮೋದಿಯವರ ಸಂಕಲ್ಪವಾಗಿದೆ. ಅಮೆರಿಕ, ಚೀನಾ ಬಳಿಕ ನಮ್ಮ ಸ್ಥಾನ ಬರಲಿದೆ’ ಎಂದು ಜೋಶಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಸದ ಪಿ.ಸಿ. ಮೋಹನ್, ಬಿಜೆಪಿ ಮುಖಂಡರಾದ ಮಂಜುನಾಥ್, ಎಂ.ಚಂದ್ರು, ಸಂಪತ್‌ಕುಮಾರ್, ಎಂ.ಗೋಪಿ, ಗುಣಶೇಖರ್, ಬಾಲಾಜಿ ಮಣಿ ಇತರರು ಇದ್ದರು.


ಶಿವಾಜಿನಗರ ವಿಧಾನಸಭಾ ಕ್ಷೇತ್ರದ ವಸಂತನಗರ ವಾರ್ಡ್‌ನಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಕೇಂದ್ರ ಸರ್ಕಾರದ ಜನಪರ ಯೋಜನೆಗಳ ಮಾಹಿತಿಯ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಸಂಸದ ಪಿ.ಸಿ.ಮೋಹನ್ ಮತ್ತು ಬಿಜೆಪಿ ಮುಖಂಡರು ಇದ್ದರು

ಇದು ಮೋದಿ ಗ್ಯಾರಂಟಿ ವಾಹನ..

‘ಕೇಂದ್ರದ ವಿವಿಧ ಯೋಜನೆಗಳ ಲಾಭವನ್ನು ಸಾರ್ವಜನಿಕರಿಗೆ ತಿಳಿಸಲು ಈ ವಾಹನಗಳು ದೇಶದ ಎಲ್ಲ ಕಡೆಗಳಲ್ಲಿ ಓಡಾಡುತ್ತಿವೆ. ಇದನ್ನು ಮೋದಿ ಗ್ಯಾರಂಟಿ ವಾಹನ ಎಂದೇ ಕರೆಯಲಾಗುತ್ತಿದೆ’ ಎಂದು ಜೋಶಿ ತಿಳಿಸಿದರು.

‘₹25 ಲಕ್ಷಕ್ಕಿಂತ ಕಡಿಮೆ ಮೊತ್ತದಲ್ಲಿ ಮನೆ ನಿರ್ಮಿಸುವ ಮಧ್ಯಮ ವರ್ಗದವರಿಗೆ ಶೇ 4ರ ಬಡ್ಡಿ ದರದಲ್ಲಿ ಸಾಲ ಸಿಗುತ್ತಿದೆ’ ಎಂದರು.

ಕೊಡಗು ಜಿಲ್ಲಾಡಳಿತಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದಲ್ಲಿ ಕೋವಿಡ್ ರೂಪಾಂತರಿ ಜೆಎನ್-1 ತಳಿ ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಗಡಿ ಜಿಲ್ಲೆ ಕೊಡಗಿನಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಜಿಲ್ಲಾಡಳಿತಕ್ಕೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜು ಸೂಚನೆ ನೀಡಿದ್ದಾರೆ.

ಕೊಡಗು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಆರೋಗ್ಯ ಅಧಿಕಾರಿ ಜೊತೆ ದೂರವಾಣಿ ಮೂಲಕ ಮಾತನಾಡಿದ ಸಚಿವರು, ಪ್ರಸ್ತುತ ಪರಿಸ್ಥಿತಿಯ ಮಾಹಿತಿ ಪಡೆದುಕೊಂಡರು.

ಜಿಲ್ಲೆಯ ಗಡಿಗೆ ಹೊಂದಿಕೊಂಡಿರುವ ರಾಜ್ಯದಲ್ಲಿ ರೂಪಾಂತರಿ ತಳಿ ಪತ್ತೆ ಆಗಿರುವುದರಿಂದ ಎಲ್ಲ ರೀತಿಯ ಪರಿಸ್ಥಿತಿಗಳನ್ನು ನಿಭಾಯಿಸಲು ಆರೋಗ್ಯ ಇಲಾಖೆ ಸಜ್ಜಾಗಿರಬೇಕು. ಜನ ಸಾಮಾನ್ಯರಿಗೆ ಯಾವುದೇ ತೊಂದರೆ ಆಗದಂತೆ ಕ್ರಮಗಳನ್ನು ಕೈಗೊಳ್ಳಬೇಕು. ಕೋವಿಡ್ ಪ್ರಕರಣಗಳು ಕಂಡುಬಂದರೆ ನಿಯಮಾನುಸಾರ ಅಗತ್ಯ ಚಿಕಿತ್ಸೆ, ಇತರ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.


ನಗರದಲ್ಲಿ ಭಾನುವಾರ ನಡೆದ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಕಾರ್ಯಕ್ರಮದಲ್ಲಿ ಪಕ್ಷದ ಮುಖಂಡರು ಹಾಗೂ ಮಹಿಳಾ ಘಟಕದ ಪದಾಧಿಕಾರಿಗಳು ಪಾಲ್ಗೊಂಡಿದ್ದರು

ಪದಾಧಿಕಾರಿಗಳ ಪದಗ್ರಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಭೆ-ಸಮಾರಂಭಗಳ ಮೂಲಕ ಪಕ್ಷದ ಸಂಘಟನೆ ಸಾಧ್ಯವಿಲ್ಲ. ಬೂತ್‌ಮಟ್ಟದಲ್ಲಿ ಕೆಲಸ ಮಾಡುತ್ತ ಜನರ ಸಮಸ್ಯೆಗೆ ಸ್ಪಂದಿಸುತ್ತಲೇ ಪಕ್ಷ ಸಂಘಟಿಸಬೇಕು’ ಎಂದು ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ರಾಜ್ಯ ಉಪಾಧ್ಯಕ್ಷ ಮನೋಹರ್ ಗೌಡ ಕರೆ ನೀಡಿದರು.

ನಗರದಲ್ಲಿ ಭಾನುವಾರ ನಡೆದ ಪಕ್ಷದ ಮಹಿಳಾ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಕೆಆರ್‌ಪಿಪಿ ಸ್ಥಾಪನೆಯಾಗಿ ನಾಲ್ಕೈದು ತಿಂಗಳಲ್ಲಿ ನಡೆದ ವಿಧಾನ ಸಭಾ ಚುನಾವಣೆಯಲ್ಲಿ 15-20 ಕ್ಷೇತ್ರಗಳಲ್ಲಿ ರಾಷ್ಟ್ರೀಯ ಪಕ್ಷಗಳಿಗೆ ಸವಾಲೊಡ್ಡಿದೆ. ಮುಂದಿನ ಚುನಾವಣೆಯಲ್ಲಿ ಹೆಚ್ಚಿನ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ’ ಎಂದರು.

ದಿನದ 24 ಗಂಟೆಯೂ ಕೆಲಸ ಮಾಡುತ್ತ ಪಕ್ಷದ ಅಧ್ಯಕ್ಷ ಜನಾರ್ದನ ರೆಡ್ಡಿ ಅವರ ಕನಸನ್ನು ನನಸು ಮಾಡಲು ಶ್ರಮಿಸೋಣ. ರಾಜ್ಯದಾದ್ಯಂತ ಪಕ್ಷ ಸಂಘಟನೆ ನಡೆಸೋಣ ಎಂದರು.

ಪಕ್ಷದ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಸಿ.ಸಿ. ಹೇಮಲತಾ ಮಾತನಾಡಿ, ‘ಬಸವಣ್ಣನವರ ಚಿಂತನೆಗಳು, ಅವರ ಆಶಯಗಳೇ ನಮ್ಮ ಪಕ್ಷದ ಬುನಾದಿ. ಸಮಾಜದ ಎಲ್ಲರನ್ನು ಒಟ್ಟಾಗಿ ಕರೆದುಕೊಂಡು ಹೋಗುವ ಶಕ್ತಿ ನಮ್ಮ ಪಕ್ಷಕ್ಕಿದೆ’ ಎಂದು ಹೇಳಿದರು.

ಪಕ್ಷದ ಮಹಿಳಾ ಘಟಕದ ಉಪಾಧ್ಯಕ್ಷರಾಗಿ ಮಂಗಳಾ, ಪದ್ಮಾ ರಾಜ್‌ಕುಮಾರ್, ಕವಿತಾ, ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ವಿದ್ಯಾ, ಮೀನಾಕ್ಷಿ ಡಿ., ಆಯೇಷಾ ಭಾನು, ಆಶಿತಾ ಮತ್ತು ಶ್ರೀದೇವಿ ಅವರು ಅಧಿಕಾರ ಸ್ವೀಕರಿಸಿದರು.

ಪುಸ್ತಕ ಸರಬರಾಜು ಅವಧಿ ವಿಸ್ತರಣೆ

ಬೆಂಗಳೂರು: ಏಕಗವಾಕ್ಷಿ ಯೋಜನೆಯಡಿ ಆಯ್ಕೆಯಾದ 2020ನೇ ಸಾಲಿನ ಪುಸ್ತಕಗಳ ಸರಬರಾಜು ಅವಧಿಯನ್ನು ಇದೇ 30ರವರೆಗೆ ವಿಸ್ತರಿಸ-ಲಾಗಿದೆ ಎಂದು ಸಾರ್ವಜನಿಕ ಗ್ರಂಥಾಲಯ ಇಲಾಖೆ ತಿಳಿಸಿದೆ.

ಲೇಖಕರು ಹಾಗೂ ಪ್ರಕಾಶನ ಸಂಸ್ಥೆಗಳು ಪುಸ್ತಕಗಳನ್ನು ಕಾರ್ಮಿಕ ಸಮುದಾಯ ಭವನ, ಸಿದ್ಧಾರ್ಥ ಶಾಲೆ ಹತ್ತಿರ, 5ನೇ ಕ್ರಾಸ್, ಬಾಪೂಜಿನಗರ, ಬೆಂಗಳೂರು-560025 ಈ ವಿಳಾಸಕ್ಕೆ ಸರಬರಾಜು ಮಾಡಬೇಕು. ವಿವರಕ್ಕೆ ದೂ.ಸಂಖ್ಯೆ 080 22864990 ಅಥವಾ 22867358ಕ್ಕೆ ಸಂಪರ್ಕಿಸಬೇಕು ಎಂದು ಇಲಾಖೆ ನಿರ್ದೇಶಕ ಸತೀಶ್ ಕುಮಾರ್ ಹೊಸಮನಿ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕಾಡಾನೆ ದಾಳಿ ರೈತ ಸಾವು

ಕನಕಪುರ: ತಾಲ್ಲೂಕಿನ ಅಳ್ಳಿ-ಕೆರೆದೊಡ್ಡಿಯಲ್ಲಿ ಭಾನುವಾರ ಕಾಡಾನೆ ದಾಳಿಯಿಂದಾಗಿ ರೈತ ತಿಮ್ಮಪ್ಪ(60) ಮೃತಪಟ್ಟಿದ್ದಾರೆ.

ರೇಷ್ಮೆ ಬೆಳೆಗಾರರಾಗಿರುವ ತಿಮ್ಮಪ್ಪ ಅವರು ನಸುಕಿನಲ್ಲಿ ತಮ್ಮ ಮನೆಯಿಂದ ಅನತಿ ದೂರದಲ್ಲಿರುವ ರೇಷ್ಮೆ ಮನೆಗೆ ಹೋಗುವಾಗ ಕಾಡಾನೆ ದಾಳಿ ನಡೆಸಿದೆ.

‘ಕುಟುಂಬಕ್ಕೆ ಪರಿಹಾರ’ (ಬೆಂಗಳೂರು ವರದಿ) : ‘ಅಳ್ಳಿಕೆರೆದೊಡ್ಡಿ ಗ್ರಾಮದಲ್ಲಿ ಒಂಟಿ ಸಲಗ ದಾಳಿಯಿಂದ ಮೃತಪಟ್ಟಿರುವ ತಿಮ್ಮಪ್ಪ ಅವರ ಮಗಳಿಗೆ ಉದ್ಯೋಗ ನೀಡಲು ಮತ್ತು ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕು’ ಎಂದು ಅರಣ್ಯಾಧಿಕಾರಿಗಳಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅರಣ್ಯಾಧಿಕಾರಿಗಳಿಂದ ಮಾಹಿತಿ ಪಡೆದ ಶಿವಕುಮಾರ್, ‘ಗ್ರಾಮಸ್ಥರ ಬೇಡಿಕೆಯಂತೆ ಅಲ್ಲಿ ಬ್ಯಾರಿಕೇಡ್ ವ್ಯವಸ್ಥೆ ಮಾಡಬೇಕು’ ಎಂದೂ ತಿಳಿಸಿದರು.

‘ಜಾತಿಗಣತಿ ವರದಿ ಜಾರಿಗೆ ವಿರೋಧ ಸರಿಯಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾತಿ ಗಣತಿ ವರದಿಯ ಪರಿಣಾಮದ ಬಗ್ಗೆ ಸಲಹೆಗಳನ್ನು ನೀಡಲಿ. ಆದರೆ, ವರದಿ ಜಾರಿ ಆಗಬಾರದು ಎನ್ನುವುದು ಸರಿಯಲ್ಲ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

‘ಜಾತಿ ಗಣತಿ ವರದಿ ಜಾರಿಗೊಳಿಸುವಂತೆ ಒತ್ತಾಯಿಸಲು ಚಿತ್ರದುರ್ಗದಲ್ಲಿ ‘ಅಹಿಂದ’ ಸಮಾವೇಶ ನಡೆಯುತ್ತಿದೆ. ಇದಕ್ಕೆ ಪ್ರತಿಯಾಗಿ ಲಿಂಗಾಯತ ಸಮಾವೇಶ ನಡೆಯಲಿದೆಯಂತೆ’ ಎಂದು ಸುದ್ದಿಗಾರರು ಹೇಳಿದಾಗ, ಇದು ಒಳ್ಳೆಯ ಬೆಳವಣಿಗೆ ಅಲ್ಲ’ ಎಂದರು.

‘ಸರ್ಕಾರ ತೀರ್ಮಾನ ಮಾಡಿ ಜಾತಿ ಗಣತಿಗೆ ಹಣ ಖರ್ಚು ಮಾಡಿದೆ. ಸಮೀಕ್ಷೆ ವರದಿಯನ್ನು ಬಹಿರಂಗಪಡಿಸುವಂತೆ ಜನ ಒತ್ತಾಯಿಸು ತ್ತಿದ್ದಾರೆ. ಅದರ ಮೇಲೆ ತೀರ್ಮಾನ ಮಾಡಿ ಎಂದಲ್ಲ. ಮುಂದಿನ ಕ್ರಮಕ್ಕೆ ಸಚಿವ ಸಂಪುಟವಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಇದ್ದಾರೆ’ ಎಂದರು.

ಈಜಲು ಹೋಗಿ ಯುವಕ ಸಾವು

ವಿಜಯಪುರ (ದೇವನಹಳ್ಳಿ): ನಾರಾಯಣಪುರ ಗ್ರಾಮದ ಯುವಕ ಕೆ.ವರುಣ್ (19) ಸ್ನೇಹಿತರೊಂದಿಗೆ ಕನಕಪುರ ಬಳಿಯ ಚುಂಚು ಫಾಲ್ಸ್‌ನಲ್ಲಿ ಈಜಲು ಹೋಗಿ ಮೃತಪಟ್ಟಿದ್ದಾರೆ. ಬೆಂಗಳೂರು ದಯಾನಂದ ಸಾಗರ್ ಕಾಲೇಜಿನಲ್ಲಿ ಪ್ರಥಮ ವರ್ಷದ ಎಂಜಿನಿಯರಿಂಗ್ ಓದುತ್ತಿದ್ದ.

ಮೂವರು ಸ್ನೇಹಿತರೊಂದಿಗೆ ಪ್ರವಾಸಕ್ಕೆ ತೆರಳಿದ್ದ ವರುಣ್, ಈಜಲು ಹೋದಾಗ ಕಾಲು ಜಾರಿ ಬಿದ್ದು ಸುಳಿಗೆ ಸಿಲುಕಿ ಕೊಚ್ಚಿ ಹೋಗಿದ್ದಾರೆ. ಸ್ಥಳೀಯ ಪೊಲೀಸರು ಅಗ್ನಿಶಾಮಕ ಠಾಣೆ ಸಿಬ್ಬಂದಿಯೊಂದಿಗೆ ಶುಕ್ರವಾರದಿಂದ ಹುಡುಕಾಟ ನಡೆಸಿದ್ದು, ಭಾನುವಾರ ಮುಂಜಾನೆ ಮೃತದೇಹ ಪತ್ತೆಯಾಗಿದೆ. ಸಾತನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೊದಲು ಸರ್ವೆ, ಒತ್ತುವರಿ ತೆರವು, ನಂತರವಷ್ಟೇ ಕಾಮಗಾರಿ: ಸರ್ಕಾರದ ಆದೇಶ

ಕೆರೆ ಅಭಿವೃದ್ಧಿಗೆ ಷರತ್ತಿನ ಬಿಕ್ಕಟ್ಟು!

• ಆರ್. ಮಂಜುನಾಥ್



ಹೂಳಿನೊಂದಿಗೆ ಜಲಕಳೆ ತುಂಬಿರುವ ಮಡಿವಾಳ ಕೆರೆ — ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ಕೆರೆಗಳ ಅಭಿವೃದ್ಧಿಗೆ ಹಣಕಾಸು ಆಯೋಗದ ಅನುದಾನದಲ್ಲಿ ರೂಪಿಸಲಾಗಿರುವ ಕ್ರಿಯಾಯೋಜನೆಗೆ ನೀಡಿರುವ ಅನುಮೋದನೆಯಲ್ಲಿರುವ ಷರತ್ತಿನಿಂದ ಬಿಬಿಎಂಪಿ ಬಿಕ್ಕಟ್ಟಿಗೆ ಸಿಲುಕಿದೆ.

‘ಕೆರೆಗಳ ಗಡಿಯನ್ನು ಗುರುತಿಸಿ, ಅವುಗಳಲ್ಲಿ ಒತ್ತುವರಿಯನ್ನು ತೆರವುಗೊಳಿಸಿದ ನಂತರವಷ್ಟೇ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು’ ಎಂದು ಸರ್ಕಾರ ಷರತ್ತು ವಿಧಿಸಿದೆ. 15ನೇ ಹಣಕಾಸು ಆಯೋಗದ 2022–23ನೇ ಸಾಲಿನ ಅನುದಾನದಲ್ಲಿ ₹49 ಕೋಟಿಯನ್ನು 14 ಕೆರೆಗಳ ಅಭಿವೃದ್ಧಿಗೆ ನೀಡಲಾಗಿದೆ.

ಕೆರೆಗಳ ಅಭಿವೃದ್ಧಿಗೆ ಅನುಮೋದನೆ ದೊರೆತ ಕೂಡಲೇ ಈ ಹಿಂದೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿ, ಟೆಂಡರ್ ಕರೆದು ಕಾರ್ಯಾದೇಶವನ್ನು ನೀಡಲಾಗುತ್ತಿತ್ತು. ಕಾಮಗಾರಿ ಆರಂಭವಾದ ಮೇಲಷ್ಟೇ ಒತ್ತುವರಿ ಗಮನಕ್ಕೆ ಬರುತ್ತಿತ್ತು. ಅದನ್ನು ಉಳಿಸಿ, ಕಾಮಗಾರಿಗಳನ್ನು ನಡೆಸಿರುವ ಉದಾಹರಣೆಗಳೂ ಹಲವು ಕೆರೆಗಳಲ್ಲಿವೆ.

ಈ ಬಾರಿ ಇಂತಹ ಕಾರ್ಯಕ್ಕೆ ಅವಕಾಶ ಇಲ್ಲದಿರುವುದು ಬಿಬಿಎಂಪಿ ಅಧಿಕಾರಿಗಳನ್ನು ‘ಸಂಕಷ್ಟಕ್ಕೆ’ ದೂಡಿದೆ. ಕೆರೆಯ ವಿಸ್ತೀರ್ಣ, ಗಡಿ ಗುರುತು, ಒತ್ತುವರಿ ತೆರವಿನ ನಂತರವಷ್ಟೇ ಕಾಮಗಾರಿ ಆರಂಭವಾಗಬೇಕಿರುವುದು ಬಿಬಿಎಂಪಿ ಎಂಜಿನಿಯರ್‌ಗಳ ಪಾಲಿಗೆ ಸವಾಲಾಗಿ ಪರಿಣಮಿಸಿದೆ. ಆದರೆ, ಈ ಷರತ್ತು ನಗರವಾಸಿಗಳು, ಪರಿಸರ ಕಾರ್ಯಕರ್ತರಲ್ಲಿ ಸಂತಸ ಮೂಡಿಸಿದ್ದು, ಕೆರೆಗಳು ಸಮಗ್ರವಾಗಿ ಉಳಿಯುವ ಭರವಸೆ ಮೂಡಿಸಿದೆ.

ಮಡಿವಾಳ ಕೆರೆ ಒತ್ತುವರಿ ತೆರವು ಸಾಧ್ಯವೇ?: ಅರಣ್ಯ ಇಲಾಖೆಗೆ ಇತ್ತೀಚೆಗೆ ಬಿಬಿಎಂಪಿಗೆ ಹಸ್ತಾಂತರಗೊಂಡಿರುವ ಮಡಿವಾಳ ಕೆರೆ ಅಭಿವೃದ್ಧಿಗೆ ₹15 ಕೋಟಿ ಮೀಸಲಿಡಲಾಗಿದೆ. 267 ಎಕರೆ ವಿಸ್ತೀರ್ಣದಲ್ಲಿರುವ ಮಡಿವಾಳ ಕೆರೆಯಲ್ಲಿ ಸರ್ಕಾರಿ ಒತ್ತುವರಿಯೇ 10 ಎಕರೆಯಷ್ಟಿದೆ. ಬಿಡಿಎ ರಸ್ತೆ, ಇತರೆ ರಸ್ತೆ, ಕೊಳೆಗೇರಿ, ಕಟ್ಟಡಗಳು ನಿರ್ಮಾಣವಾಗಿವೆ. ಹಲವು ದಶಕಗಳಿಂದ ಈ ಒತ್ತುವರಿಯನ್ನು ತೆರವು ಮಾಡಿಲ್ಲ. ಇದು ಬಿಬಿಎಂಪಿ ಅಧಿಕಾರಿಗಳಿಗೆ ಸವಾಲಾಗಿದೆ.

‘ಮಡಿವಾಳ ಕೆರೆಯಲ್ಲಿ ದಶಕಗಳಿಂದ ಹೂಳು ತೆಗೆದಿಲ್ಲ. ಇದರ ಕಾಮಗಾರಿಯೇ ಅತಿಹೆಚ್ಚಿದೆ. ಜೊತೆಗೆ ಒತ್ತುವರಿ ಅತಿಯಾಗಿದೆ. ಇದನ್ನು ಮೊದಲು ತೆಗೆಯಬೇಕೆಂದರೆ ಪುನರ್‌ವಸತಿ, ಬಿಡಿಎ ರಸ್ತೆಗಳೆಲ್ಲ ಅಡ್ಡಿಯಾಗಿವೆ. ಇವುಗಳನ್ನು ತೆರವು ಮಾಡಲು ಕಷ್ಟಸಾಧ್ಯವಾಗಬಹುದು. ಆದರೂ ಒತ್ತುವರಿ ತೆರವು ಮಾಡಲು ಪ್ರಯತ್ನಿಸಲಾಗುವುದು. ಮಡಿವಾಳ ಕೆರೆ ಬಹಳ ದೊಡ್ಡದಾಗಿದ್ದು, ಅಭಿವೃದ್ಧಿಗೆ ಅತಿ ಹೆಚ್ಚಿನ ಹಣ ಬೇಕಾಗಿದೆ. ಮೊದಲು ಡಿಪಿಆರ್ ಸಿದ್ಧಪಡಿಸಲಾಗುತ್ತದೆ. ನಂತರ ಎಲ್ಲ ಪ್ರಕ್ರಿಯೆ ಆರಂಭವಾಗುತ್ತದೆ’ ಎಂದು ಬಿಬಿಎಂಪಿ ಕೆರೆ ವಿಭಾಗದ ಎಂಜಿನಿಯರ್‌ಗಳು ಮಾಹಿತಿ ನೀಡಿದರು.

‘ಕಾಚರಕನಹಳ್ಳಿ ಕೆರೆಯಲ್ಲಿ ಕೊಳೆಗೇರಿಗಳು ನಿರ್ಮಾಣವಾಗಿವೆ. ಇಲ್ಲಿ ಕೆರೆಯ ಸರ್ವೆಕಾರ್ಯವೇ ನಡೆದಿಲ್ಲ. ಸ್ಥಳೀಯ ರಾಜಕಾರಣಿಗಳು ಒತ್ತುವರಿಯನ್ನು ತೆರವು ಮಾಡಿಸುತ್ತೇವೆ. ಕಾಮಗಾರಿ ಆರಂಭಿಸಿ ಎನ್ನುತ್ತಿದ್ದಾರೆ. ಆದರೆ, ಕೆರೆಯ ಅರ್ಧದಷ್ಟು ಭಾಗದಲ್ಲಿ ಒತ್ತುವರಿ ಇದೆ. ಷರತ್ತಿನ ಪ್ರಕಾರ ಅವರಿಗೆಲ್ಲ ಪುನರ್ವಸತಿ ಕಲ್ಪಿಸಿದ ನಂತರವಷ್ಟೇ ಕಾಮಗಾರಿ ಆರಂಭಿಸಬೇಕು. ಇದಕ್ಕೆ ಸಾಕಷ್ಟು ವರ್ಷಗಳು ಕಾಯಬೇಕಾಗುತ್ತದೆ’ ಎಂಬುದು ಎಂಜಿನಿಯರ್‌ಗಳ ಮಾತು.

ಹಲಸೂರು, ವೀರಸಾಗರ ಕೆರೆಗಳ ಸರ್ವೆಯನ್ನೇ ಈವರೆಗೂ ಮಾಡಿಲ್ಲ. ಇವುಗಳ ಸರ್ವೆ ಕಾರ್ಯ ಮೊದಲು ನಡೆಯಬೇಕಿದೆ. ನಂತರವಷ್ಟೇ ಅಭಿವೃದ್ಧಿ ಕಾಮಗಾರಿಯ ಪ್ರಕ್ರಿಯೆ ಆರಂಭವಾಗಬೇಕು. ಅಲ್ಲದೆ 14 ಕೆರೆಗಳ ಪೈಕಿ ಹಲವು ಕೆರೆಗಳಲ್ಲಿ ಈಗಾಗಲೇ ಅಭಿವೃದ್ಧಿ ಒಂದಷ್ಟು ಆಗಿದೆ. ಅಲ್ಲಿ ಹೇಗೆ ಈ ಷರತ್ತು ಅನ್ವಯವಾಗುತ್ತದೆ ಎಂಬುದೂ ಪ್ರಶ್ನೆಯಾಗಿದೆ. ಹೀಗಾಗಿ, ಸರ್ಕಾರದ ಷರತ್ತು ಬಿಬಿಎಂಪಿಯ ಅಧಿಕಾರಿಗಳಿಗೆ ಹೆಚ್ಚಿನ ಜವಾಬ್ದಾರಿ ವಹಿಸಿರುವುದಂತೂ ನಿಜ. ಇದು ಪೂರ್ಣ ಪ್ರಮಾಣದಲ್ಲಿ ಕಾರ್ಯಗತವಾದರೆ ಪರಿಸರಕ್ಕೇ ಲಾಭ ಎಂಬುದು ಪರಿಸರ ಕಾರ್ಯಕರ್ತರ ಅಭಿಪ್ರಾಯ.

ಯಾವ ನಕ್ಷೆಯಂತೆ ಸರ್ವೆ?

‘ಕೆರೆಗಳ ಸರ್ವೆ ಮಾಡಿ, ಒತ್ತುವರಿ ತೆರವುಗೊಳಿಸಿ ಅಭಿವೃದ್ಧಿ ಮಾಡಿ ಎಂದು ಸರ್ಕಾರ ಷರತ್ತು ವಿಧಿಸಿರುವುದು ಸಂತಸದ ವಿಷಯ. ಆದರೆ, ಯಾವ ನಕ್ಷೆಯ ಆಧಾರದಲ್ಲಿ ಸರ್ವೆ ನಡೆಸುತ್ತಾರೆ ಎಂಬುದೇ ಪ್ರಶ್ನೆ. ಇದಕ್ಕೆ ಉತ್ತರಿಸಿ, ಸ್ಪಷ್ಟ ನಿಲುವು ತೆಗೆದುಕೊಂಡು ಮುಂದುವರಿಯಬೇಕು’ ಎಂದು ಫ್ರೆಂಡ್ಸ್ ಆಫ್ ಲೇಕ್‌ನ ರಾಮ್‌ಪ್ರಸಾದ್ ಆಗ್ರಹಿಸಿದರು.

‘1974ರಿಂದ 76ರಲ್ಲಿದ್ದ ಕಂದಾಯ ನಕ್ಷೆಯಂತೆಯೇ ಸರ್ವೆ ನಡೆಯಬೇಕು. 2015ರಲ್ಲಿ ಹೊಸದಾಗಿ ತಮ್ಮಿಷ್ಟಕ್ಕೇ ಕಂದಾಯ ಇಲಾಖೆ ಭೂಮಾಪಕರು ಮಾಡಿಟ್ಟಿರುವ ಸರ್ವೆಗಳಿವೆ. ಇವುಗಳಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಹೀಗಾಗಿ, ಹಳೆಯ ಕಂದಾಯ ನಕ್ಷೆಯಂತೆಯೇ ಸರ್ವೆ ನಡೆಸಿ, ಅಭಿವೃದ್ಧಿ ಮಾಡಿದರೆ ಕೆರೆಗಳ ಜಲಸಂಗ್ರಹ ಸಾಮರ್ಥ್ಯ ಹೆಚ್ಚಾಗುತ್ತದೆ. ಅಂತರ್ಜಲ ವೃದ್ಧಿ ಜೊತೆಗೆ ಪರಿಸರ ರಕ್ಷಣೆಯೂ ಆಗುತ್ತದೆ’ ಎಂದರು.

‘ಸಂಶಯ ಮೂಡಿಸಿದೆ’

ಹೈಕೋರ್ಟ್ ಕೆರೆಗಳ ಒತ್ತುವರಿ ತೆರವಿನ ಬಗ್ಗೆ ಸಲ್ಲಿಸಲಾಗಿರುವ ‘ಕ್ರಿಯಾ ಯೋಜನೆ’ಯಲ್ಲಿ ಮಡಿವಾಳ, ಕಾಚರಕನಹಳ್ಳಿ, ಹಲಸೂರು, ಅಂಜನಾಪುರ ಕೆರೆಗಳನ್ನು ಸೇರಿಸಿಲ್ಲ. 149 ಕೆರೆಗಳು ಮಾತ್ರ ಕ್ರಿಯಾಯೋಜನೆಯಲ್ಲಿದ್ದು, ಉಳಿದ ಕೆರೆಗಳಲ್ಲಿ ಒತ್ತುವರಿ ಇದ್ದರೂ ಅವುಗಳು ಪಟ್ಟಿಯಲ್ಲಿ ಇಲ್ಲದಿರುವುದು ಸಂಶಯ ಮೂಡಿಸಿದೆ. ‘ಕ್ರಿಯಾಯೋಜನೆ’ಯಲ್ಲಿರುವ ಕೆರೆಗಳಲ್ಲಿನ ಒತ್ತುವರಿಯನ್ನು ಮಾತ್ರ ತೆರವು ಮಾಡಬೇಕೆಂದೇನೂ ಇಲ್ಲ. ಎಲ್ಲ ಕೆರೆಗಳಲ್ಲೂ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಒತ್ತುವರಿ ತೆರವಿಗೆ ಪ್ರಥಮ ಆದ್ಯತೆ ನೀಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಎಂಜಿನಿಯರ್‌ಗಳು ತಿಳಿಸಿದರು.



ರಂಗಪ್ರವೇಶ

ಕಲಾಸಧಾ ಅಕಾಡೆಮಿ ಮತ್ತು ಶರತ್ ನೃತ್ಯಾನುಸಂಧಾನಂ ಸಹಯೋಗದಲ್ಲಿ ನಗರದ ಎಡಿಎ ರಂಗಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಭರತನಾಟ್ಯ ರಂಗಪ್ರವೇಶ’ ಕಾರ್ಯಕ್ರಮದಲ್ಲಿ ಸ್ಮೃತಿ ವಿಜಯಭಾಸ್ಕರ್ ಅವರು ನೃತ್ಯ ಪ್ರದರ್ಶಿಸಿದರು. –ಪ್ರಜಾವಾಣಿ ಚಿತ್ರ



ವಿಚಾರ ಸಂಕಿರಣದಲ್ಲಿ ಸೆಲ್ಕೊ ಫೌಂಡೇಷನ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹರೀಶ್ ಹಂದೆ ಮಾತನಾಡಿದರು

‘ಸೌರಶಕ್ತಿ ಬಳಕೆ ಅನಿವಾರ್ಯ’

ಸೆಲ್ಕೊ ಫೌಂಡೇಷನ್ ಸಿಇಒ ಹರೀಶ್ ಹಂದೆ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸುಸ್ಥಿರ ಅಭಿವೃದ್ಧಿ ಗುರಿ ಮುಟ್ಟಲು ಎಲ್ಲ ಸ್ತರಗಳಲ್ಲೂ ದೀರ್ಘಕಾಲದ ದೊಡ್ಡಮಟ್ಟದ ಸಂಘಟನಾತ್ಮಕ ಸಹಯೋಗ ಅಗತ್ಯವಾಗಿದೆ’ ಎಂದು ಸೆಲ್ಕೊ ಫೌಂಡೇಷನ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹರೀಶ್ ಹಂದೆ ಹೇಳಿದರು.

ಸೆಲ್ಕೊ ಸೋಲಾರ್ ಲೈಟ್ ಪ್ರೈವೇಟ್ ಲಿಮಿಟೆಡ್ ವತಿಯಿಂದ ಜಯನಗರದಲ್ಲಿ ನಡೆದ ಸೌರಶಕ್ತಿಯ ಅನ್ವಯಿಕಗಳ ಕುರಿತ ಒಂದು ದಿನದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘2030ರ ಹೊತ್ತಿಗೆ ಸುಸ್ಥಿರ ಅಭಿವೃದ್ಧಿ ಗುರಿ ತಲುಪಲು ಜೀವನೋಪಾಯ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಸಾಧಿಸಬೇಕೆಂದರೆ ಅದು ಕುಕ್ಕುಟೋದ್ಯಮವೇ ಇರಲಿ, ಗಿರಣಿ, ಗಾಣ ಮುಂತಾದ ಎಲ್ಲ ಕ್ಷೇತ್ರಗಳಲ್ಲೂ ಸೌರಶಕ್ತಿ ಬಳಕೆ ಅನಿವಾರ್ಯ’ ಎಂದರು.

ಕೇಂದ್ರದ ಗ್ರಾಮೀಣ ವಿದ್ಯುದೀಕರಣ ನಿಗಮದ(ಆರ್‌ಇಸಿ) ಕಾರ್ಯಕ್ರಮಗಳ ಹಿರಿಯ ವ್ಯವಸ್ಥಾಪಕ ಸೌಮ್ಯಕಾಂತ್ ಮಾತನಾಡಿ, ‘ಪಳೆಯುಳಿಕೆಗಳ ಮೇಲೆ ಅವಲಂಬಿತವಾಗಿರುವ ಈಗಿನ ಇಂಧನ ಮೂಲಗಳನ್ನು ಭವಿಷ್ಯದಲ್ಲಿ ಹಸಿರು ಮತ್ತು ಶುದ್ಧ ಇಂಧನ ಮೂಲಗಳಾದ ಗಾಳಿ, ನೀರು ಮತ್ತು ಸೌರಶಕ್ತಿ ಆಧಾರಿತವಾಗಿ ರೂಪಿಸಲು ಆರ್‌ಇಸಿ ಬದ್ಧವಾಗಿದೆ’ ಎಂದರು.

‘ಗ್ರಾಮೀಣ ಜನರಿಗೆ ಆಧುನಿಕ ತಂತ್ರಜ್ಞಾನದೊಂದಿಗೆ ಪರಿಸರಕ್ಕೆ ಪೂರಕವಾದ ವಿಶ್ವಾಸಾರ್ಹ ಮತ್ತು ಕೈಗೆಟಕುವ ಇಂಧನವನ್ನು ಒದಗಿಸುವ ಮೂಲಕ ಅವರ ಆರ್ಥಿಕ, ಸಾಮಾಜಿಕ ಬದಲಾವಣೆಗಾಗಿ ಆರ್‌ಇಸಿ ಫೌಂಡೇಷನ್ ಆರಂಭಿಸಲಾಗಿದ್ದು, ಇದಕ್ಕೆ ಸುಸ್ಥಿರ ಅಭಿವೃದ್ಧಿಯೇ ಮೂಲ ಮಂತ್ರವಾಗಿದೆ’ ಎಂದು ಅವರು ವಿವರಿಸಿದರು.

ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ವಿಶೇಷ ಕರ್ತವ್ಯಾಧಿಕಾರಿ ಪ್ರಿಯಾ ಖಾನ್ ಅವರು, ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಸೆಲ್ಕೊ ಸಂಸ್ಥೆ ಜತೆ ಕೈ ಜೋಡಿಸಲು ಮಹಾರಾಷ್ಟ್ರ ಸರ್ಕಾರ ಹೆಚ್ಚು ಉತ್ಸುಕವಾಗಿದೆ ಎಂದರು.

ಸುಸ್ಥಿರ ಇಂಧನವನ್ನು ಆಧಾರವಾಗಿಟ್ಟುಕೊಂಡು ಮಹಿಳಾ ಬಲವರ್ಧನೆಯಲ್ಲಿ ತೊಡಗಿರುವ ಬಿಹಾರದ ಜೆ. ವೈರ್ಸ್ ನಿರ್ದೇಶಕಿ ಸಂಜುದೇವಿ, ತಮ್ಮ ಸಂಸ್ಥೆಯ ಯಶೋಗಾಥೆಯನ್ನು ಹಂಚಿಕೊಂಡರು.

ಸೆಲ್ಕೊ ಇಂಡಿಯಾದ ಸಿಇಒ ಮೋಹನ ಭಾಸ್ಕರ ಹೆಗಡೆ, ನಿರ್ದೇಶಕರಾದ ಥಾಮಸ್ ಪುಲ್ಲೆಂಕೇವ್, ಸೆಲ್ಕೊ ಫೌಂಡೇಷನ್‌ನ ನಿರ್ದೇಶಕಿ ಹುದಾ ಜಾಫರ್ ಭಾಗವಹಿಸಿದ್ದರು.

ಮಹಿಳೆ, ಮಕ್ಕಳು ಅಸುರಕ್ಷಿತ: ವಿಜಯೇಂದ್ರ ಟೀಕೆ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಹಳಿ ತಪ್ಪಿದ ಆಡಳಿತದ ಪರಿಣಾಮ ಮಹಿಳೆಯರು ಮತ್ತು ಮಕ್ಕಳು ಸುರಕ್ಷಿತವಾಗಿರಲು ಸಾಧ್ಯವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಈ ಕುರಿತು ಎಕ್ಸ್ ಮೂಲಕ ಸರ್ಕಾರದ ವಿರುದ್ಧ ಹರಿಹಾಯ್ದಿರುವ ಅವರು, ಬೆಳಗಾವಿಯ ಮಹಿಳಾ ದೌರ್ಜನ್ಯದ ಬೆನ್ನಲ್ಲೇ ಮಕ್ಕಳ ಮೇಲಿನ ದೌರ್ಜನ್ಯ ಘಟನೆ ಕೋಲಾರದ ಮಾಲೂರು ಯಲುವಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ನಿಲಯದಲ್ಲಿ ನಡೆದಿದೆ ಎಂದಿದ್ದಾರೆ.

ಪರಿಶಿಷ್ಟ ಸಮುದಾಯಕ್ಕೆ ಸೇರಿದವರೇ ದೌರ್ಜನ್ಯ– ಶೋಷಣೆಗೆ ಗುರಿಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಮಾಲೂರಿನ ಘಟನೆಯಲ್ಲಿ ಮಕ್ಕಳನ್ನು ಮಲದ ಗುಂಡಿಗೆ ಇಳಿಸಿ ದೈಹಿಕ ದೌರ್ಜನ್ಯ ನಡೆಸಿರುವುದು ಅತ್ಯಂತ ಹೇಯ ಘಟನೆ. ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ಇದರ ನೈತಿಕ ಹೊಣೆ ಹೊರಬೇಕು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮತೆಗೆದುಕೊಳ್ಳಬೇಕು ಎಂದು ವಿಜಯೇಂದ್ರ ಒತ್ತಾಯಿಸಿದ್ದಾರೆ.

ಆಡಳಿತ ನಿಷ್ಕ್ರಿಯ: ‘ರಾಜ್ಯದಲ್ಲಿ ಆಡಳಿತ ಸಂಪೂರ್ಣ ನಿಷ್ಕ್ರಿಯವಾಗಿದ್ದು, ಇದರ ಪರಿಣಾಮ ಹೆಣ್ಣು ಭ್ರೂಣ ಹತ್ಯೆ, ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚಿದೆ. ದಲಿತ ಮಕ್ಕಳನ್ನು ಮಲದ ಗುಂಡಿಗೆ ಇಳಿಸಿ ಸ್ವಚ್ಛ ಮಾಡಲು ಬಳಕೆ ಮಾಡಲಾಗುತ್ತಿದೆ’ ಎಂದು ಶಾಸಕ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

ಸರ್ಕಾರಕ್ಕೆ ಕವಿ ಬಿ.ಆರ್. ಲಕ್ಷ್ಮಣರಾವ್ ಮನವಿ

‘ಶಿಕ್ಷಣ, ಪುಸ್ತಕದ ಗ್ಯಾರಂಟಿ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರವು ಶಿಕ್ಷಣ ಮತ್ತು ಪುಸ್ತಕಗಳಿಗೆ ಆದ್ಯತೆ ನೀಡಿ, ಅವುಗಳ ಬಗ್ಗೆ ‘ಗ್ಯಾರಂಟಿ’ ಯೋಜನೆಗಳನ್ನು ರೂಪಿಸಬೇಕು’ ಎಂದು ಕವಿ ಬಿ.ಆರ್. ಲಕ್ಷ್ಮಣರಾವ್ ಹೇಳಿದರು.

ಅಂಕಿತ ಪುಸ್ತಕ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ನಾಲ್ಕು ಪುಸ್ತಕಗಳನ್ನು ಬಿಡುಗಡೆ ಮಾಡಿ, ಮಾತನಾಡಿದರು.

‘ಸರ್ಕಾರಗಳು ಶಿಕ್ಷಣ ಮತ್ತು ಪುಸ್ತಕಗಳಿಗೆ ಆದ್ಯತೆ ನೀಡುತ್ತಿಲ್ಲ. ಇವು ಕಡೆಯ ಆದ್ಯತೆಯಾಗಿವೆ. ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಪಾವತಿಸಬೇಕಾದ ಗ್ರಂಥಾಲಯ ಕರದಲ್ಲಿ ಬಿಬಿಎಂಪಿ ₹ 638.18 ಕೋಟಿ ಬಾಕಿ ಉಳಿಸಿಕೊಂಡಿದೆ. ಈ ಹಣವನ್ನು ಬಿಬಿಎಂಪಿ ನೀಡಿದಲ್ಲಿ ಪುಸ್ತಕೋದ್ಯಮ ಬೆಳವಣಿಗೆಗೆ ಸಹಕಾರಿಯಾಗಲಿದೆ. ಇಲಾಖೆಯ ಏಕಗವಾಕ್ಷಿ ಯೋಜನೆಯಡಿ 2020ನೇ ಸಾಲಿಗೆ ಆಯ್ಕೆಯಾದ ಪುಸ್ತಕಗಳ ಖರೀದಿ ಪ್ರಕ್ರಿಯೆ ಈಗ ನಡೆಯುತ್ತಿದೆ. ಇಷ್ಟಾಗಿಯೂ ಪ್ರಕಾಶಕರು ಪುಸ್ತಕಗಳನ್ನು ಹೊರತರುತ್ತಿರುವುದು ಶ್ಲಾಘನೀಯ’ ಎಂದು ಹೇಳಿದರು.

ಎಂ.ಎಸ್. ನರಸಿಂಹಮೂರ್ತಿ ಅವರ ‘ಬೇಗ್ ಬಾರೋ ಅಳಿಯ’ ಹಾಗೂ ಸಂತೆಕಸಲಗೆರೆ ಪ್ರಕಾಶ್ ಅವರ ‘ಪ್ರತಿಮೆ ಇಲ್ಲದ ಊರು’ ಕೃತಿಯ ಬಗ್ಗೆ ಮಾತನಾಡಿದ ಕವಿ ಎಚ್. ಡುಂಡಿರಾಜ್, ‘ಹಾಸ್ಯದ ಮೂಲಕ ಗಂಭೀರವಾದ ಸಮಸ್ಯೆಗಳಿಗೆ ಹೇಗೆ ಪರಿಹಾರವನ್ನು ಕೊಡಬಹುದು ಎಂಬುವುದನ್ನು ‘ಬೇಗ್ ಬಾರೋ ಅಳಿಯ’ ಕೃತಿ ತಿಳಿಸಲಿದೆ. ಇದರಲ್ಲಿನ ಮೂರು ನಾಟಕಗಳು ವಿಭಿನ್ನ ಶೈಲಿಯಲ್ಲಿ ರೂಪುಗೊಂಡಿವೆ. ‘ಪ್ರತಿಮೆ ಇಲ್ಲದ ಊರು’ ಕೃತಿಯು ಗಾಂಧಿಯನ್ನು ಕಥಾವಸ್ತುವಾಗಿ ಹಿಡಿದಿಟ್ಟುಕೊಂಡಿದೆ. ಒಂದೇ ವಸ್ತುವಿನ ಬಗ್ಗೆ 12 ಕಥೆಗಳನ್ನು ಬರೆಯುವುದು ಸವಾಲಿನ ಕೆಲಸ. ಆದರೆ ಈ ಕೃತಿಯು ಅಂತಹ ಸವಾಲಿನ ಕೆಲಸವನ್ನು ನಿರ್ವಹಿಸಿದೆ’ ಎಂದು ತಿಳಿಸಿದರು.

‘ಸುಧಾ’ ವಾರ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ್ ಚ.ಹ. ಅವರು ಮೌನೇಶ ಬಡಿಗೇರ ಅವರ ‘ಶ್ರೀಗಳ ಅರಣ್ಯಕಾಂಡ’ ಹಾಗೂ ವಿವೇಕಾನಂದ ಕಾಮತ್ ಅವರ ‘ಪದರುಗಳು’ ಕೃತಿಯ ಬಗ್ಗೆ ಮಾತನಾಡಿದರು.



ಕಾರ್ಯಕ್ರಮದಲ್ಲಿ ಬಿ.ಆರ್. ಲಕ್ಷ್ಮಣರಾವ್ ಅವರು ವಿವಿಧ ಕೃತಿಗಳನ್ನು ಲೋಕಾರ್ಪಣೆ ಮಾಡಿದರು. (ಎಡದಿಂದ) ಎಚ್. ಡುಂಡಿರಾಜ್, ಲೇಖಕರಾದ ಎಂ.ಎಸ್. ನರಸಿಂಹಮೂರ್ತಿ ಮತ್ತು ವಿವೇಕಾನಂದ ಕಾಮತ್ ಇದ್ದಾರೆ — ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

- **ಪುಸ್ತಕ:** ‘ಬೇಗ್ ಬಾರೋ ಅಳಿಯ’
  ಲೇಖಕ: ಎಂ.ಎಸ್. ನರಸಿಂಹಮೂರ್ತಿ
  ಪುಟಗಳು: 160
  ಬೆಲೆ: ₹ 150
- **ಪುಸ್ತಕ:** ‘ಶ್ರೀಗಳ ಅರಣ್ಯಕಾಂಡ’
  ಲೇಖಕ: ಮೌನೇಶ ಬಡಿಗೇರ
  ಪುಟಗಳು: 176
  ಬೆಲೆ: ₹ 195
- **ಪುಸ್ತಕ:** ‘ಪ್ರತಿಮೆ ಇಲ್ಲದ ಊರು’
  ಲೇಖಕ: ಸಂತೆಕಸಲಗೆರೆ ಪ್ರಕಾಶ್
  ಪುಟಗಳು: 144
  ಬೆಲೆ: ₹ 150
- **ಪುಸ್ತಕ:** ‘ಪದರುಗಳು’
  ಲೇಖಕ: ವಿವೇಕಾನಂದ ಕಾಮತ್

ನಾಲ್ಕೂ ಪುಸ್ತಕಗಳನ್ನು ಅಂಕಿತ ಪುಸ್ತಕ ಪ್ರಕಾಶಿಸಿದೆ

ಭೂಗತ ಪಾತಕಿ ದಾವೂದ್ ಅಸ್ವಸ್ಥ: ವಿಷ ಹಾಕಿದ ಶಂಕೆ?

ಮುಂಬೈ: ಭೂಗತ ಪಾತಕಿ, 1993ರ ಮುಂಬೈ ಸರಣಿ ಬಾಂಬ್ ಸ್ಫೋಟದ ಪ್ರಮುಖ ಸಂಚುಕೋರ ದಾವೂದ್ ಇಬ್ರಾಹಿಂ ತೀವ್ರ ಅಸ್ವಸ್ಥಗೊಂಡು ಪಾಕಿಸ್ತಾನದ ಕರಾಚಿ ಆಸ್ಪತ್ರೆಗೆ ದಾಖಲಾಗಿರುವ ವದಂತಿ ಭಾನುವಾರ ರಾತ್ರಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ದಾವೂದ್‌ಗೆ ಅಪರಿಚಿತ ವ್ಯಕ್ತಿಗಳು ವಿಷ ಹಾಕಿರುವ ಸಾಧ್ಯತೆಯ ಶಂಕೆ ವ್ಯಕ್ತವಾಗಿದೆ. ಆದರೆ, ಇದನ್ನು ಯಾವುದೇ ಅಧಿಕೃತ ಮೂಲಗಳು ಖಚಿತ ಪಡಿಸಿಲ್ಲ.

ವಿಶ್ವದ ಹಲವು ದೇಶಗಳಿಗೆ ಬೇಕಾಗಿರುವ ಈ ಪಾತಕಿ, ತನಿಖಾ ಸಂಸ್ಥೆಗಳ ಕಣ್ತಪ್ಪಿಸಿಕೊಂಡು ಕರಾಚಿಯಲ್ಲಿ ಕೆಲ ವರ್ಷಗಳಿಂದ ನೆಲೆಸಿರುವ ಮಾಹಿತಿ ಇದೆ.

ದಾವೂದ್ ಆಸ್ಪತ್ರೆಗೆ ದಾಖಲಾಗಿರುವ ಬಗ್ಗೆ ಪಾಕಿಸ್ತಾನದ ಅಧಿಕಾರಿಗಳು ಖಚಿತಪಡಿಸಿಲ್ಲ. ಆದರೆ, ದಾವೂದ್ ಆಸ್ಪತ್ರೆ ಸೇರಿರುವ ವದಂತಿಯ ಸುದ್ದಿ ಸಾಮಾಜಿಕ ಮಾಧ್ಯಮಗಳಲ್ಲಿ ಟ್ರೆಂಡಿಂಗ್ ಆಗಿದೆ.

11 ತಿಂಗಳಿನಲ್ಲಿ 4,499 ಅಪಘಾತ, 823 ಮಂದಿ ಸಾವು

ಬೆಂಗಳೂರು: ನಗರದಲ್ಲಿ ಪ್ರಸಕ್ತ ವರ್ಷದ ಜನವರಿಯಿಂದ ನವೆಂಬರ್‌ವರೆಗೆ 4,499 ಅಪಘಾತಗಳು ಸಂಭವಿಸಿದ್ದು, 823 ಮಂದಿ ಮೃತಪಟ್ಟಿದ್ದಾರೆ. 3,802 ಮಂದಿ ಗಾಯಗೊಂಡಿದ್ದಾರೆ.

ಅಪಘಾತಗಳ ಅಂಕಿ– ಅಂಶಗಳನ್ನು ಸಂಚಾರ ಪೊಲೀಸರು ಬಿಡುಗಡೆ ಮಾಡಿದ್ದಾರೆ. ಕಳೆದ ವರ್ಷಗಳಿಗೆ ಹೋಲಿಸಿದರೆ 2023ರಲ್ಲಿ ಅಪಘಾತಗಳು ಹಾಗೂ ಸಾವಿನ ಸಂಖ್ಯೆ ಹೆಚ್ಚಾಗಿದೆ.

'ಬಳ್ಳಾರಿ ರಸ್ತೆ, ಮೈಸೂರು ರಸ್ತೆ, ಹಳೇ ಮದ್ರಾಸ್ ರಸ್ತೆಗಳಲ್ಲಿ ಅಪಘಾತ ಪ್ರಮಾಣ ಹೆಚ್ಚಿದೆ. ಹೊರವರ್ತುಲ ರಸ್ತೆ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಘಾತಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಭವಿಸಿವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಬೈಕ್ ಸವಾರರು ಹೆಚ್ಚಿನ ಸಂಖ್ಯೆಯಲ್ಲಿ ಮೃತಪಟ್ಟಿದ್ದಾರೆ. ಅತೀ ವೇಗದ ಚಾಲನೆ, ನಿರ್ಲಕ್ಷ್ಯ ಹಾಗೂ ಸಂಚಾರ ನಿಯಮ ಉಲ್ಲಂಘನೆಯೇ ಅಪಘಾತಕ್ಕೆ ಕಾರಣ ಎನ್ನುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಹೊಸ ವರ್ಷಾಚರಣೆಗೆ ಸಂಗ್ರಹಿಸಿಟ್ಟಿದ್ದ ₹21 ಕೋಟಿ ಮೌಲ್ಯದ ಮಾದಕ ದ್ರವ್ಯ ಪ್ರಕರಣ

ಡ್ರಗ್ಸ್: ಸಿನಿ ತಾರೆಯರ ಮೇಲೆ ಗುಮಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಮೂರ್ತಿ ನಗರದ ಮನೆಯೊಂದರಲ್ಲಿ ಇತ್ತೀಚೆಗೆ ಜಪ್ತಿ ಮಾಡಿದ್ದ ₹21 ಕೋಟಿ ಮೌಲ್ಯದ ಡ್ರಗ್ಸ್ ಪ್ರಕರಣದಲ್ಲಿ ಸಿನಿ ತಾರೆಯರು, ಉದ್ಯಮಿಗಳು ಹಾಗೂ ವಿವಿಧ ಕ್ಷೇತ್ರದ ವ್ಯಕ್ತಿಗಳ ಹೆಸರು ಕೇಳಿಬಂದಿದೆ.

ಹೊಸ ವರ್ಷಾಚರಣೆ ಪಾರ್ಟಿಗಳಿಗೆ ಪೂರೈಸಲೆಂದು ಮನೆಯಲ್ಲಿ ಡ್ರಗ್ಸ್ ಸಂಗ್ರಹಿಸಿಡಲಾಗಿತ್ತು. ದಾಳಿ ಮಾಡಿದ್ದ ಸಿಸಿಬಿ ಪೊಲೀಸರು, ನೈಜೀರಿಯಾದ ಪ್ರಜೆ ಲಿಯೋನಾರ್ಡ್ ಒಕ್ವುಡಿಲಿ (44) ಎಂಬಾತನನ್ನು ಬಂಧಿಸಿದ್ದರು.

'ಪ್ರಮುಖ ಪೆಡ್ಲರ್ ಆಗಿದ್ದ ಲಿಯೋನಾರ್ಡ್, ನಗರದಲ್ಲಿರುವ ಉಪ ಪೆಡ್ಲರ್‌ಗಳ ಮೂಲಕ ಡ್ರಗ್ಸ್ ಮಾರುತ್ತಿದ್ದ. ಕೆಲ ಸಿನಿಮಾ ನಟ–ನಟಿಯರು, ಕೆಲ ವ್ಯಾಪಾರಿಗಳು, ಉದ್ಯಮಿಗಳು ಹಾಗೂ ವಿವಿಧ ಕ್ಷೇತ್ರಗಳ ಕೆಲ ವ್ಯಕ್ತಿಗಳು ಡ್ರಗ್ಸ್ ಖರೀದಿಸುತ್ತಿದ್ದರೆಂಬ ಮಾಹಿತಿ ಇದೆ. ಆದರೆ, ಅದಕ್ಕೆ ಸಂಬಂಧಪಟ್ಟ ಪುರಾವೆಗಳು ಲಭ್ಯವಾಗಿಲ್ಲ' ಎಂದು ಮೂಲಗಳು ಹೇಳಿವೆ.

'ಆರೋಪಿ ಲಿಯೋನಾರ್ಡ್, ಎಲ್ಲಿಂದ ಡ್ರಗ್ಸ್ ತಂದಿದ್ದ? ಯಾರಿಗೆ ಮಾರುತ್ತಿದ್ದ? ಎಷ್ಟು ಪ್ರಮಾಣದಲ್ಲಿ ವಹಿವಾಟು ನಡೆಸಿದ್ದ? ಎಂಬಿತ್ಯಾದಿ ಸಂಗತಿಗಳ ಬಗ್ಗೆ ಸದ್ಯಕ್ಕೆ ತನಿಖೆ ನಡೆಸಲಾಗುತ್ತಿದೆ. ಈ ಡ್ರಗ್ಸ್ ಜಾಲದಲ್ಲಿ ಯಾರೆಲ್ಲ ಇದ್ದಾರೆ ಎಂಬುದನ್ನು ತಿಳಿದುಕೊಂಡು, ತನಿಖೆ ಮುಂದುವರಿಸಲಾಗುವುದು. ಅಗತ್ಯವಿದ್ದರೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದು ತಿಳಿಸಿವೆ.

ಮುಚ್ಚಳಿಕೆ ಬರೆಸಿಕೊಂಡ ಪೊಲೀಸರು: ಹೊಸ ವರ್ಷಾಚರಣೆಯಂದು ಡ್ರಗ್ಸ್ ಮಾರಾಟ ಹೆಚ್ಚಾಗುವ ಮಾಹಿತಿ ತಿಳಿದಿರುವ ಪೊಲೀಸರು, ಹಳೆ ಪ್ರಕರಣದ ಆರೋಪಿಗಳನ್ನು ವಶಕ್ಕೆ ಪಡೆದು ಮುಚ್ಚಳಿಕೆ ಬರೆಸಿಕೊಳ್ಳುತ್ತಿದ್ದಾರೆ.

'ಡ್ರಗ್ಸ್ ಸಾಗಣೆ, ಮಾರಾಟ ಹಾಗೂ ಸೇವನೆಗೆ ಸಂಬಂಧಪಟ್ಟ ಅಪರಾಧಗಳನ್ನು ಎನ್‌ಡಿಪಿಎಸ್ ಕಾಯ್ದೆಯಡಿ ದಾಖಲಿಸಿಕೊಳ್ಳಲಾಗುತ್ತಿದೆ. ಪ್ರಕರಣದಲ್ಲಿ ಜೈಲಿಗೆ ಹೋಗಿದ್ದ ಸುಮಾರು 180 ಮಂದಿ ಜಾಮೀನು ಮೇಲೆ ಹೊರಗೆ ಬಂದಿದ್ದಾರೆ. ಅವರೆಲ್ಲರನ್ನೂ ವಶಕ್ಕೆ ಪಡೆದು ಮುಚ್ಚಳಿಕೆ ಬರೆಸಿಕೊಂಡು ಎಚ್ಚರಿಕೆ ನೀಡಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೆಂಪೇಗೌಡರ ಅವಹೇಳನ: ಚೇತನ್ ವಿರುದ್ಧ ಎನ್‌ಸಿಆರ್

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಅವರ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಅವಹೇಳನಕಾರಿ ಪೋಸ್ಟ್ ಪ್ರಕಟಿಸಿದ್ದ ಆರೋಪದಡಿ ನಟ ಚೇತನ್ ಕುಮಾರ್ ವಿರುದ್ಧ ಶೇಷಾದ್ರಿಪುರ ಠಾಣೆಯಲ್ಲಿ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಾಗಿದೆ.

'ವಕೀಲ ಆರ್.ಎಲ್.ಎನ್ ಮೂರ್ತಿ ಅವರು ದೂರು ನೀಡಿದ್ದಾರೆ. ಚೇತನ್ ವಿರುದ್ಧ ಎನ್‌ಸಿಆರ್ ದಾಖಲಿಸಿಕೊಳ್ಳಲಾಗಿದೆ. ನ್ಯಾಯಾಲಯದ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ದೂರಿನ ವಿವರ: 'ನಟನೆಂದು ಹೇಳಿಕೊಳ್ಳುತ್ತಿರುವ ವಿದೇಶಿ ಪ್ರಜೆ ಚೇತನ್, ನಾಡಪ್ರಭು ಕೆಂಪೇಗೌಡ ಅವರ ಬಗ್ಗೆ ಅವಹೇಳನಕಾರಿ ಪೋಸ್ಟ್ ಪ್ರಕಟಿಸಿದ್ದಾರೆ' ಎಂದು ಮೂರ್ತಿ ಅವರು ದೂರಿನಲ್ಲಿ ತಿಳಿಸಿದ್ದಾರೆ.

'ಚೇತನ್ ವಿರುದ್ಧ ಈಗಾಗಲೇ ಹಲವು ಪ್ರಕರಣಗಳು ದಾಖಲಾಗಿವೆ. ಪದೇ ಪದೇ ಗಣ್ಯ ವ್ಯಕ್ತಿಗಳ ವಿರುದ್ಧ ಈತ ಹೇಳಿಕೆ ನೀಡುತ್ತಿದ್ದಾನೆ. ಕಾನೂನಿನ ಚೌಕಟ್ಟಿನಲ್ಲಿ ಚೇತನ್ ಹೇಳಿಕೆಯು ಶಿಕ್ಷಾರ್ಹ ಅಪರಾಧವಾಗಿದೆ. ನಾಡಪ್ರಭು ಕೆಂಪೇಗೌಡ ಅವರು ಮಹಾನ್ ವ್ಯಕ್ತಿಯೆಂದು ಜನರು ಅಪಾರ ನಂಬಿಕೆ ಇಟ್ಟುಕೊಂಡಿದ್ದಾರೆ. ಚೇತನ್ ಅವರನ್ನು ಠಾಣೆಗೆ ಕರೆಸಿ ಸೂಕ್ತ ತಿಳಿವಳಿಕೆ ನೀಡಿ, ಅವಹೇಳನಕಾರಿ ಪೋಸ್ಟ್ ಅಳಿಸಿಹಾಕುವಂತೆ ಸೂಚಿಸಬೇಕು' ಎಂದು ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಅಪರಾಧ ಸುದ್ದಿಗಳು

ಮೊಬೈಲ್ ಟವರ್ ತೆರವು ಕಾರ್ಯಾಚರಣೆ ವೇಳೆ ಅವಘಡ

ವಿದ್ಯುತ್ ತಗುಲಿ ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಗ್ಗೆರೆ ಬಳಿಯ ಪಾರ್ವತಿನಗರದಲ್ಲಿ ಡಿ.8ರಂದು ಉರುಳಿಬಿದ್ದಿದ್ದ ಮೊಬೈಲ್ ಟವರ್ ತೆರವುಗೊಳಿಸಲು ಭಾನುವಾರ ಕಾರ್ಯಾಚರಣೆ ನಡೆಸುತ್ತಿದ್ದಾಗ ವಿದ್ಯುತ್ ತಗುಲಿ ಕಾರ್ಮಿಕ ಜಿತಿನ್ ಕುಮಾರ್ (20) ಮೃತಪಟ್ಟಿದ್ದಾರೆ.

'ಪಂಜಾಬ್‌ನ ಜಿತಿನ್ ಕುಮಾರ್, ಕ್ರೇನ್ ಆಪರೇಟರ್ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ವಿದ್ಯುತ್ ತಗುಲಿ ಕುಸಿದು ಬಿದ್ದಿದ್ದ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಮಾರ್ಗಮಧ್ಯೆಯೇ ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು' ಎಂದು ನಂದಿನಿ ಲೇಔಟ್ ಠಾಣೆ ಪೊಲೀಸರು ಮಾಹಿತಿ ನೀಡಿದರು.

'ಪಾರ್ವತಿನಗರದಲ್ಲಿ ಡಿ. 8ರಂದು ಹಳೆ ಕಟ್ಟಡವನ್ನು ತೆರವು ಮಾಡಲಾಗುತ್ತಿತ್ತು. ಪಕ್ಕದಲ್ಲಿದ್ದ ಮತ್ತೊಂದು ಕಟ್ಟಡದ ಚಾವಣಿಯಲ್ಲಿ ಮೊಬೈಲ್ ಟವರ್ ಇತ್ತು. ಹಳೆ ಕಟ್ಟಡ ತೆರವು ಮಾಡುತ್ತಿದ್ದಾಗ ಜೆಸಿಬಿ ಯಂತ್ರದ ಬಕೆಟ್, ಟವರ್‌ಗೆ ತಾಗಿತ್ತು. ಕೆಲ ಕ್ಷಣಗಳಲ್ಲಿ ಕಟ್ಟಡದ ಸಮೇತವಾಗಿ ಮೊಬೈಲ್ ಟವರ್ ಉರುಳಿಬಿದ್ದಿತ್ತು. ಕಟ್ಟಡದಲ್ಲಿ ಸಿಲುಕಿದ್ದ 11 ಮಂದಿಯನ್ನು ರಕ್ಷಿಸಲಾಗಿತ್ತು' ಎಂದು ಹೇಳಿದರು.

ಮೊಬೈಲ್ ಟವರ್ ತೆರವು ಕೆಲಸ: 'ಹಳೆ ಕಟ್ಟಡದ ಸ್ಥಳದಲ್ಲಿಯೇ ಮೊಬೈಲ್ ಟವರ್ ಬಿದ್ದಿತ್ತು. ಏರ್‌ಟೆಲ್ ಕಂಪನಿಗೆ ಸೇರಿದ್ದ ಮೊಬೈಲ್ ಟವರ್ ತೆರವು ಮಾಡಲು ಭಾನುವಾರ (ಡಿ.17) ಕೆಲಸ ಅರಂಭವಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಪಂಜಾಬ್‌ನ ಅಮರ್‌ಪ್ರೀತ್ ಸಿಂಗ್ ಮಾಲೀಕತ್ವದ ಕ್ರೇನ್ ಬಳಸಿಕೊಂಡು ಆಪರೇಟರ್ ವೀರೇಂದ್ರ ಸಿಂಗ್, ಮೊಬೈಲ್ ಟವರ್ ತೆರವು ಮಾಡುತ್ತಿದ್ದ. ಕ್ರೇನ್ ಪಕ್ಕದಲ್ಲಿ ನಿಂತಿದ್ದ ಜಿತಿನ್ ಕುಮಾರ್, ವೀರೇಂದ್ರ ಸಿಂಗ್ ಅವರಿಗೆ ಸಹಾಯ ಮಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಕ್ರೇನ್‌ಗೆ ಹೈಟೆನ್ಶನ್ ತಂತಿ ತಗುಲಿ ವಿದ್ಯುತ್ ಹರಿದಿತ್ತು. ಕ್ರೇನ್ ಮೇಲೆ ಕೈ ಇರಿಸಿದ್ದ ಜಿತಿನ್ ಕುಮಾರ್ ಅವರಿಗೆ ವಿದ್ಯುತ್ ತಗುಲಿತ್ತು. ಕ್ಷಣ ಮಾತ್ರದಲ್ಲಿ ಅವರು ಕುಸಿದು ಬಿದ್ದಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಏರ್‌ಟೆಲ್ ಕಂಪನಿ ವಿರುದ್ಧವೂ ಎಫ್‌ಐಆರ್: 'ಜಿತಿನ್ ಕುಮಾರ್ ಸಾವಿನ ಸಂಬಂಧ ಕುಟುಂಬಸ್ಥರು ಹಾಗೂ ಸ್ಥಳೀಯರು ಹೇಳಿಕೆ ನೀಡಿದ್ದಾರೆ. ಕ್ರೇನ್ ಆಪರೇಟರ್ ವೀರೇಂದ್ರ ಸಿಂಗ್, ಮಾಲೀಕ ಅಮರ್‌ಪ್ರೀತ್ ಸಿಂಗ್ ಹಾಗೂ ಏರ್‌ಟೆಲ್ ಕಂಪನಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಎಲ್ಲರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸ್ಫೋಟ: 9 ಮಂದಿ ಸಾವು

ಮುಂಬೈ: ಡ್ರೋನ್ ಮತ್ತು ಸ್ಫೋಟಕ ತಯಾರಿಕೆಯ ಕಾರ್ಖಾನೆಯೊಂದರಲ್ಲಿ ಸ್ಫೋಟ ಸಂಭವಿಸಿ 9 ಜನ ಮೃತಪಟ್ಟು, ಮೂವರು ಗಾಯಗೊಂಡ ಘಟನೆ ನಾಗ್ಪುರ ಜಿಲ್ಲೆಯಲ್ಲಿ ಭಾನುವಾರ ನಡೆದಿದೆ.

ಈ ದುರ್ಘಟನೆಯಲ್ಲಿ ಮೃತಪಟ್ಟವರಲ್ಲಿ ಆರು ಮಂದಿ ಮಹಿಳೆಯರು ಮತ್ತು ಮೂವರು ಪುರುಷರು ಇದ್ದಾರೆ. ಅಮರಾವತಿ– ನಾಗ್ಪುರ ರಸ್ತೆಯ ಬಜಾರ್‌ಗಾವ್ ಪ್ರದೇಶದಲ್ಲಿರುವ ಸೋಲಾರ್ ಇಂಡಸ್ಟ್ರೀಸ್ ಕಾರ್ಖಾನೆಯಲ್ಲಿ ಈ ಸ್ಫೋಟ ಸಂಭವಿಸಿದೆ. ಸ್ಫೋಟಕ್ಕೆ ಕಾರಣ ಇನ್ನೂ ತಿಳಿದುಬಂದಿಲ್ಲ. ಸೋಲಾರ್ ಇಂಡಸ್ಟ್ರೀಸ್ ಕಾರ್ಖಾನೆಯು ಡ್ರೋನ್ ಮತ್ತು ಸ್ಫೋಟಕಗಳನ್ನು ತಯಾರಿಸಿ, ಭಾರತೀಯ ಸೇನೆಗೆ ಪೂರೈಸುತ್ತಿತ್ತು. 'ಕಲ್ಲಿದ್ದಲು ಗಣಿಗಳಲ್ಲಿ ಬಳಸುವ ಬೂಸ್ಟರ್‌ಗಳನ್ನು ಉತ್ಪಾದಿಸುವ ಕಟ್ಟಡದಲ್ಲಿ ಈ ಘಟನೆ ಸಂಭವಿಸಿದೆ. ಉತ್ಪನ್ನಗಳನ್ನು ಸೀಲ್ ಮಾಡುವಾಗ ಸ್ಫೋಟ ಸಂಭವಿಸಿದೆ. ಪರಿಹಾರ ಕಾರ್ಯ ಕೈಗೊಳ್ಳಲಾಗಿದೆ' ಎಂದು ಸೋಲಾರ್ ಇಂಡಸ್ಟ್ರೀಸ್ ಹಿರಿಯ ಪ್ರಧಾನ ವ್ಯವಸ್ಥಾಪಕ ಆಶಿಶ್ ಶ್ರೀವಾಸ್ತವ್ ಹೇಳಿದ್ದಾರೆ. ಮೃತರಿಗೆ ತಲಾ ₹ 5 ಲಕ್ಷ ಪರಿಹಾರವನ್ನು ಮಹಾರಾಷ್ಟ್ರ ಸರ್ಕಾರ ಘೋಷಿಸಲಾಗಿದೆ. ಘಟನೆಯ ಬಗ್ಗೆ ತನಿಖೆಗೆ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಆದೇಶಿಸಿದ್ದಾರೆ. ಘಟನಾ ಸ್ಥಳದಲ್ಲಿ ಮೃತರ ಕುಟುಂಬಸ್ಥರು ಮತ್ತು ಕಾರ್ಖಾನೆಯ ಕಾರ್ಮಿಕರು ಪ್ರತಿಭಟನೆ ನಡೆಸುತ್ತಿದ್ದು, ಪೊಲೀಸ್ ಬಿಗಿ ಭದ್ರತೆ ಕಲ್ಪಿಸಲಾಗಿದೆ.

ಸುದ್ದಿ 2 ನಿಮಿಷ

ಮಹದೇವಯ್ಯ ಕೊಲೆ ಪ್ರಕರಣ ಬಂಧಿತರ ಸಂಖ್ಯೆ 2ಕ್ಕೆ ಏರಿಕೆ

ಚನ್ನಪಟ್ಟಣ (ರಾಮನಗರ): ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಅವರ ಬಾವ ಮಹದೇವಯ್ಯ ಪಿ. ಅವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಚನ್ನಪಟ್ಟಣ ಪೊಲೀಸರು ವಶಕ್ಕೆ ಪಡೆದಿದ್ದ ಇಬ್ಬರ ಪೈಕಿ, ಒಬ್ಬರನ್ನು ಬಂಧಿಸಿದ್ದಾರೆ. ಇದರೊಂದಿಗೆ ಪ್ರಕರಣದಲ್ಲಿ ಬಂಧಿತರಾದವರ ಸಂಖ್ಯೆ 2ಕ್ಕೇರಿದೆ.

ಈಗಾಗಲೇ ಬಂಧನದಲ್ಲಿರುವ ಪ್ರಮುಖ ಆರೋಪಿ ಮುರುಗೇಶನ್ ಸಹೋದರ ಪ್ರಭಾಕರ್ ಬಂಧಿತ. ಕೃತ್ಯದಲ್ಲಿ ಭಾಗಿಯಾಗಿರುವ ಅನುಮಾನದ ಮೇರೆಗೆ ಮುರುಗೇಶನ್ ಪತ್ನಿ ರಾಧಾ ಅವರನ್ನು ಸಹ ವಶಕ್ಕೆ ಪಡೆದಿರುವ ಪೊಲೀಸರು, ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ. ಜೊತೆಗೆ, ತಲೆ ಮರೆಸಿಕೊಂಡಿರುವ ಮತ್ತೊಬ್ಬ ಆರೋಪಿ ಮದನ್‌ಗಾಗಿ ಹುಡುಕಾಟ ಮುಂದುವರಿಸಿದ್ದಾರೆ.

'ಡಿ. 1ರಂದು ಮಹದೇವಯ್ಯ ಅವರ ಕೊಲೆ ನಡೆದಾಗಿನಿಂದ ರಾಧಾ ಎಂಟು ಮೊಬೈಲ್ ಸಿಮ್‌ಕಾರ್ಡ್‌ಗಳನ್ನು ಬದಲಿಸಿದ್ದಾಳೆ. ಹಾಗಾಗಿ, ಕೃತ್ಯದಲ್ಲಿ ಈಕೆ ಭಾಗಿಯಾಗಿರುವ ಕುರಿತು ಬಲವಾದ ಅನುಮಾನ ವ್ಯಕ್ತವಾಗಿದ್ದು, ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಿಬಿಎಂಪಿ ನೌಕರರ ಸಹಕಾರ ಸಂಘಕ್ಕೆ ನಿರ್ದೇಶಕರ ಆಯ್ಕೆ



ಬೆಂಗಳೂರು: ಬಿಬಿಎಂಪಿ ನೌಕರರ ಸಹಕಾರ ಸಂಘದ ನೂತನ ಆಡಳಿತ ಮಂಡಳಿಗೆ (2023–28) ನಿರ್ದೇಶಕರು ಆಯ್ಕೆಯಾಗಿದ್ದಾರೆ.

ಭಾನುವಾರ ನಡೆದ ಚುನಾವಣೆಯಲ್ಲಿ ಎ. ಅಮೃತ್ ರಾಜ್ (1,025 ಮತಗಳು), ಕೆ.ಜಿ. ರವಿ (814 ಮತಗಳು), ಸಿ.ಎಂ. ಮುನಿರಾಜು (676 ಮತಗಳು), ಮಹೇಶ ಎಂ (750 ಮತಗಳು), ಮಂಜುನಾಥ ಎಲ್. ಆರ್. (659 ಮತಗಳು), ಹರೀಶ್ ಕುಮಾರ್ (715 ಮತಗಳು), ಎನ್. ವಿನಯಕುಮಾರ್ (796 ಮತಗಳು) ಮತ್ತು ಕೆ.ಎನ್. ಗಂಗಾಧರ್ (ಲಾಲಿ) (804 ಮತಗಳು) ಆಯ್ಕೆಯಾಗಿದ್ದಾರೆ.

ಅವಿರೋಧ ಆಯ್ಕೆ: ರಾಜಶೇಖರ್, ಮಂಜುನಾಥ್ ಜೆ., ಅಕ್ಕಮಹಾದೇವಿ, ಮಹಾದೇವಿ ಸಂಗಪ್ಪ ಗಾಣಿಗೇರ, ವಾಣಿ ಆರ್.ಪಿ., ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರತ್ಯೇಕ ಅಪಘಾತ: ಮೂವರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೂರು ಕಡೆಗಳಲ್ಲಿ ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ಯುವತಿ ಸೇರಿ ಮೂವರು ಮೃತಪಟ್ಟಿದ್ದಾರೆ.

'ಹುಣಸಮಾರನಹಳ್ಳಿಯ ಬಿ. ಬಾನು (22), ಜಯನಗರದ 4ನೇ ಹಂತದ ರಾಮಕೃಷ್ಣರಾವ್ (87) ಹಾಗೂ ತಮಿಳುನಾಡಿನ ಚಿನ್ನಣ್ಣ (55) ಮೃತರು. ಮೂರು ಅಪಘಾತಕ್ಕೆ ಸಂಬಂಧಪಟ್ಟಂತೆ ಹುಳಿಮಾವು, ಜಯನಗರ ಹಾಗೂ ಚಿಕ್ಕಜಾಲ ಸಂಚಾರ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ನಂದಿ ಬೆಟ್ಟಕ್ಕೆ ಹೊರಟಿದ್ದ ಯುವತಿ: 'ಕ್ರೀಡಾ ಸಾಮಗ್ರಿ ಮಾರಾಟ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದ ಬಾನು, ಸ್ನೇಹಿತರು ಹಾಗೂ ಸಹೋದ್ಯೋಗಿಗಳ ಜೊತೆ ನಂದಿ ಬೆಟ್ಟಕ್ಕೆ ಹೋಗಲು ತೀರ್ಮಾನಿಸಿದ್ದರು. ಶನಿವಾರ ಬೆಳಿಗ್ಗೆ ಸ್ನೇಹಿತರಿಗಾಗಿ ಕಾಯುತ್ತ ಬೆಟ್ಟ ಹಲಸೂರಿನ ಕೆಳಸೇತುವೆ ಬಳಿ ನಿಂತಿದ್ದರು' ಎಂದು ಪೊಲೀಸರು ಹೇಳಿದರು.

'ಇದೇ ಮಾರ್ಗದಲ್ಲಿ ವೇಗವಾಗಿ ಬಂದಿದ್ದ ಗೂಡ್ಸ್ ವಾಹನವು ರಸ್ತೆ ಬದಿ ನಿಂತಿದ್ದ ಬಾನು ಅವರಿಗೆ ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡಿದ್ದ ಬಾನು, ಆಸ್ಪತ್ರೆಯಲ್ಲಿ ಭಾನುವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ. ಗೂಡ್ಸ್ ವಾಹನದ ಚಾಲಕನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ತಿಳಿಸಿದರು.

ನಿವೃತ್ತ ಬ್ಯಾಂಕ್ ಉದ್ಯೋಗಿ ಸಾವು: 'ಮೃತ ರಾಮಕೃಷ್ಣರಾವ್, ನಿವೃತ್ತ ಬ್ಯಾಂಕ್ ಉದ್ಯೋಗಿ. ಶನಿವಾರ ಸಂಜೆ ಕ್ಲಿನಿಕ್‌ಗೆ ಹೋಗಿ ಮನೆಗೆ ವಾಪಸು ಬರುತ್ತಿದ್ದರು. ರಸ್ತೆ ದಾಟುತ್ತಿದ್ದ ಸಂದರ್ಭದಲ್ಲಿ ಅವರಿಗೆ ಬೈಕ್‌ವೊಂದು ಡಿಕ್ಕಿ ಹೊಡೆದಿತ್ತು' ಎಂದು ಪೊಲೀಸರು ಹೇಳಿದರು.

'ತೀವ್ರ ಗಾಯಗೊಂಡಿದ್ದ ರಾಮಕೃಷ್ಣರಾವ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶನಿವಾರ ರಾತ್ರಿ ಅವರು ಮೃತಪಟ್ಟಿದ್ದಾರೆ. ಅಪಘಾತದ ಬಳಿಕ ಬೈಕ್ ಸವಾರ ಪರಾರಿಯಾಗಿದ್ದಾನೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ತಿಳಿಸಿದರು.

ಲಾರಿ ಚಾಲಕ ಸಾವು: 'ಚಾಲಕರಾಗಿದ್ದ ಚಿನ್ನಣ್ಣ, ಕೊಬ್ಬರಿ ಚೀಲಗಳನ್ನು ತುಂಬಿದ್ದ ಲಾರಿ ಚಲಾಯಿಸಿಕೊಂಡು ಬನ್ನೇರುಘಟ್ಟ – ಎಲೆಕ್ಟ್ರಾನಿಕ್ ಸಿಟಿ ರಸ್ತೆಯಲ್ಲಿ ಶನಿವಾರ ರಾತ್ರಿ ಹೊರಟಿದ್ದರು. ರಸ್ತೆಬದಿಯಲ್ಲಿ ಬಿಬಿಎಂಪಿ ಕಸ ಸಾಗಣೆ ವಾಹನ ನಿಲ್ಲಿಸಲಾಗಿತ್ತು. ಅದೇ ವಾಹನಕ್ಕೆ ಲಾರಿ ಡಿಕ್ಕಿ ಹೊಡೆದಿತ್ತು. ಚಾಲಕ ಚಿನ್ನಣ್ಣ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ಚೀನಾಕ್ಕೆ ಪಾಠ ಕಲಿಸಿದ ಭಾರತೀಯ ಸೇನೆ'

ನವದೆಹಲಿ (ಪಿಟಿಐ): 'ನರಿ ಬುದ್ಧಿಯ ಮತ್ತು ನೆರೆಯ ಸಣ್ಣಪುಟ್ಟ ದೇಶಗಳನ್ನು ಸಾಲದ ಮರ್ಜಿಯಲ್ಲಿ ಬೀಳಿಸಿಕೊಳ್ಳುವ ತಂತ್ರಗಾರಿಕೆಯ ಚೀನಾ ತನ್ನ ದರ್ಪವನ್ನು ವಿಶ್ವಕ್ಕೆ ತೋರಿಸಲು ಕಾಲುಕೆರೆದುಕೊಂಡು ಬಂದಾಗ ಭಾರತೀಯ ಸೇನೆ ತಕ್ಕ ಬುದ್ಧಿ ಕಲಿಸಿದೆ' ಎಂದು ಈ ಹಿಂದಿನ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಮಕುಂದ್ ನರವಣೆ ಹೇಳಿದ್ದಾರೆ.

2020ರ ಜೂನ್‌ನಲ್ಲಿ ಪೂರ್ವ ಲಡಾಖ್‌ನಲ್ಲಿ ಚೀನಾದ ಆಕ್ರಮಣಕ್ಕೆ ಭಾರತೀಯ ಸೇನೆ ನೀಡಿದ ತಕ್ಕ ಪ್ರತ್ಯುತ್ತರದ ಬಗ್ಗೆ ನರವಣೆ ಅವರು ತಮ್ಮ ಆತ್ಮಚರಿತ್ರೆ 'ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿ'ಯಲ್ಲಿ ಮಹತ್ವದ ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ.

ಮುಖ್ಯಮಂತ್ರಿಯಿಂದ ಪ್ರಧಾನಿ ಭೇಟಿ ನಾಳೆ

ಹೈಕಮಾಂಡ್ ನಾಯಕರ ಭೇಟಿಗೆ ಸಿಎಂ ಜೊತೆ ಡಿಸಿಎಂ ದೆಹಲಿಗೆ ಪ್ರಯಾಣ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ 19ರಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಲಿದ್ದಾರೆ. ಅಂದು ಬೆಳಿಗ್ಗೆ 11.30ಕ್ಕೆ ಭೇಟಿಗೆ ಪ್ರಧಾನಿ ಸಚಿವಾಲಯದಿಂದ ಸಮಯ ನಿಗದಿಯಾಗಿದೆ.

ಈ ಭೇಟಿಯ ಸಂದರ್ಭದಲ್ಲಿ ಪ್ರಧಾನಿ ಜೊತೆ ರಾಜ್ಯದಲ್ಲಿನ ಬರ ಪರಿಸ್ಥಿತಿ, ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ಪರಿಹಾರ ಬಿಡುಗಡೆ, ನರೇಗಾ ಯೋಜನೆಯಡಿ ಮಾನವ ದಿನಗಳನ್ನು ಹೆಚ್ಚಿಸಬೇಕೆಂಬ ಬೇಡಿಕೆಯೂ ಸೇರಿದಂತೆ ಅಭಿವೃದ್ಧಿ ವಿಚಾರಗಳನ್ನು ಸಿದ್ದರಾಮಯ್ಯ ಪ್ರಸ್ತಾಪಿಸಲಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ.

21ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆ ನಡೆಯಲಿದೆ. ಈ ಸಭೆಯಲ್ಲಿ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾಗವಹಿಸಲಿದ್ದಾರೆ.

ದೆಹಲಿಯಲ್ಲಿ ವಾಸ್ತವ್ಯ ಹೂಡಲಿರುವ ಇಬ್ಬರು ನಾಯಕರು, ಮುಂಬರುವ ಲೋಕಸಭೆ ಚುನಾವಣೆಗೆ ಕಾರ್ಯತಂತ್ರ ರೂಪಿಸಲು ಮತ್ತು ನಿಗಮ– ಮಂಡಳಿಯ ನೇಮಕದ ಪಟ್ಟಿ ಅಂತಿಮಗೊಳಿಸುವ ಕುರಿತು ಹೈಕಮಾಂಡ್ ನಾಯಕರ ಜೊತೆ ಚರ್ಚೆ ನಡೆಸಲಿದ್ದಾರೆ.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಜೊತೆ ಚರ್ಚಿಸಿ, ನಿಗಮ– ಮಂಡಳಿಗಳಿಗೆ ನೇಮಕ ಪಟ್ಟಿಗೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಈಗಾಗಲೇ ಅಂತಿಮರೂಪ ನೀಡಿದ್ದಾರೆ. ಈ ಪಟ್ಟಿಗೆ ಪಕ್ಷದ ವರಿಷ್ಠರ ಮುದ್ರೆ ಬೀಳಬೇಕಿದೆ.

ಲೋಕಸಭೆ ಚುನಾವಣೆಗೆ ಪಕ್ಷದ ಸಂಭವನೀಯ ಅಭ್ಯರ್ಥಿಗಳ ಆಯ್ಕೆಗೆ ರಚಿಸಿದ ಸಚಿವರ ನೇತೃತ್ವದ ತಂಡ ಕೆಲವು ಕ್ಷೇತ್ರಗಳ ಪಟ್ಟಿಯನ್ನು ನೀಡಿದೆ. ಇನ್ನೂ ಕೆಲವರು ಪಟ್ಟಿ ನೀಡಬೇಕಿದೆ. ಈ ಬಗ್ಗೆಯೂ ಇಬ್ಬರು ನಾಯಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ ಜೊತೆ ಚರ್ಚೆ ನಡೆಸಲಿದ್ದಾರೆ.

ವರಿಷ್ಠರಿಗೆ ಪಟ್ಟಿ: 'ನಿಗಮ– ಮಂಡಳಿಗಳಿಗೆ ನೇಮಕ ಪಟ್ಟಿಯನ್ನು ಪಕ್ಷದ ವರಿಷ್ಠರಿಗೆ ರವಾನಿಸಿದ್ದು, ಅದಕ್ಕೆ ಅಂಕಿತ ಪಡೆಯಬೇಕಾಗಿದೆ. ಹೀಗಾಗಿ ರಾಜ್ಯದ ನಾಯಕರು ದೆಹಲಿಗೆ ತೆರಳುತ್ತಿದ್ದೇವೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ. ಶಿವಕುಮಾರ್ ಹೇಳಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದ ಬಳಿ ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಹೈಕಮಾಂಡ್ ನಾಯಕರು ನಮ್ಮನ್ನು ಕರೆದಿಲ್ಲ. ನಾವೇ ಹೋಗುತ್ತಿದ್ದೇವೆ' ಎಂದರು.

ಪ್ರತಾಪ್ ಸಿಂಹ ಹುಡುಗನಲ್ಲ: 'ಸಂಸತ್ ಭದ್ರತಾ ವೈಫಲ್ಯ ಪ್ರಕರಣದಲ್ಲಿ ಪ್ರತಾಪ್ ಸಿಂಹ ಅವರನ್ನು ಸಿಲುಕಿಸಲಾಗುತ್ತಿದೆಯೇ' ಎಂದು ಕೇಳಿದ ಪ್ರಶ್ನೆಗೆ, 'ಅವರನ್ನು ಯಾರು ಸಿಲುಕಿಸುತ್ತಾರೆ? ಪ್ರತಾಪ್ ಸಿಂಹ ಅವರೇನೂ ಸಣ್ಣ ಹುಡುಗನಲ್ಲ. ನಾನೂ ಹುಡುಗನಲ್ಲ. ಇದು ನಮ್ಮ ಜವಾಬ್ದಾರಿ ಅಷ್ಟೇ' ಎಂದರು

ಸುಳ್ಳು ಕೇಸು ದಾಖಲಿಸದಂತೆ ಸೂಚನೆ: ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಟಿ.ಎ. ನಾರಾಯಣ ಗೌಡ ಅವರು ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಕನ್ನಡದಲ್ಲಿ ನಾಮಫಲಕಗಳನ್ನು ಹಾಕಲು ನಾರಾಯಣ ಗೌಡರು ಹೋರಾಟ ಮಾಡುತ್ತಿದ್ದು, ಅವರ ವಿರುದ್ಧ ಪ್ರಕರಣ ದಾಖಲಾಗಿದೆ. ಕರ್ನಾಟಕದಲ್ಲಿ ಕನ್ನಡದಲ್ಲಿ ನಾಮಫಲಕ ಹಾಕುವಂತೆ ಆದೇಶವಿದೆ. ಅವರ ವಿರುದ್ಧ ಯಾರೋ ದೂರು ನೀಡಿದ್ದಾರೆ. ಈ ಬಗ್ಗೆ ಮಾತನಾಡಲು ಬಂದಿದ್ದರು' ಎಂದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.


'ಬೀದಿ ದೀಪಗಳನ್ನು ಅಳವಡಿಸಿ'

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಸಂಪರ್ಕ ಕಲ್ಪಿಸುವ ಗೊಟ್ಟಿಗೆರೆಯ ನೈಸ್ ರಸ್ತೆಯಿಂದ ಬನ್ನೇರುಘಟ್ಟ ವೃತ್ತದವರೆಗೆ ನೂತನವಾಗಿ ನಿರ್ಮಿಸಿರುವ ರಾಜ್ಯ ಹೆದ್ದಾರಿಯ ವಿಭಜಕಗಳಲ್ಲಿ ಬೀದಿ ದೀಪಗಳನ್ನು ಅಳವಡಿಸಬೇಕು. ಪ್ರತಿನಿತ್ಯ ಇಲ್ಲಿ ಸಹಸ್ರಾರು ವಾಹನಗಳು ಸಂಚರಿಸುತ್ತವೆ. ರಾತ್ರಿ ವೇಳೆಯಲ್ಲಿ ರಸ್ತೆ ಸಂಪೂರ್ಣ ಕತ್ತಲಿನಿಂದ ಕೂಡಿರುತ್ತದೆ. ಇದರಿಂದ, ರಸ್ತೆ ದಾಟುವುದು ಕಷ್ಟವಾಗುತ್ತಿದೆ. ಅಪಘಾತಗಳು ಸಂಭವಿಸುವ ಸಾಧ್ಯತೆಯೂ ಇದೆ. ಆದ್ದರಿಂದ ಬೀದಿದೀಪಗಳನ್ನು ಅಳವಡಿಸಬೇಕು. ಜೊತೆಗೆ ಸೂಚನಾ ಫಲಕಗಳನ್ನು ಹಾಕಬೇಕು.

ಮನೋಜ್, ಸ್ಥಳೀಯ ನಿವಾಸಿ



ಗೊಟ್ಟಿಗೆರೆಯ ನೈಸ್ ರಸ್ತೆಯಿಂದ ಬನ್ನೇರುಘಟ್ಟ ವೃತ್ತದವರೆಗೆ ನಿರ್ಮಿಸಿರುವ ಹೆದ್ದಾರಿ.



ಲಕ್ಷ್ಮೀಕಾಂತ ಉದ್ಯಾನದ ಹತ್ತಿರದ ರಸ್ತೆಯಲ್ಲಿರುವ ಕಸ.

'ರಸ್ತೆಯಲ್ಲಿನ ಕಸ ತೆರವುಗೊಳಿಸಿ'

ಪದ್ಮನಾಭನಗರದ ಲಕ್ಷ್ಮೀಕಾಂತ ಉದ್ಯಾನದ ಹತ್ತಿರದ ರಸ್ತೆಯಲ್ಲಿ ರಾಶಿಗಟ್ಟಲೇ ಕಸ ಹಾಕಲಾಗಿದೆ. ಇದರಿಂದ ಈ ಪ್ರದೇಶವೆಲ್ಲ ಗಬ್ಬೆದ್ದು ನಾರುತ್ತಿದೆ. ಮರದ ಟೊಂಗೆಗಳು, ಒಣಗಿದ ಎಲೆಗಳು, ಮನೆಯ ಹಸಿ, ಒಣ ಕಸವನ್ನು ಪ್ಲಾಸ್ಟಿಕ್ ಬ್ಯಾಗ್‌ಗಳಲ್ಲಿ ತುಂಬಿಕೊಂಡು ಬಂದು ಎಸೆಯುತ್ತಿದ್ದು, ತಿಪ್ಪೆಗುಂಡಿಯಾಗಿ ಮಾರ್ಪಟ್ಟಿದೆ. ಜೊತೆಗೆ ಸೊಳ್ಳೆಗಳ ಉತ್ಪತ್ತಿ ತಾಣವಾಗಿದೆ. ಪಕ್ಕದಲ್ಲಿ ಉದ್ಯಾನ ಇರುವುದರಿಂದ ವಾಯುವಿಹಾರಕ್ಕೆ ಬರುವವರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಇದೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಮಾಡಿದರು ಪ್ರಯೋಜನವಾಗಿಲ್ಲ.

ಅಭಿ, ಸ್ಥಳೀಯ ನಿವಾಸಿ

'ಚರಂಡಿ ಮೇಲಿನ ಚಪ್ಪಡಿ ಕಲ್ಲು ಸರಿಪಡಿಸಿ'

ಟಿ. ದಾಸರಹಳ್ಳಿ ವಾರ್ಡ್‌ನ ಬಾಗಲಗುಂಟೆಯ ಬಿಬಿಎಂಪಿ ಕಚೇರಿ ಹಿಂಭಾಗದ ಎಂಇಐ ಲೇಔಟ್‌ನ 5ನೇ ಮುಖ್ಯರಸ್ತೆಯ 3ನೇ ಅಡ್ಡರಸ್ತೆಯ ಚರಂಡಿ ಮೇಲೆ ಹಾಕಲಾಗಿದ್ದ ಚಪ್ಪಡಿ ಕಲ್ಲು ಕುಸಿದಿದೆ. ಚರಂಡಿ ಮೇಲಿನ ಚಪ್ಪಡಿ ಕಲ್ಲು ಸರಿಪಡಿಸುವಂತೆ ಬಿಬಿಎಂಪಿಗೆ ಮನವಿ ಸಲ್ಲಿಸಿದ್ದೇವೆ. ಆದರೆ ಕ್ರಮ ಕೈಗೊಂಡಿಲ್ಲ. ನಾಲ್ಕು ತಿಂಗಳಿಂದ ಪರಿಸ್ಥಿತಿ ಹೀಗೆ ಇದೆ. ಇದರಿಂದ ವಾಹನ ಸಂಚಾರಕ್ಕೆ ಅನನುಕೂಲವಾಗುತ್ತಿದ್ದು, ವಾಹನ ಸವಾರರು ಬಿದ್ದು ಗಾಯ ಮಾಡಿಕೊಂಡಿರುವ ಘಟನೆಗಳು ಸಹ ನಡೆದಿವೆ.

ಪ್ರಭು, ಸ್ಥಳೀಯ ನಿವಾಸಿ



ಎಂಇಐ ಲೇಔಟ್‌ನ ರಸ್ತೆಯಲ್ಲಿರುವ ಚರಂಡಿ ಮೇಲಿನ ಕಲ್ಲುಗಳು ಬಿದ್ದಿರುವುದು.



'ವಿದ್ಯುತ್ ಕಂಬದಲ್ಲಿ ನೇತಾಡುತ್ತಿರುವ ತಂತಿಗಳು'

ವಿದ್ಯಾರಣ್ಯಪುರದ ವೇಣುಗೋಪಾಲ ಬಡಾವಣೆಯ 6ನೇ ಮುಖ್ಯರಸ್ತೆಯ ಪಕ್ಕದಲ್ಲಿರುವ ವಿದ್ಯುತ್ ಕಂಬದಲ್ಲಿ ಅಪಾಯಕಾರಿ ತಂತಿಗಳು ನೇತಾಡುತ್ತಿವೆ. ಇಲ್ಲಿ ಯಾವುದೇ ರೀತಿಯ ಸುರಕ್ಷತಾ ಕ್ರಮಗಳನ್ನು ಕೈಗೊಂಡಿಲ್ಲ. ಅವಘಡಗಳು ಸಂಭವಿಸುವ ಮುನ್ನ ಬೆಸ್ಕಾಂ ಅಧಿಕಾರಿಗಳು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು.

ಜಿ.ಎಸ್. ಪ್ರಕಾಶ್, ಸ್ಥಳೀಯ ನಿವಾಸಿ

'ಪಾದಚಾರಿ ಮಾರ್ಗದಲ್ಲಿನ ಗುಂಡಿ ಮುಚ್ಚಿ'

ಚಾಲುಕ್ಯ ವೃತ್ತದ ಬಳಿಯ ಖನಿಜ ಭವನದ ಎದುರಿನ ಪಾದಚಾರಿ ಮಾರ್ಗದಲ್ಲಿ ಗುಂಡಿ ಅಗೆದು ಹಾಗೆಯೇ ಬಿಡಲಾಗಿದೆ. ಇದು ಪಾದಚಾರಿಗಳ ಓಡಾಟಕ್ಕೆ ಸಂಚಕಾರ ತಂದಿದೆ. ಈ ರಸ್ತೆಯಲ್ಲಿ ಹೆಚ್ಚಾಗಿ ವೃದ್ಧರು ಹಾಗೂ ಕಾಲೇಜು ವಿದ್ಯಾರ್ಥಿಗಳು ಸಂಚರಿಸುತ್ತಾರೆ. ಹೀಗಾಗಿ ಸಂಜೆ ವೇಳೆಯಲ್ಲಿ ಗುಂಡಿ ಕಾಣದೆ ಅನೇಕರು ಬಿದ್ದು ಗಾಯಗೊಂಡಿರುವ ನಿದರ್ಶನಗಳಿವೆ. ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ ಪಾದಚಾರಿ ಮಾರ್ಗವನ್ನು ನಿರ್ಮಿಸಲಾಗಿದೆ. ಜೊತೆಗೆ, ಇಲ್ಲಿ ಅಳವಡಿಸಿರುವ ಬೀದಿ ದೀಪಗಳು ಸಮರ್ಪಕವಾಗಿ ಬೆಳಗುತ್ತಿಲ್ಲ. ಕೂಡಲೇ ಬಿಬಿಎಂಪಿ ಇಲ್ಲಿನ ಗುಂಡಿ ಮುಚ್ಚಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಮುರಳಿ ದೇಸಾಯಿ, ಸ್ಥಳೀಯ ನಿವಾಸಿ



ಖನಿಜ ಭವನದ ಎದುರಿನ ಪಾದಚಾರಿ ಮಾರ್ಗದಲ್ಲಿ ಗುಂಡಿ ಬಿದ್ದಿರುವುದು.

ನಗರದಲ್ಲಿ ಇಂದು

ಅತ್ಯಾಧುನಿಕ ಲೀನಿಯರ್ ಆ್ಯಕ್ಸಿಲರೇಟರ್ ರೇಡಿಯೇಶನ್ ಥೆರಪಿ ಸೌಲಭ್ಯದ ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ದಿನೇಶ್ ಗುಂಡೂರಾವ್, ಬೈರತಿ ಸುರೇಶ್, ಡಾ. ಶರಣಪ್ರಕಾಶ ಪಾಟೀಲ, ಡಿ.ವಿ. ಸದಾನಂದಗೌಡ, ಆಯೋಜನೆ ಮತ್ತು ಸ್ಥಳ: ಸ್ಮೃತಿ ಆಡಿಟೋರಿಯಂ, ಬೆಂಗಳೂರು ಬ್ಯಾಪ್ಟಿಸ್ಟ್ ಆಸ್ಪತ್ರೆ, ಹೆಬ್ಬಾಳ, ಬೆಳಿಗ್ಗೆ 11

'ಅಭಯಲಕ್ಷ್ಮಿ' ದತ್ತಿ ಪ್ರಶಸ್ತಿ ಪ್ರದಾನ: ಕೆ.ಪಿ. ಪುತ್ತೂರಾಯ, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪುರಸ್ಕೃತರು: ಎಚ್.ಎ. ಪಾರ್ಶ್ವನಾಥ, ಪ್ರೇಮಾ ಭಟ್, ಉಪಸ್ಥಿತಿ: ಪಿ. ಜಯಲಕ್ಷ್ಮಿ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 11

ಕೆ. ಚಂದ್ರಶೇಖರ್ ಅವರಿಗೆ ಅಭಿನಂದನಾ ಸಮಾರಂಭ: ಅತಿಥಿಗಳು: ವಿ. ನಾಗರಾಜ್, ಡಾ. ವೀರಬ್ರಹ್ಮಚಾರಿ, ಅಧ್ಯಕ್ಷತೆ: ಜಾಣಗೆರೆ ವೆಂಕಟರಾಮಯ್ಯ, ಆಯೋಜನೆ: ಭಗವಾನ್ ಬುದ್ಧ ಹೋಮಿಯೊಪಥಿಕ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಮಧ್ಯಾಹ್ನ 2ರಿಂದ



ಬರಗೂರು ರಾಮಚಂದ್ರಪ್ಪ

ಮುಮ್ತಾಜ್ ಬೇಗಂ ಅವರ 'ಭೂಮಿ ಬೆಳಕಿನ ಬರಗೂರು ಕಾವ್ಯ' ಪುಸ್ತಕ ಬಿಡುಗಡೆ: ಕರೀಗೌಡ ಬೀಚನಹಳ್ಳಿ, ಅತಿಥಿ: ಸೌಮ್ಯ ಕೋಡೂರು, ಅಧ್ಯಕ್ಷತೆ: ರಾಜಪ್ಪ ದಳವಾಯಿ, ಉಪಸ್ಥಿತಿ: ಬರಗೂರು ರಾಮಚಂದ್ರಪ್ಪ, ಸಿದ್ದು ಬಿರಾದಾರ, ಸಿ.ಕೆ. ರಾಮೇಗೌಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಜೀವನ್ ಪಬ್ಲಿಕೇಷನ್ಸ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

'2024ರ ದಿನದರ್ಶಿಕೆ' ಬಿಡುಗಡೆ: ಎಸ್.ಟಿ. ಸೋಮಶೇಖರ್, ಅತಿಥಿಗಳು: ಮುದ್ದು ಮೋಹನ್, ಎಂ. ಸತೀಶ್, ಮಂಜುನಾಥ್ ಪಿ., ಆಯೋಜನೆ ಮತ್ತು ಸ್ಥಳ: ನೆಮ್ಮದಿ ವಿಶ್ರಾಂತಿಧಾಮ, ವಿದ್ಯಾಮಾನ್ಯನಗರ, ಆಂಧ್ರಹಳ್ಳಿ, ಸಂಜೆ 5.30

'ವಕೀಲ ವಿಭೂಷಣ' ಪ್ರಶಸ್ತಿ–2023 ಪ್ರದಾನ: ಉದ್ಘಾಟನೆ: ಪಿ.ಬಿ. ವರಾಳೆ, 'ವಕೀಲರ ವಾಹಿನಿ' ಪತ್ರಿಕೆ ಬಿಡುಗಡೆ: ಕೆ. ಶಶಿಕಿರಣ ಶೆಟ್ಟಿ, ಪ್ರಶಸ್ತಿ ಪ್ರದಾನ: ವೀರಪ್ಪ ಮೊಯ್ಲಿ, ಪ್ರಶಸ್ತಿ ಪುರಸ್ಕೃತರು: ಬಿ.ವಿ. ಆಚಾರ್ಯ, ಅತಿಥಿಗಳು: ಎ.ವಿ. ಚಂದ್ರಶೇಖರ, ಅಶೋಕ ಹಾರನಹಳ್ಳಿ, ವಿವೇಕ ಸುಬ್ಬಾರೆಡ್ಡಿ, ಅಧ್ಯಕ್ಷತೆ: ಉದಯ ಹೊಳ್ಳ, ಆಯೋಜನೆ: ವಕೀಲರ ವಾಹಿನಿ, ಸ್ಥಳ: ಎನ್‌ಜಿಒ ಹಾಲ್, ಕಬ್ಬನ್ ಉದ್ಯಾನ, ಸಂಜೆ 5



ಪಿ.ಬಿ.ವರಾಳೆ


'ಆಧುನಿಕತೆ ಮತ್ತು ಶರಣ ಸಂಸ್ಕೃತಿ' ಕುರಿತು ದತ್ತಿ ಉಪನ್ಯಾಸ: ನಿರ್ಮಲಾ ಎಲಿಗಾರ, ಸನ್ಮಾನ: ಸಿ. ಸೋಮಶೇಖರ್, ಮಂಜುಳಾ ಪರಮೇಶ್, ಅಧ್ಯಕ್ಷತೆ: ಎಸ್. ಷಡಕ್ಷರಿ, ಆಯೋಜನೆ: ಸದಾಶಿವನಗರ ವೀರಶೈವ ಸಮಾಜ, ಸ್ಥಳ: ಬೃಂದಾವನ್ ಹಾಲ್, ಸದಾಶಿವನಗರ ಕ್ಲಬ್, ಸಂಜೆ 6.30

ಜನಪದ ನೃತ್ಯೋತ್ಸವ: ಅತಿಥಿಗಳು: ಶ್ರೀನಾಥ್, ಚಂದ್ರಶೇಖರ್, ಜನಾರ್ದನ, ಮಾಲತಿ, ಆಯೋಜನೆ: ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ, ಸ್ಥಳ: ಲಾಸ್ಯರಂಜಿನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 6.30


ನಟರಾಜ್ ಹುಳಿಯಾರ್ ಅವರು ಬರೆದಿರುವ 'ಡೈರೆಕ್ಟ್ ಆ್ಯಕ್ಷನ್' (ಎಂ.ಡಿ. ನಂಜುಂಡಸ್ವಾಮಿ ಹೋರಾಟ ಗಾಥ) ನಾಟಕ ಪ್ರದರ್ಶನ: ನಿರ್ದೇಶನ: ಕಬಡ್ಡಿ ನರೇಂದ್ರಬಾಬು, ಮುಖ್ಯಪಾತ್ರದಲ್ಲಿ: ಸಂಪತ್ ಮೈತ್ರೇಯ, ಆಯೋಜನೆ: ಸಮತಾ ಚಿಂತನಾ, ಸ್ಥಳ: ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in


ಸರಳ ಸಜ್ಜನ ರಾಜಕಾರಣಿ, ಸೋಲಿಲ್ಲದ
ಸರದಾರ, ದೇಶದ ಉಜ್ವಲ ಭವಿಷ್ಯಕ್ಕಾಗಿ
ಕ್ಷೇತ್ರದಲ್ಲಿ ಹಗಲಿರುಳು ಶ್ರಮಿಸುತ್ತಿರುವ
ಏಕೈಕ ರಾಜಕಾರಣಿ... ಬೆಂಗಳೂರು
ಗ್ರಾಮಾಂತರ ಲೋಕಸಭಾ ಕ್ಷೇತ್ರದ
ಜನಪ್ರಿಯ ಕಾಂಗ್ರೆಸ್ ಸಂಸದರಾದ
ಸನ್ಮಾನ್ಯ ಶ್ರೀ
ಡಿ.ಕೆ. ಸುರೇಶ್
ರವರಿಗೆ
ಜನ್ಮದಿನದ
ಶುಭಾಶಯಗಳು
ಡಿ.ಕೆ.ಸುರೇಶ್ ಅಣ್ಣನವರಿಗೆ ದೇವರು ಆಯಸ್ಸು ,
ಆರೋಗ್ಯ, ಐಶ್ವರ್ಯ ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ...
ಶುಭ ಕೋರುವವರು
ಡಾ. ಆರ್. ಪ್ರಭಾಕರ್ ರೆಡ್ಡಿ
ಕಾಂಗ್ರೆಸ್ ಮುಖಂಡರು, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ



ಗಣಿತವೇಕೆ ಕಬ್ಬಿಣದ ಕಡಲೆ?



ಗಣಿತ ಬಾರದವರು ದಡ್ಡರು ಎಂದು ಬಿಂಬಿಸಿದಾಗ ಲೆಕ್ಕ ಮಾಡಲು ತನಗೆ ಬರದೇ ಹೋದರೆ ಎನ್ನುವ ಭಯ ಉಂಟಾಗುವುದು ಸಹಜ. ಡಿ.22 ರಾಷ್ಟ್ರೀಯ ಗಣಿತ ದಿನ. ಈ ಹಿನ್ನೆಲೆಯಲ್ಲಿ ಗಣಿತ ಕಲಿಕೆಯ ವಿಶ್ಲೇಷಣೆ ಇಲ್ಲಿದೆ...

ಆರ್. ಶ್ರೀನಾಗೇಶ್

ಏಳನೆಯ ತರಗತಿಯಿಂದ ಹತ್ತನೆಯ ತರಗತಿಯ ವಿದ್ಯಾರ್ಥಿಗಳ ಬಗ್ಗೆ 2021ರಲ್ಲಿ ನಡೆಸಲಾದ ಒಂದು ಅಧ್ಯಯನದ ಪ್ರಕಾರ ಶೇ 82ರಷ್ಟು ವಿದ್ಯಾರ್ಥಿಗಳಲ್ಲಿ ಗಣಿತ ಕಂಡರೆ ಭಯ ಇರುವುದು ಕಂಡು ಬಂದಿದೆ. ಗಣಿತ ಎಂದರೆ ಕಬ್ಬಿಣದ ಕಡಲೆ ಎಂದು ಅನೇಕರು ನಂಬಿದ್ದಾರೆ. ವಯಸ್ಕರಲ್ಲಿಯೂ ನನಗೆ ಲೆಕ್ಕ ಬರಲ್ಲ ಅನ್ನುವವರೇ ಹೆಚ್ಚು. ಕೆಲವರು ಮಾತ್ರ ಅದೇ ಗಣಿತದಲ್ಲಿ ಅಪ್ರತಿಮ ಯಶಸ್ಸು ಗಳಿಸುತ್ತಾರೆ.

ಕಾರಣವೇನಿರಬಹುದು?

ಗಣಿತ ಎಂದಾಗ ಒಂದು ಲೆಕ್ಕವನ್ನು ಬಿಡಿಸುವುದು ಎಂಬುದು ಸಾಮಾನ್ಯ ನಂಬಿಕೆ. ಹೀಗೆ ಬಿಡಿಸಲು ಒಂದು ಸಿದ್ಧಾಂತದ ಆಧಾರದ ಮೇಲೆ ಪ್ರಯತ್ನವನ್ನು ಮಾಡಬೇಕು. ಆ ಪ್ರಯತ್ನ ಹಂತಹಂತವಾಗಿ ಸಾಗಬೇಕು. ಶೇ 50ರಷ್ಟು ಸಿದ್ಧಾಂತವನ್ನೂ, ಶೇ 45ರಷ್ಟು ಕ್ರಮವನ್ನೂ ಒಳಗೊಂಡಿರುತ್ತದೆ.

ಈ ಸಿದ್ಧಾಂತವನ್ನು ಅರ್ಥ ಮಾಡಿಕೊಳ್ಳಲು ಪರದಾಡುವಿಕೆ ಮತ್ತು ಹಂತಗಳನ್ನು ನೆನಪಿಟ್ಟುಕೊಳ್ಳಲು ಪ್ರಯಾಸ ಪಡುವುದೇ ಗಣಿತವನ್ನು ಅಯ್ಯೋ, ಕಷ್ಟ ಎನ್ನುವಂತೆ ಬಿಂಬಿಸಿರುತ್ತದೆ. ಸಿದ್ಧಾಂತವನ್ನು ಅರ್ಥ ಮಾಡಿಕೊಳ್ಳಲು ಸತತವಾಗಿ ಗಮನವನ್ನು ಕೇಂದ್ರೀಕರಿಸಬೇಕು. ಅದರಲ್ಲಿ ಎಡವಿದರೆ, ಸಿದ್ಧಾಂತ ಸರಿಯಾಗಿ ಅರ್ಥವಾಗದು. ಕ್ರಮದಲ್ಲಿ ಒಂದೆಡೆ ತಪ್ಪಾದರೂ ಹೆಜ್ಜೆ ಮುಂದೆ ಸಾಗದು.

ಮನೆಯ ವಾತಾವರಣ ಎರಡನೆಯ ಕಾರಣ. ಹಿರಿಯರು ಗಣಿತವನ್ನು ನೋಡುವ ದೃಷ್ಟಿ, ಗಣಿತದಲ್ಲಿ ಅವರ ಸಾಧನೆ ಕೂಡ ಪ್ರಭಾವ ಬೀರುತ್ತದೆ. ಗಣಿತ ಬಾರದವರು ದಡ್ಡರು ಎಂದು ಬಿಂಬಿಸಿದಾಗ ಲೆಕ್ಕ ಮಾಡಲು ತನಗೆ ಬರದೇ ಹೋದರೆ ಎನ್ನುವ ಭಯ ಕಾಡಲು ಪ್ರಾರಂಭವಾಗುತ್ತದೆ. ಸಿದ್ಧಾಂತ ವಿವರಿಸುವಾಗ ಈ ಭಯ ಮನಸ್ಸನ್ನು ಆವರಿಸಿಕೊಂಡು ವಿವರಣೆಯ ಮೇಲೆ ಗಮನ ಕೇಂದ್ರೀಕರಿಸಲು ಅಡ್ಡ ಬರುತ್ತದೆ. ಅಥವಾ ಸಿದ್ಧಾಂತ ವಿವರಿಸುತ್ತಿರುವ ವಿಧಾನ ಬೋರ್ ಎನಿಸಬಹುದು. ಬುನಾದಿ ಅಭದ್ರವಾದಾಗ ಅದನ್ನು ಅವಲಂಬಿಸಿದ ಹೆಜ್ಜೆಗಳು ಅಸ್ಥಿರವಾಗುತ್ತವೆ.

ಈ ಕಾರಣಗಳಿಂದಾಗಿ ವಿದ್ಯಾರ್ಥಿಗಳು ಗಣಿತ ಕಲಿಕೆಯ ಬಗ್ಗೆ ಕೀಳರಿಮೆ ಹೊಂದಿರುತ್ತಾರೆ. ಅವರು ತೆಗೆದುಕೊಂಡ ಅಂಕಗಳ ಮೇಲೆ ಅವರ 'ದಡ್ಡತನ' ಪದೇಪದೇ ಎತ್ತಿ ತೋರಿಸುವುದು, ದೈಹಿಕ ನ್ಯೂನತೆಗಳನ್ನು ಆಧರಿಸಿ ಅವರಿಗಿಡುವ ಅಡ್ಡ ಹೆಸರುಗಳು, ಆ ಸಮಯದಲ್ಲಿ ವಯೋಸಹಜವಾಗಿ ಕಾಣಿಸಿಕೊಳ್ಳುವ ಆಲಸ್ಯವನ್ನು ಹೀಯಾಳಿಸುವುದು, ಪದೇಪದೇ ಒಂದಲ್ಲ ಒಂದು ಕಾರಣಕ್ಕೆ ನಿಂದಿಸುತ್ತಿರುವುದು ಅವರಲ್ಲಿ ಕೀಳರಿಮೆ ಹೆಚ್ಚಿಸಬಹುದಾದ ಸನ್ನಿವೇಶಗಳು.

ಶೇ 6ರಷ್ಟು ಮಂದಿಗೆ ಕಲಿಕಾ ತೊಂದರೆ ಇರುತ್ತದೆ. ಎಷ್ಟೋ ಪೋಷಕರು ಈ ತೊಂದರೆ ಇರಬಹುದು ಎಂದು ಒಪ್ಪುವುದೇ ಇಲ್ಲ. 'ಸೋಮಾರಿ ಅಷ್ಟೆ. ಸರಿಯಾಗಿ ಪ್ರಯತ್ನವನ್ನು ಮಾಡಿದರೆ ಕಲಿಯಬಹುದು' ಎಂದೇ ವಾದಿಸುತ್ತಾರೆ. ಕಲಿಯುವ ಆಸಕ್ತಿಯಿದ್ದರೂ ಕಲಿಯಲಾಗದೆ ಪರದಾಡುವ ಮಕ್ಕಳೂ ಇರುತ್ತಾರೆ. ಅವರ ಸಮಸ್ಯೆಯನ್ನು ಗುರುತಿಸುವುದರಲ್ಲಿ ನಾವು ವಿಫಲರಾಗುತ್ತೇವೆ.

ಮಕ್ಕಳು ಪ್ರೌಢಶಾಲೆಯ ಹಂತಕ್ಕೆ ಬರುವ ವೇಳೆಗೆ ಗಣಿತ ಕುರಿತಂತೆ ಪೋಷಕರ ಮತ್ತು ಶಿಕ್ಷಕರ ನಡವಳಿಕೆಗಳು ಅವರ ಮನಸ್ಸಿನಲ್ಲಿ ಆಲೋಚನೆಗಳನ್ನು ನಿರ್ಮಿಸಿಬಿಟ್ಟಿರುತ್ತದೆ. ನಮ್ಮ ನಿಜಜೀವನಕ್ಕೆ ಈ ಗಣಿತ ಯಾಕೆ ಬೇಕು ಎಂಬ ಪ್ರಶ್ನೆ ಕಾಡುತ್ತದೆ. ಅದಕ್ಕೆ ಉತ್ತರವನ್ನು ಪೋಷಕರಾಗಲೀ, ಶಿಕ್ಷಕರಾಗಲೀ ಕೊಡದೇ ಹೋದರೆ ಕಲಿಯುವ ಆಸಕ್ತಿ ಮೂಡುವುದಿಲ್ಲ. 'ಮಕ್ಕಳಿಗೆ ಸ್ಕೂಲ್ ಮನೇಲಲ್ವೇ' ಎಂದು ಕೈಲಾಸಂ ಅವರು ಹೇಳಿದಂತೆ ಗಣಿತ ಕಲಿಯಲು ಕಷ್ಟವಲ್ಲ, ಸರಿಯಾದ ಕ್ರಮಬದ್ಧ ಕಲಿಕೆ ಸಾಧ್ಯವಿದೆ ಎಂಬ ಪ್ರೋತ್ಸಾಹಕ ನುಡಿಗಳನ್ನು ಮನೆಯಲ್ಲಿ ಪೋಷಕರು ಮಾತನಾಡಬೇಕು. ಅದು ತಮಗೂ ಕಷ್ಟವಾಗುತ್ತಿತ್ತು ಎಂದು ಹೇಳುವ ಬದಲಿಗೆ ಕಲಿಯಲು ಯಾವರೀತಿ ಪ್ರಯತ್ನಿಸಬೇಕು ಎಂದು ಗೊತ್ತಿರಲಿಲ್ಲ ಎಂದು ಹೇಳಿದಾಗ ಮಕ್ಕಳ ಮನಸ್ಸಿನಲ್ಲಿ ಗಣಿತ ಕುರಿತು ಪೂರ್ವಗ್ರಹ ಮೂಡುವುದಿಲ್ಲ.

ಕಲಿಸುವುದರಲ್ಲಿ ಸೃಜನಶೀಲತೆಯ ಅಗತ್ಯವಿದೆ. ವಿಮಾನ ಹೇಗೆ ಹಾರುವುದು ಎಂದು ಶಿಕ್ಷಕರು ವಿವರಿಸಿದಾಗ ಅರ್ಥವಾಗಲಿಲ್ಲ ಎಂದ ವಿದ್ಯಾರ್ಥಿಗಳನ್ನು ಕೊಠಡಿಯಿಂದ ಆಚೆ ಕರೆದುಕೊಂಡು ಹೋಗಿ ಹಾರುವ ಹಕ್ಕಿಗಳನ್ನು ತೋರಿಸುತ್ತ ಹೇಗೆ ತಮ್ಮ ಶಿಕ್ಷಕರು ಅರ್ಥ ಮಾಡಿಸಿದರು ಎಂಬುದನ್ನು ಅಬ್ದುಲ್ ಕಲಾಂ ಅವರು ಸ್ಮರಿಸಿದ್ದರು. ನೈಜ ಬದುಕಿಗೆ ಹೊಂದಿಸಿ, ಸೃಜನಶೀಲ ಮಾರ್ಗಗಳ ಮೂಲಕ ಮಕ್ಕಳಲ್ಲಿ ಗಣಿತ ಕಲಿಯುವ ಆಸಕ್ತಿಯನ್ನು ಮೂಡಿಸುವುದು ಸಾಧ್ಯವಿದೆ. ಬದುಕಿನ ಎಲ್ಲ ಆಯಾಮಗಳಲ್ಲಿ ಲೆಕ್ಕದ ಬಳಕೆ ಆಗುತ್ತಲೇ ಇರುತ್ತದೆ.

ಅಡುಗೆ ಮನೆಯಲ್ಲಿ ಎಷ್ಟು ಅಕ್ಕಿಗೆ ಎಷ್ಟು ನೀರು ಇಡಬೇಕು, ದೋಸೆ ಮಾಡಲು ಹಿಟ್ಟು ಮಾಡಲು ಯಾವ ಧಾನ್ಯಗಳನ್ನು ಯಾವ ಪ್ರಮಾಣದಲ್ಲಿ ಬೆರೆಸಬೇಕು ಎಂಬ ಲೆಕ್ಕಾಚಾರ ಅಡುಗೆ ಮಾಡುವವರಿಗೆ ಎಷ್ಟು ಕರಾರುವಾಕ್ಕಾಗಿ ತಿಳಿದಿರುತ್ತದೆ. ಆ ಪೋಷಕರು ಲೆಕ್ಕ ಮಾಡಲು ಬಾರದ ದಡ್ಡರೇ?

ಕ್ರಿಕೆಟ್ ಆಟದಲ್ಲಿ ಎಷ್ಟು ಓವರುಗಳಲಿ ಎಷ್ಟು ರನ್ ಗಳಿಸಬೇಕು ಎಂದು ನಿಖರವಾಗಿ ಅಂದಾಜು ಮಾಡುವ ವಿದ್ಯಾರ್ಥಿಗಳು ಶಾಲಾ ಲೆಕ್ಕಗಳನ್ನು ಮಾಡುವಾಗ ಮಾತ್ರ ದಡ್ಡರಾಗಿಬಿಡುವರೇ?

ಹಿಂದಿನ ಕಾಲದವರು ಒಗಟುಗಳನ್ನು ಹೇಳುತ್ತಿದ್ದರು. ಒಗಟು ಬಿಡಿಸಲು; ಸಮಸ್ಯೆಯನ್ನು ವಿಶ್ಲೇಷಿಸಿ, ತಿಳಿದಿರುವ ಅಂಶಗಳನ್ನು ಕ್ರೋಡೀಕರಿಸಿ ಉತ್ತರವನ್ನು ಕೊಡುತ್ತಿದ್ದರು. ಶಾಲೆಯಲ್ಲಿ ಕೊಡುವ ಲೆಕ್ಕದಲ್ಲಿ 'ಎಕ್ಸ್'ಅನ್ನು ಕಂಡು ಹಿಡಿಯುವುದೂ ಈ ಒಗಟು ಬಿಡಿಸಿದಂತೆಯೇ ಅಲ್ಲವೆ!

ಪದಬಂಧ, ಸುಡೊಕುಗಳಲ್ಲಿಯೂ ಇದೇ ಕ್ರಮವನ್ನು ಅನುಸರಿಸುವುದು. ಆಟಗಳ ಮೂಲಕ, ಕಥೆಗಳ ಮೂಲಕ ಗಣಿತದಲ್ಲಿ ಆಸಕ್ತಿಯನ್ನು ಮೂಡಿಸುವುದು ಸಾಧ್ಯವಿದೆ. ವಿದ್ಯಾರ್ಥಿಗಳನ್ನು ತಂಡಗಳಾಗಿ ವಿಂಗಡಿಸಿ, ಅವರಲ್ಲಿ ಸಮಸ್ಯೆ ಬಿಡಿಸುವ ಸ್ಪರ್ಧೆಯನ್ನು ಏರ್ಪಡಿಸಬಹುದು. ಅದರಲ್ಲಿ ಗೆದ್ದವರನ್ನು ಮಾತ್ರ ಹೊಗಳದೆ ಸೋತವರ ಪ್ರಯತ್ನವನ್ನೂ ಹೊಗಳಬೇಕು. ಅವರ ಪ್ರಯತ್ನದಲ್ಲಿ ಆದ ಲೋಪಗಳನ್ನು ಅವರೇ ಗುರುತಿಸಿ ತಿದ್ದಿಕೊಳ್ಳುವಂತೆ ಮಾಡಬೇಕು. ವಿಷಯದಲ್ಲಿ ಆಸಕ್ತಿ ಮೂಡಿಸುವುದೇ ಶಿಕ್ಷಕರು ಮಾಡಬೇಕಾದ ಬಹುಮುಖ್ಯ ಕೆಲಸ. ❖

ಏನು ಮಾಡಬಹುದು?

- ಪ್ರತಿದಿನ ಒಂದೆಡೆ ಕುಳಿತು, ಕಣ್ಣು ಮುಚ್ಚಿ ಎರಡು ನಿಮಿಷ ದೀರ್ಘ ಉಸಿರಾಡಿ.
- ಗಣಿತದ ಸಮಸ್ಯೆಗಳನ್ನು ಬಿಡಿಸಲು ಮನಸ್ಸು ಮುಕ್ತವಾಗಿ, ಆತಂಕರಹಿತವಾಗಿರಬೇಕು. ಇದಕ್ಕೆ ಮಂದಗತಿಯ, ದೀರ್ಘ ಉಸಿರಾಟ ನೆರವಾಗುವುದು.
- ಮನಸ್ಸಿನಲ್ಲಿಯೇ ಕೆಲವು ಅಂಕಿಗಳ ಗುಣಾಕಾರ ಮತ್ತು ಭಾಗಾಕಾರವನ್ನು ಮಾಡುತ್ತ ಹೋಗಿ. ಹೀಗೆ ಮಾಡುವಾಗ ಉತ್ತರಕ್ಕೆ ಆದ್ಯತೆ ನೀಡದೆ ಗುಣಾಕಾರ/ಭಾಗಾಕಾರ ಮಾಡುವಿಕೆಗೆ ಗಮನ ಕೊಡಿ. ದೊಡ್ಡ ಸಂಖ್ಯೆಗಳನ್ನ ಹಾಕಿಕೊಳ್ಳುವುದು ಉತ್ತಮ. ಗಣಿತ ಕುರಿತಂತೆ ನಕಾರಾತ್ಮಕ ಆಲೋಚನೆಗಳನ್ನು ಕೈ ಬಿಡಿ.
- ಲೆಕ್ಕ ಮಾಡುವಾಗ ಅಯ್ಯೋ, ಲೆಕ್ಕ ಎಂದು ಮುಂದೂಡದೆ, ಅನ್ಯ ಆಕರ್ಷಣೆಗಳಿಗೆ ಅವಕಾಶವಿಲ್ಲದಂತೆ ಗಣಿತದ ಸಮಸ್ಯೆಗಳನ್ನು ಬಿಡಿಸುವುದರ ಕಡೆ ಗಮನ ಕೊಡಿ.
- ಸಿದ್ಧಾಂತವನ್ನು ಹಂತಹಂತವಾಗಿ ವಿಂಗಡಿಸಿಕೊಂಡು ಬರೆದು, ಅರ್ಥ ಮಾಡಿಕೊಳ್ಳಲು ಸಮಯವನ್ನು ಕೊಡಿ.
- ಸಿದ್ಧಾಂತಗಳನ್ನು ಬಾಯಿಪಾಠ ಮಾಡಬೇಡಿ. ಅರ್ಥ ಮಾಡಿಕೊಳ್ಳಿ.
- 'ನನಗೆ ಗಣಿತ ಬರದು' ಎನ್ನುವ ಯೋಚನೆ ಬಂದಾಗ, 'ನನಗೆ ಯಾಕೆ ಬರದು? ಅದೆಷ್ಟೋ ಮಂದಿಗೆ ಬರುತ್ತದೆ. ಅಂದಮೇಲೆ ನನಗೂ ಬರುವುದು' ಎಂಬ ಉತ್ತೇಜಕ ವಾಕ್ಯ ಭರವಸೆ ಮೂಡಿಸಬಲ್ಲದು.
- ಸತತ ಅಭ್ಯಾಸ ನೆನಪಿನಲ್ಲುಳಿಯಲು ನೆರವಾಗುವುದು.ಒಂದು ಸಮಸ್ಯೆಯನ್ನು ಬಿಡಿಸಿದ ನಂತರ, ಉತ್ತರದಿಂದ ಹಿಂದಕ್ಕೆ ಸಮಸ್ಯೆಯವರೆಗೆ ಓದಿ. ಇದು ಕ್ರಮವನ್ನು ನೆನಪಿಡಲು ನೆರವಾಗುವುದು.
- ಬದುಕಿಗೆ ಅನ್ವಯಿಸಿಕೊಳ್ಳಿ. ಹುರುಪು ಸಿಗುತ್ತದೆ.
- ಕೆಲವು ಗೆಳೆಯರು ತಂಡ ಮಾಡಿಕೊಂಡು ಒಟ್ಟಿಗೆ ಕಲಿಯಲು ಪ್ರಯತ್ನ ಮಾಡಿದರೆ, ಭಯ ಖಂಡಿತ ದೂರ ಹೋಗುವುದು.
- ಲೆಕ್ಕದಲ್ಲಿ ಕೊಟ್ಟಿರುವ ಅಂಶಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿಕೊಂಡರೆ, ಎಲ್ಲ ಅಂಶಗಳೂ ಒಟ್ಟಾಗಿ ಕಾಣಿಸುತ್ತವೆ. ಅನಂತರ ಅದನ್ನು ಬಿಡಿಸುವುದು ಸುಲಭವಾಗುವುದು.
- ಗಣಿತವನ್ನು ಮಣಿಸಿ ಮುನ್ನುಗ್ಗುವ ಶಕ್ತಿ ನಿಮ್ಮ ಮನಸ್ಸಿಗಿದೆ ಎಂಬುದನ್ನು ಸದಾಕಾಲ ನೆನಪಿಡಿ.

ವಿದ್ಯಾರ್ಥಿ ವೇತನ ಕೈಪಿಡಿ

ನಿಕಾನ್ ನೆರವು

- **ವಿವರ:** ನಿಕಾನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಛಾಯಾಗ್ರಹಣ-ಸಂಬಂಧಿತ ಕೋರ್ಸ್‌ಗಳನ್ನು ಕಲಿಯಲು ಆರ್ಥಿಕ ಬೆಂಬಲ ನೀಡುತ್ತದೆ.
- **ಅರ್ಹತೆ:** 12ನೇ ತರಗತಿಯನ್ನು ಪೂರ್ಣಗೊಳಿಸಿರುವ ಮತ್ತು ಮೂರು ತಿಂಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಛಾಯಾಗ್ರಹಣ-ಸಂಬಂಧಿತ ಕೋರ್ಸ್‌ಗಳನ್ನು ಕಲಿಯುತ್ತಿರುವ ಭಾರತೀಯ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ. ಕುಟುಂಬದ ವಾರ್ಷಿಕ ಆದಾಯವು ₹ 6 ಲಕ್ಷಕ್ಕಿಂತ ಕಡಿಮೆಯಿರಬೇಕು.
- **ಆರ್ಥಿಕ ಸಹಾಯ:** ₹ 1 ಲಕ್ಷ
- **ಅರ್ಜಿ ಸಲ್ಲಿಸಲು ಕೊನೆ ದಿನ:** 31-12-2023
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್ ಮೂಲಕ .
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/NSP10

ಕಾರ್ಟೇವಾ ಕೃಷಿವಿಜ್ಞಾನ

- **ವಿವರ:** ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕೃಷಿ ಕ್ಷೇತ್ರದಲ್ಲಿ ಸ್ನಾತಕೋತ್ತರ ಅಥವಾ ಡಾಕ್ಟರೇಟ್ ಕೋರ್ಸ್ ಕೈಗೊಳ್ಳಲು ಹಣಕಾಸಿನ ನೆರವು ನೀಡುವ ಉದ್ದೇಶವಿದೆ.
- **ಅರ್ಹತೆ:** ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ (ಐಸಿಎಆರ್)ನಿಂದ ಮಾನ್ಯತೆ ಪಡೆದ ಹೋಂ ಸೈನ್ಸ್, ಬಯೋಟೆಕ್ನಾಲಜಿ, ಎಂಟಮಾಲಜಿ, ಬ್ರೀಡಿಂಗ್ ಇತ್ಯಾದಿ ಸ್ಟ್ರೀಮ್‌ಗಳಲ್ಲಿ ಸ್ನಾತಕೋತ್ತರ (ಎಂಬಿಎ/ಎಂ.ಎಸ್‌ಸಿ./ ಎಂ.ಟೆಕ್.) ಅಥವಾ ಪಿಎಚ್.ಡಿ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿನಿಯರಿಗೆ ಮುಕ್ತವಾಗಿದೆ. ಅರ್ಜಿದಾರರು ಸರ್ಕಾರಿ ಕಾಲೇಜುಗಳಲ್ಲಿ ಮಾತ್ರ ಓದುತ್ತಿರಬೇಕು. ಕುಟುಂಬದ ವಾರ್ಷಿಕ ಆದಾಯ ₹6,00,000 ಅಥವಾ ಅದಕ್ಕಿಂತ ಕಡಿಮೆ ಇರಬೇಕು. ಕಾರ್ಟೇವಾ ಮತ್ತು ಬಡ್ಡಿ4ಸ್ಟಡಿ ಉದ್ಯೋಗಿಗಳ ಮಕ್ಕಳು ಅರ್ಹರಲ್ಲ. ಭಾರತದಾದ್ಯಂತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
- **ಆರ್ಥಿಕ ಸಹಾಯ:** ₹50,000
- **ಅರ್ಜಿ ಸಲ್ಲಿಸಲು ಕೊನೆ ದಿನ:** 30-12-2023
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/CASP1

ಫಾರ್ಮಕಾಲಜಿಯಲ್ಲಿ ಎಂ.ಫಾರ್ಮ ಮಾಡಿದರೆ ಸೂಕ್ತವೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ನಾನು ಬಿಫಾರ್ಮ ಮುಗಿಸಿದ್ದು, ಫಾರ್ಮಕಾಲಜಿ ಮತ್ತು ಔಷಧ ನಿಯಂತ್ರಣ ವಿಷಯಗಳಲ್ಲಿ ಎಂಫಾರ್ಮ ಮಾಡಲು ಇಚ್ಛಿಸಿದ್ದೇನೆ. ಯಾವ ವಿಷಯಗಳಲ್ಲಿ ಮಾಡಿದರೆ ಸೂಕ್ತ ತಿಳಿಸಿ/ ಅಭಿಷೇಕ್ ಪಟ್ಟೆ ನಾಗರಾಜ್, ದಾವಣಗೆರೆ.

ಬಿ.ಫಾರ್ಮ ನಂತರ ಪರ್ಯಾಯ ಪ್ರವೇಶದ ಮೂಲಕ ಫಾರ್ಮ್.ಡಿ (ಡಾಕ್ಟರ್ ಇನ್ ಫಾರ್ಮಸಿ) ಕೂಡಾ ಮಾಡಬಹುದು. ಫಾರ್ಮಕಾಲಜಿ, ಫಾರ್ಮಸ್ಯೂಟಿಕ್ಸ್, ಫಾರ್ಮಸ್ಯೂಟಿಕಲ್ ಟೆಕ್ನಾಲಜಿ, ಫಾರ್ಮಸ್ಯೂಟಿಕಲ್ ಮಾರ್ಕೆಟಿಂಗ್, ಗುಣಮಟ್ಟ ಮತ್ತು ನಿಯಂತ್ರಣ ವ್ಯವಹಾರಗಳು ಸೇರಿ ಈ ಕ್ಷೇತ್ರದ ಬಹುತೇಕ ವಿಭಾಗಗಳಿಗೆ ಬೇಡಿಕೆಯಿದೆ. ಆದರೆ, ಜ್ಞಾನ, ಕೌಶಲಗಳಲ್ಲಿ ವ್ಯತ್ಯಾಸಗಳಿದ್ದು, ಯಾವ ವಿಭಾಗ ಸೂಕ್ತವೆಂದು ಸ್ವಯಂ-ಮೌಲ್ಯಮಾಪನದಿಂದ ನಿರ್ಧರಿಸಿ.

ಎಂಫಾರ್ಮ/ಫಾರ್ಮ್.ಡಿ ನಂತರ ವಿಸ್ತಾರವಾಗಿ ಬೆಳೆಯುತ್ತಿರುವ ಫಾರ್ಮ ಔದ್ಯೋಗಿಕ ಕ್ಷೇತ್ರದ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು, ಕಾಲೇಜುಗಳು, ಆಸ್ಪತ್ರೆಗಳು ಮತ್ತು ಆರೋಗ್ಯ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು, ಪ್ರಯೋಗಾಲಯಗಳು, ಬಯೋಟೆಕ್ ಸಂಸ್ಥೆಗಳು, ಸೌಂದರ್ಯವರ್ಧಕ ಉತ್ಪಾದನಾ ಸಂಸ್ಥೆಗಳು, ಸರ್ಕಾರಿ ಇಲಾಖೆಗಳು ಮುಂತಾದ ವಲಯಗಳಲ್ಲಿ ಅವಕಾಶಗಳಿವೆ. ಇದಲ್ಲದೆ, ಫಾರ್ಮ ಕ್ಷೇತ್ರದ ಯಾವುದೇ ಪದವಿಯ ನಂತರ ಔಷಧಿಗಳ ಮಾರಾಟಕ್ಕೆ ಡ್ರಗ್ ಕಂಟ್ರೋಲ್ ಇಲಾಖೆಯಿಂದ ಸಿಗುವ ಪರವಾನಗಿಯಿಂದ ಮೆಡಿಕಲ್ ಸ್ಟೋರ್ ವ್ಯವಹಾರವನ್ನು ನಡೆಸಬಹುದು.

ಅನುಭವ ಮತ್ತು ನಿಬಂಧನೆಗಳ ಪ್ರಕಾರ ಔಷಧಿಗಳ ಉತ್ಪಾದನೆ ಮತ್ತು ಸಗಟು ವ್ಯಾಪಾರಕ್ಕೂ ಪರವಾನಗಿ ಪಡೆದು ಉದ್ಯಮಿಗಳಾಗಬಹುದು. ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: **https://www.youtube.com/channel/UCH-uglg9bBlyH5QQbn_Jjlw**

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು

ಹೆಚ್ಚಿನ ಪ್ರಶ್ನೆಗಳಿಗೆ https://www.praja vani.net/education-career/career ನೋಡಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಸಮಾಜ ವಿಜ್ಞಾನ : ಭೂಗೋಳಶಾಸ್ತ್ರ
ಅಧ್ಯಾಯ–11 ಭಾರತದ ಋತುಗಳು

10) ಮಳೆಗಾಲ ಬಗ್ಗೆ ಬರೆಯಿರಿ

ಉತ್ತರ:– (..........ಹಿಂದಿನ ಸಂಚಿಕೆಯಿಂದ)

ಭಾರತದ ಒಟ್ಟು ಮಳೆಯಲ್ಲಿ ಶೇ. 75ರಷ್ಟು ಈ ಕಾಲದಲ್ಲಿ ಬೀಳುವುದು. ನೈಋತ್ಯ ಮಾನ್ಸೂನ್ ಮಾರುತಗಳು ಭಾರತವನ್ನು ಎರಡು ಕವಲುಗಳಾಗಿ ಪ್ರವೇಶಿಸುತ್ತವೆ ಅವುಗಳೆಂದರೆ ಅರಬ್ಬಿ ಸಮುದ್ರ ಶಾಖೆ ಹಾಗೂ ಬಂಗಾಳಕೊಲ್ಲಿಯ ಶಾಖೆ. ಅರಬ್ಬಿ ಸಮುದ್ರ ಶಾಖೆಯು ಪಶ್ಚಿಮ ಘಟ್ಟಗಳಿಂದ ತಡೆಯಲ್ಪಟ್ಟು ಘಟ್ಟಗಳ ಪಶ್ಚಿಮ ಭಾಗಕ್ಕೆ ಹೆಚ್ಚು ಮಳೆ ಸುರಿಸುತ್ತವೆ. ಈ ಮಾರುತಗಳು ಪೂರ್ವಕ್ಕೆ ಮುಂದುವರೆದಂತೆ ಮಳೆ ಕಡಿಮೆಯಾಗುತ್ತದೆ. ಪಶ್ಚಿಮ ಘಟ್ಟಗಳ ಪೂರ್ವ ಭಾಗವು ಮಳೆಯ ನೆರಳಿನ ಪ್ರದೇಶವೆನಿಸಿದೆ. ಬಂಗಾಳಕೊಲ್ಲಿಯ ಶಾಖೆಯು ಮಯನ್ಮಾರ್ (ಬರ್ಮಾ) ಬಾಂಗ್ಲಾದೇಶ, ಭಾರತದ ಈಶಾನ್ಯ ಭಾಗ, ಹಿಮಾಲಯದ ತಪ್ಪಲು ಮತ್ತು ಉತ್ತರದ ಮೈದಾನಗಳ ಕಡೆಗೆ ಮಳೆಯನ್ನು ತರುತ್ತದೆ. ಉತ್ತರ ಭಾರತದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹೋದಂತೆಲ್ಲಾ ಮಳೆ ಕಡಿಮೆಯಾಗುತ್ತದೆ. ತಮಿಳುನಾಡು ಹೊರತುಪಡಿಸಿ ಭಾರತದ ಹೆಚ್ಚು ಭಾಗಕ್ಕೆ ನೈಋತ್ಯ ಮಾನ್ಸೂನ್ ಮಾರುತಗಳು ಮಳೆಯನ್ನು ಸುರಿಸುತ್ತದೆ.

11) ಭಾರತದಲ್ಲಿ ಮಾರುತಗಳ ನಿರ್ಗಮನ ಕಾಲ ಬಗ್ಗೆ ವಿವರಿಸಿ

ಉತ್ತರ: ಅಕ್ಟೋಬರ್ ತಿಂಗಳ ಕೊನೆಯ ಭಾಗದ ಒಳಗಾಗಿ ಭಾರತದ ಉಪಖಂಡದಲ್ಲಿ ಮಳೆ ಸುರಿದ ಪರಿಣಾಮವಾಗಿ ಉಷ್ಣಾಂಶವು ಕಡಿಮೆಯಾಗುತ್ತದೆ. ಅಲ್ಲದೆ ಸೂರ್ಯನ ಕಿರಣಗಳು ಕೂಡಾ ಈ ಅವಧಿಯಲ್ಲಿ ದಕ್ಷಿಣಾರ್ಧ ಗೋಳಾರ್ಧದಲ್ಲಿ ಲಂಬವಾಗಿ ಬೀಳುತ್ತವೆ. ಇದರಿಂದ ಉತ್ತರಾರ್ಧಗೋಳದಲ್ಲಿ ಉಷ್ಣಾಂಶವು ಕಡಿಮೆಯಾಗುತ್ತದೆ. ಪರಿಣಾಮವಾಗಿ ಆ ಪ್ರದೇಶವು ಹೆಚ್ಚು ಒತ್ತಡ ಪ್ರದೇಶವಾಗಿ ಪರಿವರ್ತನೆಯಾಗುತ್ತದೆ. ಅದಕ್ಕಾಗಿ ನೈಋತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್‌ನಿಂದ ಹಿಂದೆ ಸರಿಯಲು ಪ್ರಾರಂಭ ಮಾಡುತ್ತವೆ. ನಿಧಾನವಾಗಿ ನವೆಂಬರ್ ತಿಂಗಳ ಅಂತ್ಯದ ವೇಳೆಗೆ ಇವು ಬೀಸುವುದನ್ನು ನಿಲ್ಲಿಸುತ್ತವೆ. ಇದನ್ನೇ ಮಾನ್ಸೂನ್ ಮಾರುತಗಳ 'ನಿರ್ಗಮನ ಕಾಲ' ಅಥವಾ 'ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ' ಎಂದು ಕರೆಯುವರು. ಈ ಅವಧಿಯಲ್ಲಿ ಭಾರತವು ಶೇ. 13ರಷ್ಟು ಮಳೆಯನ್ನು ಪಡೆಯುತ್ತದೆ. ಈ ಕಾಲದಲ್ಲಿ ಉಷ್ಣವಲಯದ ಆವರ್ತ ಗಾಳಿಗಳು (ಚಂಡಮಾರುತ) ಬಂಗಾಳಕೊಲ್ಲಿ ಮತ್ತು ಅರಬ್ಬಿ ಸಮುದ್ರಗಳಲ್ಲಿ ನಿರ್ಮಿತಗೊಳ್ಳುತ್ತವೆ.

ಈ ಆವರ್ತ ಗಾಳಿಗಳು ಅಧಿಕ ವೇಗ ಹಾಗೂ ಮಳೆಯಿಂದ ಕೂಡಿರುತ್ತವೆ. ಇವು ಜೀವ ಹಾಗೂ ಆಸ್ತಿ ಹಾನಿಯನ್ನು ಉಂಟುಮಾಡುತ್ತವೆ. ಆದರೆ ಒಳನಾಡಿಗೆ ಸಾಕಷ್ಟು ಮಳೆ ತರುತ್ತವೆ.

12) ಭಾರತದಲ್ಲಿ ಚಳಿಗಾಲದ ಅವಧಿ ಯಾವಾಗ ಇರುತ್ತದೆ?

ಉತ್ತರ: ಭಾರತದಲ್ಲಿ ಚಳಿಗಾಲದ ಅವಧಿಯ ಡಿಸೆಂಬರ್‌ನಿಂದ ಆರಂಭವಾಗಿ ಫೆಬ್ರವರಿಯ ಕೊನೆಯವರೆಗೂ ಮುಂದುವರೆಯುವುದು.

13) ಭಾರತದಲ್ಲಿ ಇರುವ ಚಳಿಗಾಲದ ಬಗ್ಗೆ ವಿವರವಾಗಿ ವಿವರಿಸಿ

ಉತ್ತರ:– ಭಾರತದಲ್ಲಿ ಚಳಿಗಾಲದ ಅವಧಿಯ ಡಿಸೆಂಬರ್‌ನಿಂದ ಆರಂಭವಾಗಿ ಫೆಬ್ರವರಿಯ ಕೊನೆಯವರೆಗೂ ಮುಂದುವರೆಯುವುದು. ಈ ಅವಧಿಯಲ್ಲಿ ಉತ್ತರದ ರಾಜ್ಯಗಳಾದ ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ ಹಾಗೂ ಉತ್ತರದ ಮೈದಾನ ಕಡಿಮೆ ಉಷ್ಣಾಂಶವು ಕಂಡು ಬರುತ್ತದೆ. ಕೆಲವು ಕಡೆಗಳಲ್ಲಿ ಉಷ್ಣಾಂಶವು ನೀರು ಹೆಪ್ಪುಗಟ್ಟುವ ಬಿಂದುವಿಗಿಂತಲೂ ಕಡಿಮೆ ಇರುವುದು. ಆದರೆ ದಕ್ಷಿಣ ಭಾರತದಲ್ಲಿ ಉಷ್ಣಾಂಶವು ಸಾಧಾರಣವಾಗಿದ್ದು ಹವಾಮಾನವು ಹಿತಕರವಾಗಿರುತ್ತದೆ. ಭಾರತವು ತನ್ನ ವಾರ್ಷಿಕ ಮಳೆಯ ಶೇ. 2ರಷ್ಟನ್ನು ಮಾತ್ರ ಈ ಅವಧಿಯಲ್ಲಿ ಪಡೆಯುವದು. ಆದುದರಿಂದ ಚಳಿಗಾಲವು ಭಾರತದಲ್ಲಿ ಅತಿಕಡಿಮೆ ಮಳೆ ಬೀಳುವ ಅವಧಿಯಾಗಿದೆ.

14) ಭಾರತದಲ್ಲಿ ಸರಾಸರಿ ಮಳೆಯ ಪ್ರಮಾಣ ಎಷ್ಟು?

ಉತ್ತರ:–ದೇಶದ ಸರಾಸರಿ ಮಳೆಯ ಪ್ರಮಾಣ 118 ಸೆಂ.ಮಿ. ಗಳು

15) ಭಾರತದಲ್ಲಿ ಕಡಿಮೆ ಮಳೆಯ ಪ್ರದೇಶಗಳನ್ನು ಗುರುತಿಸಿ

ಉತ್ತರ:– ಪ್ರದೇಶದಲ್ಲಿ ವಾರ್ಷಿಕ ಸುಮಾರು 50 ಸೆಂ. ಮೀ ಗಳಿಗಿಂತ ಕಡಿಮೆ ಮಳೆ ಬೀಳುತ್ತದೆ. ರಾಜಸ್ಥಾನದ ಥಾರ್ ಮರುಭೂಮಿ ಹಾಗೂ ಅದಕ್ಕೆ ಹೊಂದಿಕೊಂಡುವಂತಿರುವ ಪಂಜಾಬ್, ಹರಿಯಾಣ, ಗುಜರಾತಿನ ಕಛ್‌ಪ್ರದೇಶ ಹಾಗೂ ಜಮ್ಮು ಮತ್ತು ಕಾಶ್ಮೀರ, ಮಹಾರಾಷ್ಟ್ರದ ಪೂರ್ವ ಭಾಗ, ಕರ್ನಾಟಕದ ಒಳನಾಡು ಕಡಿಮೆ ಮಳೆ ಬೀಳುವ ವಲಯವಾಗಿದೆ. ರಾಜಸ್ತಾನದ ಜೈಸಲ್ಮೇರ್ ಜಿಲ್ಲೆಯ ರೂಯ್ಲಿಯ ವಾರ್ಷಿಕ ಸರಾಸರಿ ಮಳೆಯ 8.3 ಸೆಂ ಮೀ ಗಳಷ್ಟಾಗಿದೆ. ಇದು ಮಳೆ ಭಾರತದಲ್ಲಿ ಅತಿಕಡಿಮೆ ಮಳೆಯನ್ನು ಪಡೆಯುವ ಪ್ರದೇಶವಾಗಿದೆ.

16) ಸಾಧಾರಣ ಮಳೆ ಪಡೆಯುವ ಪ್ರದೇಶದ ಬಗ್ಗೆ ಬರೆಯಿರಿ

ಉತ್ತರ:– ಇಲ್ಲಿ ವಾರ್ಷಿಕ ಸುಮಾರು 50 ರಿಂದ 250 ಸೆಂ.ಮೀ ಮಳೆ ಬೀಳುತ್ತದೆ. ಈ ಭಾಗಗಳನ್ನು ಅತಿ ಕಡಿಮೆ ಹಾಗೂ ಅತಿ ಹೆಚ್ಚು ಮಳೆಯ ಪ್ರದೇಶಗಳನ್ನು ಬಿಟ್ಟು ಭಾರತದ ಉಳಿದೆಲ್ಲಾ ಭಾಗಗಳನ್ನು ಒಳಗೊಂಡಿರುವುದು.

17) ಭಾರತದಲ್ಲಿ ಅಧಿಕ ಮಳೆಯ ಪ್ರದೇಶದ ಬಗ್ಗೆ ತಿಳಿಸಿ

ಉತ್ತರ : ವಾರ್ಷಿಕ ಸುಮಾರು 250 ಸೆಂ.ಮೀ. ಗಳಿಗಿಂತ ಹೆಚ್ಚು ಮಳೆ ಬೀಳುವ ಭಾಗಗಳನ್ನು ಅಧಿಕ ಮಳೆ ಬೀಳುವ ಪ್ರದೇಶಗಳೆಂದು ಗುರುತಿಸುತ್ತೇವೆ. ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗ, ಅಸ್ಸಾಂ ಹಾಗೂ ಇತರ ಪೂರ್ವ ರಾಜ್ಯಗಳು ಹಾಗೂ ಪಶ್ಚಿಮ ಬಂಗಾಳ ಈ ವಲಯದಲ್ಲಿ ಸೇರುತ್ತವೆ. ಮೇಘಾಲಯದ 'ಮಾಸಿನ್‌ರಾಮ್' ದೇಶದಲ್ಲಿಯೇ ಅತ್ಯಧಿಕ ಮಳೆ ಪಡೆಯುವುದು. ಇದು ಪ್ರಪಂಚದಲ್ಲಿಯೇ ಅತಿಹೆಚ್ಚು ಮಳೆಯನ್ನು ದಾಖಲಿಸಿದೆ.

18) ಭಾರತದ ವ್ಯವಸಾಯವನ್ನು "ಮಾನ್ಸೂನ್ ಜೊತೆಯಲ್ಲಿ ಆಡುವ ಜೂಜಾಟ" ಎಂದು ಕರೆಯುತ್ತಾರೆ. ಈ ಹೇಳಿಕೆಯನ್ನು ಸಮರ್ಥಿಸಿ

ಉತ್ತರ:– ಭಾರತದ ಜನತೆಯ ಪ್ರಧಾನ ಉದ್ಯೋಗವು ವ್ಯವಸಾಯವಾಗಿರುವುದರಿಂದ ನೈಋತ್ಯ ಮಾನ್ಸೂನ್ ಮಾರುತ ಗಳು ತರುವ ಮಳೆಯ ಮೇಲೆ ನಿಂತಿವೆ. ಈ ಮಳೆ ವಿಫಲವಾದರೆ ಬರಗಾಲ ಬರುವುದು. ಅತಿ ಹೆಚ್ಚಾದಾಗ ಪ್ರವಾಹ ಉಂಟಾಗಿ ಪ್ರಾಣ ಹಾನಿ ಮತ್ತು ಆಸ್ತಿಗಳಿಗೆ ಹಾನಿ ಉಂಟಾಗುತ್ತದೆ. ಆದ್ದರಿಂದಲೇ ಭಾರತದ ವ್ಯವಸಾಯವನ್ನು "ಮಾನ್ಸೂನ್ ಜೊತೆಯಲ್ಲಿ ಆಡುವ ಜೂಜಾಟ" ಎಂದು ಕರೆಯುತ್ತಾರೆ

ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿರಿ.

1) ದೇಶದಲ್ಲಿಯೇ ಅತಿಹೆಚ್ಚು ಉಷ್ಣಾಂಶ ಹೊಂದಿದ ಸ್ಥಳ ....ಆಗಿದೆ.

ಉತ್ತರ:– ಗಂಗಾನಗರ (ರಾಜಸ್ತಾನ)

2) ಅತಿಹೆಚ್ಚು ಮಳೆ ಬೀಳುವ ಋತುಮಾನ .... ಆಗಿದೆ.

ಉತ್ತರ:– ನೈಋತ್ಯ ಮಾನ್ಸೂನ್(ಮಳೆಗಾಲ)

3) ಭಾರತದಲ್ಲಿ ಅತಿ ಕಡಿಮೆ ಮಳೆ ಬೀಳುವ ಪ್ರದೇಶ ....

ಉತ್ತರ:– ರಾಜಸ್ತಾನದ ಜೈಸಲ್ಮೇರ್ ಜಿಲ್ಲೆಯ ರೂಯ್ಲಿ

4) ಭಾರತದಲ್ಲಿಯೇ ಅತಿ ಹೆಚ್ಚು ಮಳೆಯಾಗುವ ಸ್ಥಳ ....

ಉತ್ತರ:– ಮೌಸಿಮ್ ರಾಮ್ (ಮೇಘಾಲಯ)

5) ಭಾರತದ ವ್ಯವಸಾಯವನ್ನು ....ಮಳೆಯ ಜೊತೆಯಲ್ಲಿ ಆಡುವ ಜೂಜಾಟ ಎಂದು ಕರೆಯುತ್ತಾರೆ.

ಉತ್ತರ:– ಮಾನ್ಸೂನ್

6) ರಾಜಸ್ತಾನದ ಗಂಗಾನಗರವು .... ಸೆ. ಗಳಷ್ಟು ಉಷ್ಣಾಂಶ ದಾಖಲಾಗುತ್ತದೆ.

ಉತ್ತರ:– 52^0

7) ದಕ್ಷಿಣ ಭಾರತವು ....ಕಡೆಗಳಲ್ಲಿ ಸಾಗರಗಳಿಂದ ಆವೃತ್ತವಾಗಿರುವ ಕಾರಣ ಉಷ್ಣಾಂಶ ಸಾಧಾರಣವಾಗಿರುತ್ತದೆ

ಉತ್ತರ:– ಮೂರು

8) ಎಪ್ರಿಲ್ ಹಾಗೂ ಮೇ ತಿಂಗಳಲ್ಲಿ ಅಲ್ಲಲ್ಲಿ ಸ್ಥಳೀಯ ....ಮತ್ತು ಪ್ರಚಲನ ಪ್ರವಾಹಗಳಿಂದ ಮಳೆಯಾಗುತ್ತದೆ.

ಉತ್ತರ:– ಉಷ್ಣಾಂಶ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC CHEMISTRY

CHEMICAL KINETICS

32. What is meant by the order of the reaction?

Ans:- (.........Contd)

Eg:- The rate of the reaction $aA + bB + cC \rightarrow$ products; is given by the rate law as

$$\text{Rate} = -\frac{dx}{dt} = k[A]^p[B]^q[C]^r$$

then the order of the reaction, n, is $n = p + q + r$. Where, p, q, r are the orders with respect to individual reactants and overall order of the reaction is the sum of these exponents that is, $p + q + r$. The order of the reaction cannot be directly obtained from the balanced chemical equation. It is always obtained from the experimentally determined rate equation.

33. What is first order reaction?

Ans:- A chemical reaction in which the rate is directly proportional to the first power of the molar concentration of the reactant is a first order reaction.

Eg:- (a) Decomposition of nitrogen pentoxide

$$2N_2O_5 \rightarrow 4NO_2 + O_2$$

The experimental rate equation is -

$v = k[N_2O_5]^1$. Hence the order = 1

(b) The decomposition of ammonium nitrite in the aqueous solution.

$$NH_4NO_2 \rightarrow 2H_2O + N_2\uparrow$$

The experimental rate equation is -

$v = k[NH_4NO_2]^1$. Hence the order = 1

34. Show that the order of a reaction can be a fraction.

Ans:- Consider formation of hydrogen bromide,

$$H_2 + Br_2 \rightarrow 2HBr$$

Experimental rate equation for this reaction is

$$v = k[H_2]^1[Br_2]^{1/2}.$$

Hence, order of reaction is $1 + \frac{1}{2} = \frac{3}{2}$

(b) Consider the decomposition of acetaldehyde into methane and carbon monoxide.

$$CH_3CHO \rightarrow CH_4 + CO$$

Experimental rate equation is

$v = k[CH_3CHO]^{3/2}$. Hence, order $= \frac{3}{2}$

From the above illustrations it is proved that the order can be a fraction.

35. Give some examples for the second order reactions.

Ans:- Some examples for 2^{nd} order reactions are (a) Saponification of ethyl acetate

$$CH_3COOC_2H_5 + NaOH \rightarrow CH_3COONa + C_2H_5OH$$

The rate of the reaction is -

$v = k[CH_3COOC_2H_5][NaOH]$.

Hence the order = 1 + 1 = 2

(b) Formation of hydrogen iodide

$$H_2 + I_2 \rightarrow 2HI$$

The rate of the reaction is -

$v = k[H_2][I_2]$. Hence the order = 1 + 1 = 2

36. Give some examples for the third order reactions.

Ans:- Some examples for 3^{rd} order reactions are-

(a) Oxidation of stannous chloride by ferric chloride

$$2FeCl_3 + SnCl_2 \rightarrow 2FeCl_2 + SnCl_4$$

The rate of the reaction is -

$v = k[SnCl_2]^1[FeCl_3]^2$.

Hence the order = 1 + 2 = 3

(b) Reaction between nitric oxide and oxygen

$$2NO + O_2 \rightarrow 2NO_2$$

The rate of the reaction is –

$v = k[NO]^2[O_2]^1$. Hence order = 1+2=3

37. Mention some of the differences between the order and the molecularity of a reaction.

Ans:- Some of the differences between the order and the molecularity of a reaction are –

Order of a reaction	*Molecularity of a reaction*
It is the sum of the coefficients of the reacting species involved in the rate equation.	It is the number of reacting species involved in simultaneous collisions in an elementary reaction.
It is experimentally determined value.	It is a theoretical value.
It is derived from the rate equation.	It is derived from mechanism of reaction.
It depends upon pressure and temperature.	It is independent of pressure and temperature.
Order can be zero, a fraction or a whole number.	It is only a whole number.
The overall order of the multistep reaction is given by the slowest step only.	In a multistep reaction, the molecularities of all the steps are determined.

38. Mention the characteristics of the third order reaction?

Ans:- The characteristics of the third order reaction are as follows –

(a) The rate of the reaction increases 2^3 times when the concentration of each of the reactant is doubled

(b) The half life $\left(t_{1/2}\right)$ of the third order reaction is inversely proportional to the square of the initial concentration, if there is only one reactant or the concentration of all the reactants is in the ratio found in the stoichiometric equation.

$$t_{1/2} = \frac{3}{2a^2k} \text{ (or) } t_{1/2} \propto \frac{1}{a^2}$$

39. What is Activation energy (E_a)?

Ans:- The minimum extra energy that the (average) normal reacting molecule should acquire to attain threshold energy i.e., to form products, upon collision is called activation energy (E_a) of the reaction.

(Contd…….)

ಮೈಸೂರು ಮಂಜುನಾಥ್, ಪ್ರವೀಣ್ ಗೋಡ್ಖಿಂಡಿ, ವಿಜಯ ಪ್ರಕಾಶ್ ಅವರಿಗೆ ಗೌರವ

ಆಳ್ವಾಸ್ ವಿರಾಸತ್ ಪ್ರಶಸ್ತಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ: ಬಾನಂಗಳದಲ್ಲಿ ಬಣ್ಣಬಣ್ಣದ ಮೋಡಗಳು ಚಿತ್ತಾರ ಬಿಡಿಸುತ್ತಿದ್ದಂತೆ ಇಲ್ಲಿನ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆವರಣದಲ್ಲಿ ಸಂಗೀತ 'ತ್ರಿಮೂರ್ತಿಗಳು' ಪ್ರಶಸ್ತಿ ಸಂಭ್ರಮದಲ್ಲಿ ಪುಳಕಗೊಂಡರು.

ಶ್ರೀಮತಿ ವನಜಾಕ್ಷಿ ಕೆ.ಶ್ರೀಪತಿ ಭಟ್ ಬಯಲು ರಂಗಮಂಟಪದಲ್ಲಿ ನಡೆದ 'ಆಳ್ವಾಸ್ ವಿರಾಸತ್'ನ ಕೊನೆಯ ದಿನವಾದ ಭಾನುವಾರ ಸಂಜೆ ಪಿಟೀಲು ವಾದಕ ವಿದ್ವಾನ್ ಮೈಸೂರು ಎಂ.ಮಂಜುನಾಥ್, ಬಾನ್ಸುರಿ ಮಾಂತ್ರಿಕ ಧಾರವಾಡದ ಪಂಡಿತ್ ಪ್ರವೀಣ್ ಗೋಡ್ಖಿಂಡಿ ಮತ್ತು ಹಿನ್ನೆಲೆ ಗಾಯಕ ವಿಜಯ ಪ್ರಕಾಶ್ ಅವರಿಗೆ 'ಆಳ್ವಾಸ್ ವಿರಾಸತ್' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶಾಲು, ಸ್ಮರಣಿಕೆ, ಪ್ರಶಸ್ತಿ ಪತ್ರ ಮತ್ತು ತಲಾ ₹1 ಲಕ್ಷ ನಗದಿನೊಂದಿಗೆ ಗೌರವಿಸಲಾಯಿತು. ಪ್ರಶಸ್ತಿ ಪ್ರದಾನದ ಬೆನ್ನಲ್ಲೇ ಪ್ರತಿ ಕಲಾವಿದರಿಗೆ ವಿಶಿಷ್ಟ ರೀತಿಯಲ್ಲಿ ನಮನ ಸಲ್ಲಿಸಲಾಯಿತು. ನಳಿನಕಾಂತಿ ರಾಗದ 'ಮನವಿಯಾಳಕಿಂ ಚರ'ವನ್ನು ಪಿಟೀಲಿನಲ್ಲಿ ನುಡಿಸಿ ಮೈಸೂರು ಮಂಜುನಾಥ್ ಅವರಿಗೆ ಗೌರವ ಸಲ್ಲಿಸಲಾಯಿತು. ರಾಗ್ ರಂಗ್ ಖ್ಯಾತಿಯ ಅಲ್ಬಂನ ಹಾಡನ್ನು ಕೊಳಲಿನಲ್ಲಿ ನುಡಿಸಿ ಗೋಡ್ಖಿಂಡಿ ಅವರಿಗೆ ಮತ್ತು ಜೈ ಹೋ ಹಾಡಿನ ಝಲಕ್‌ನೊಂದಿಗೆ ವಿಜಯ ಪ್ರಕಾಶ್ ಅವರಿಗೆ ಗೌರವ ನೀಡಲಾಯಿತು.

ನಂತರ ಪನ್ನೀರು, ತಿಲಕ, ಪುಷ್ಪಾರ್ಚನೆ, ಆರತಿಯೊಂದಿಗೆ ಆಳ್ವಾಸ್‌ನ ವೈಶಿಷ್ಟ್ಯ ಮೆರೆಯಲಾಯಿತು. ಈ ವೇಳೆ ಕಲಾ ತಂಡ ಆಲಾಪಿಸಿದ 'ನಾದ ಸರಸ್ವತಿ...' ಹಾಡು ಜ್ಞಾನಾಮೃತ ಆರತಿಯ ಮೆರುಗು ತುಂಬಿತು.

ಮೂಡುಬಿದಿರೆ ಜೈನಮಠದ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯರು, ಮಣಿಪುರದ ಮಾಜಿ ಸಂಸದ ನಾರಾ ಸಿಂಗ್, ಸಂಸದ ನಳಿನ್ ಕುಮಾರ್ ಕಟೀಲ್, ಶಾಸಕ ವೇದವ್ಯಾಸ ಕಾಮತ್, ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯ, ಉದ್ಯಮಿ ಕೆ.ಶ್ರೀಪತಿ ಭಟ್, ಮುಖಂಡ ಅಭಯಚಂದ್ರ ಜೈನ್ ಇದ್ದರು.

ಹುಚ್ಚು ಮನಸ್ಸು ಅಪಾಯಕಾರಿ: ಪ್ರಾಸ್ತಾವಿಕ ಭಾಷಣದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಮೋಹನ ಆಳ್ವ ಅವರು, 'ಕಲೆಯನ್ನು ಆಸ್ವಾದಿಸಲಾಗದ ಮನಸ್ಸುಗಳು ಅಪಾಯಕಾರಿ. ಕಲಾ ಕಾರ್ಯಕ್ರಮಗಳ ಆಯೋಜನೆಗೆ ಈವೆಂಟ್ ಮ್ಯಾನೇಜರ್ ಅಗತ್ಯ ಇಲ್ಲ. ಸೌಂದರ್ಯ ಪ್ರಜ್ಞೆ ಇರುವವರು ಸಾಕು' ಎಂದರು.

ಪ್ರಶಸ್ತಿ ಪುರಸ್ಕೃತರ ಪರವಾಗಿ ಮಾತನಾಡಿದ ಮೈಸೂರು ಮಂಜುನಾಥ್, 'ದೇವೇಂದ್ರನೂ ನಾಚುವಂಥ ಕಾರ್ಯಕ್ರಮ ಇದಾಗಿದೆ. ದೇವಲೋಕ ಹೈಜಾಕ್ ಆಗಿದೆ. ಇಂದ್ರನೇ ಬೇಸರ ಮಾಡಿಕೊಳ್ಳುವಂಥ ಪರಿಸರ ಇಲ್ಲಿ ನಿರ್ಮಾಣ' ಆಗಿದೆ ಎಂದು ಬಣ್ಣಿಸಿದರು.

'ಆಳ್ವಾಸ್, ಎಲ್ಲ ಒಳ್ಳೆಯ ವಿಚಾರಗಳು ಇರುವ ಸಂಸ್ಥೆಯಾಗಿದ್ದು ವಿರಾಸತ್ ಈಗ ಸಮಾಜಮುಖಿ ಆಗಿರುವುದು ಸಂತೋಷದ ಸಂಗತಿ' ಎಂದು ಅವರು ಶ್ಲಾಘಿಸಿದರು.



ಹಿನ್ನೆಲೆ ಗಾಯಕ ವಿಜಯ ಪ್ರಕಾಶ್, ಬಾನ್ಸುರಿ ಮಾಂತ್ರಿಕ ಪಂಡಿತ್ ಪ್ರವೀಣ್ ಗೋಡ್ಖಿಂಡಿ ಮತ್ತು ಪಿಟೀಲು ವಾದಕ ವಿದ್ವಾನ್ ಮೈಸೂರು ಎಂ. ಮಂಜುನಾಥ್ ಅವರಿಗೆ 'ಆಳ್ವಾಸ್ ವಿರಾಸತ್' ಪ್ರಶಸ್ತಿಯನ್ನು ಭಾನುವಾರ ಪ್ರದಾನ ಮಾಡಲಾಯಿತು

ಮುಖ್ಯಾಂಶಗಳು

- ತಲಾ ₹1 ಲಕ್ಷ ನಗದು ಪುರಸ್ಕಾರದ ಪ್ರಶಸ್ತಿ
- ಪ್ರತಿ ಸನ್ಮಾನಿತರಿಗೆ ವಿಶಿಷ್ಟ ರೀತಿಯಲ್ಲಿ ಸಂಗೀತದ ಮೂಲಕ ಗೌರವ
- ಪನ್ನೀರು, ತಿಲಕ, ಪುಷ್ಪಾರ್ಚನೆ, ಜ್ಞಾನಾಮೃತ ಆರತಿಯ ಮೆರುಗು

ತಪಾಸಣೆ: ವಿದ್ಯಾರ್ಥಿಗಳ ಬಳಕೆಗೆ ಆಕ್ಷೇಪ

ಕಿರಿಯ ಲೆಕ್ಕ ಸಹಾಯಕ ಹುದ್ದೆ ಭರ್ತಿಗೆ ಕೆಪಿಎಸ್ಸಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಗ್ರೂಪ್ ಸಿ ವೃಂದದ ಕಿರಿಯ ಲೆಕ್ಕ ಸಹಾಯಕ ಹುದ್ದೆಗಳ ನೇಮಕಾತಿಗೆ ಕರ್ನಾಟಕ ಲೋಕಸೇವಾ ಆಯೋಗ ಭಾನುವಾರ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿದ್ದು, ನಗರದ ಪರೀಕ್ಷಾ ಕೇಂದ್ರದಲ್ಲಿ ಅಭ್ಯರ್ಥಿಗಳನ್ನು ವಿದ್ಯಾರ್ಥಿಗಳಿಂದಲೇ ತಪಾಸಣೆ ನಡೆಸಲಾಗಿದೆ ಎಂಬ ಆಕ್ಷೇಪ ವ್ಯಕ್ತವಾಗಿದೆ.

ನಗರದಲ್ಲಿ ಬಲ್ಮಠದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪರೀಕ್ಷಾ ಕೇಂದ್ರವಿತ್ತು. 'ಇಲ್ಲಿ ಕ್ರಮಬದ್ಧವಾಗಿ ತಪಾಸಣೆ ನಡೆಸಿಲ್ಲ. ಸಿಬ್ಬಂದಿಗೆ ಲೋಹಶೋಧಕ ಬಳಸಿ ತಪಾಸಣೆ ನಡೆಸಲೂ ಬರುತ್ತಿರಲಿಲ್ಲ' ಎಂದೂ ಕೆಲವು ಅಭ್ಯರ್ಥಿಗಳು ಆರೋಪಿಸಿದ್ದಾರೆ.

ಈ ಕುರಿತು ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘವು (ಎಕೆಎಸ್‌ಎಸ್‌ಎ) ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿರುವ ತನ್ನ ಅಧಿಕೃತ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದೆ. 'ಮಂಗಳೂರಿನ ಶಾಲೆಯ ಪರೀಕ್ಷೆ ಕೇಂದ್ರದಲ್ಲಿ ಅಭ್ಯರ್ಥಿಗಳನ್ನು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಂದ ತಪಾಸಣೆ ನಡೆಸಿ ಒಳಬಿಡ ಲಾಗುತ್ತಿದೆ' ಎಂದು ಟೀಕಿಸಿದೆ. ಈ ಚಿತ್ರವನ್ನು ಅನೇಕರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಪರೀಕ್ಷೆ ನಡೆಸುವ ಹೊಣೆ ಹೊತ್ತಿದ್ದ ಅಧಿಕಾರಿಯೊಬ್ಬರು ಈ ಆಕ್ಷೇಪದ ಕುರಿತು ಪ್ರತಿಕ್ರಿಯಿಸಿ, 'ಕೆಪಿಎಸ್ಸಿಯು ಪರೀಕ್ಷೆ ನಡೆಸುವುದಕ್ಕೆ ಬೇಕಾದ ಅವಶ್ಯಕತೆಗಳನ್ನು ಪೂರೈಸುವ ಕಾರ್ಯವನ್ನು ಟೆಂಡರ್ ಕರೆದು ಹೊರಗುತ್ತಿಗೆ ನೀಡಿತ್ತು. ಅಭ್ಯರ್ಥಿಗಳ ತಪಾಸಣೆ ನಡೆಸಲು ಬಳಸಿರುವ ಸಿಬ್ಬಂದಿ ಈ ಕೆಲಸದ ಗುತ್ತಿಗೆ ಪಡೆದ ಏಜೆನ್ಸಿಯವರು ಪೂರೈಸಿದ್ದಾರೆ' ಎಂದರು.

ಈ ಕುರಿತು ಪ್ರತಿಕ್ರಿಯಿಸಿರುವ ಕೆಪಿಎಸ್ಸಿ ಅಧಿಕಾರಿಯೊಬ್ಬರು, 'ಇಂತಹ ಕೆಲಸಗಳಿಗೆ ಪದವೀಧರ (ಎಂಜಿನಿಯರಿಂಗ್ ಪದವಿ ಹೊಂದಿದ) ಸಿಬ್ಬಂದಿ ಸಿಗುವುದಿಲ್ಲ. ಇದು ತಾಂತ್ರಿಕೇತರ ಕೆಲಸವಾಗಿರುವುದರಿಂದ ಯಾವುದೇ ತಾಂತ್ರಿಕ ಜ್ಞಾನ ಇಲ್ಲದ ಸಾಮಾನ್ಯ ವ್ಯಕ್ತಿಯೂ ಕನಿಷ್ಠ ತರಬೇತಿ ಪಡೆದು ಈ ಕೆಲಸ ನಿರ್ವಹಿಸಬಹುದು. ಹೀಗಾಗಿ ಇಲ್ಲಿ ನಿಯಮದ ಉಲ್ಲಂಘನೆ ಆಗಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.



ಅಭ್ಯರ್ಥಿಗಳ ತಪಾಸಣೆ ಕುರಿತ ಚಿತ್ರವನ್ನು ಸಾಮಾಜಿಕ ಮಾಧ್ಯಮ ಎಕ್ಸ್‌ನ ಅಧಿಕೃತ ಖಾತೆಯಲ್ಲಿ ಎಕೆಎಸ್‌ಎಸ್‌ಎ ಹಂಚಿಕೊಂಡಿದೆ

ಸಂಕ್ಷಿಪ್ತ ಸುದ್ದಿ

ರೂಪಾ ವಿರುದ್ಧದ ಪ್ರಕರಣಕ್ಕೆ ತಡೆ

ನವದೆಹಲಿ: ಐಪಿಎಸ್ ಅಧಿಕಾರಿ ಡಿ. ರೂಪಾ ವಿರುದ್ಧದ ಮಾನನಷ್ಟ ಪ್ರಕರಣಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ. ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಮಾಡಿದ್ದ, ವಿವಾದಾಸ್ಪದ ಪೋಸ್ಟ್‌ಗಳನ್ನು ತೆಗೆಯಲು ನೀಡಿದ್ದ ಆದೇಶಕ್ಕೆ ಅನುಗುಣವಾಗಿ ರೂಪಾ ಅವರು ಪ್ರಮಾಣಪತ್ರ ಸಲ್ಲಿಸಿದ ನಂತರ, ಸುಪ್ರೀಂ ಕೋರ್ಟ್ ಈ ಆದೇಶ ನೀಡಿದೆ.

'ಇಬ್ಬರ ನಡುವಿನ ಎಲ್ಲ ವ್ಯಾಜ್ಯಗಳನ್ನು ಇತ್ಯರ್ಥಪಡಿಸಲು ನಾವು ಪ್ರಯತ್ನ ನಡೆಸುತ್ತಿರುವ ಕಾರಣ, ಇಬ್ಬರಲ್ಲಿ ಯಾರು ಕೂಡ ಮಾಧ್ಯಮಗಳಿಗೆ ಸಂದರ್ಶನ ನೀಡಬಾರದು, ಮಾಹಿತಿ ನೀಡಬಾರದು' ಎಂದು ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠವು ಆದೇಶದಲ್ಲಿ ಹೇಳಿದೆ.

ವಿಚಾರಣೆಯನ್ನು ಜನವರಿ 12ಕ್ಕೆ ಮುಂದೂಡಲಾಗಿದೆ.

ಸಮಾಜ ಕಲ್ಯಾಣಧಿಕಾರಿ ವಿಜಯಾ ಅಮಾನತು

ತುರ್ವಿಹಾಳ (ರಾಯಚೂರು ಜಿಲ್ಲೆ): ಸಿಂಧನೂರು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಪಿ. ವಿಜಯಾ ಮಲ್ಲೇಶ್ ಅವರನ್ನು ಇಲಾಖೆಯ ಆಯುಕ್ತರು ಅಮಾನತು ಮಾಡಿದ್ದಾರೆ. ಡಿ. 12ರಂದು 'ಪ್ರಜಾವಾಣಿ'ಯಲ್ಲಿ '50 ಮಕ್ಕಳಿಗೆ ಬರೀ 14 ಮಂಚಗಳು' ಶಿರ್ಷಿಕೆಯಡಿ ಪ್ರಕಟಗೊಂಡ, ತುರ್ವಿಹಾಳದ ಬಾಲಕರ ವಸತಿ ನಿಲಯ ಸಮಸ್ಯೆಗಳ ಕುರಿತ ವರದಿಗೆ ಸ್ಪಂದಿಸಿ ಇಲಾಖೆ ಆಯುಕ್ತ ರಾಕೇಶಕುಮಾರ್ ಅವರು ಅಮಾನತು ಮಾಡಿದ್ದಾರೆ.

ಈ ಪ್ರಕರಣದ ಸಂಬಂಧ ವಸತಿ ಶಾಲೆಯ ಮೇಲ್ವಿಚಾರಕ ಪ್ರಭುರಾಜ ಅವರನ್ನು ಈಗಾಗಲೇ ಅಮಾನತು ಮಾಡಲಾಗಿತ್ತು.

'ಮಂಡ್ಯದಲ್ಲೇ ಸಾಹಿತ್ಯ ಸಮ್ಮೇಳನ'

ಮಂಡ್ಯ: '87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು 2024ರಲ್ಲಿ ಮಂಡ್ಯದಲ್ಲೇ ನಡೆಸಲಾಗುವುದು. ಶೀಘ್ರದಲ್ಲೇ ಈ ಬಗ್ಗೆ ಮಂಡ್ಯ ಸಚಿವ ಎನ್.ಚಲುವರಾಯಸ್ವಾಮಿ ಜೊತೆಗೂಡಿ ಮುಖ್ಯಮಂತ್ರಿಯವರ ಜೊತೆ ಚರ್ಚಿಸಲಾಗುವುದು' ಎಂದು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಹೇಶ್ ಜೋಶಿ ಭಾನುವಾರ ಇಲ್ಲಿ ತಿಳಿಸಿದರು.


ಸಮ್ಮೇಳನ ಆಯೋಜನೆ ಸಂಬಂಧ ನಡೆದ ಸಾರ್ವಜನಿಕ ಅಭಿಪ್ರಾಯ ಸಂಗ್ರಹ ಸಭೆಯ ಸಂದರ್ಭ ಪತ್ರಕರ್ತರ ಜೊತೆ ಅವರು ಮಾತನಾಡಿದರು.

ಬರ ಹಾಗೂ ಕಾವೇರಿ ಹೋರಾಟದ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ. ಬೇರೆ ಜಿಲ್ಲೆಗೆ ಸಮ್ಮೇಳನ ಸ್ಥಳಾಂತರಿಸುವ ಪ್ರಶ್ನೆಯೇ ಇಲ್ಲ' ಎಂದು ಅವರು ತಿಳಿಸಿದರು.

ಜ.26ರಿಂದ ನಾಟಕ ರಚನಾ ಕಮ್ಮಟ

ಬೆಳಗಾವಿ: 'ಈ ಹೊತ್ತಿಗೆ' ಟ್ರಸ್ಟ್ ಮತ್ತು 'ನಮ್ಮವರೊಂದಿಗೆ' ಬಳಗ 2024ರ ಜನವರಿ 26ರಿಂದ 28ರವರೆಗೆ ಬೆಳಗಾವಿಯಲ್ಲಿ 'ನಾಟಕ ರಚನಾ ಕಮ್ಮಟ' ಆಯೋಜಿಸಿದೆ. ವಿಮರ್ಶಕಿ ಎಂ.ಎಸ್.ಆಶಾದೇವಿ ಈ ಕಮ್ಮಟಕದ ನಿರ್ದೇಶಕಿ ಆಗಿದ್ದಾರೆ. 30 ಜನರಿಗೆ ಮಾತ್ರ ಅವಕಾಶವಿದೆ. ಅರ್ಜಿ ಸಲ್ಲಿಸಲು ಜನವರಿ 7 ಕಡೇ ದಿನ. ಆಸಕ್ತರು ವಿವರಗಳಿಗೆ ehottige.ks@gmail.com ಇ-ಮೇಲ್ ಸಂಪರ್ಕಿಸಬಹುದು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ನಿಮ್ಮ ನೆರೆಯವರಲ್ಲಿ ಯಾವುದಾದರೂ ತಪ್ಪುಗಳನ್ನು ನೀವು ಗಮನಿಸಿದರೆ, ನಿಮ್ಮಲ್ಲಿ ಇದ್ದಿರಬಹುದಾದ ಅದೇ ಬಗೆಯ ತಪ್ಪುಗಳನ್ನು ಕಂಡುಕೊಳ್ಳಿ.

–ರೂಮಿ

ಚುನಾವಣಾ ಆಯೋಗ: ಕೈಗೊಂಬೆ ಆಯುಕ್ತರನ್ನು ಹೊಂದುವ ಉದ್ದೇಶ

ಮುಖ್ಯ ಚುನಾವಣಾ ಆಯುಕ್ತರು (ಸಿ.ಇ.ಸಿ) ಮತ್ತು ಇತರ ಚುನಾವಣಾ ಆಯುಕ್ತರ (ಇ.ಸಿ) ನೇಮಕಕ್ಕೆ ಸಂಬಂಧಿಸಿದ, ತಿದ್ದುಪಡಿಗಳನ್ನು ಮಾಡಲಾಗಿರುವ ಮಸೂದೆಗೆ ರಾಜ್ಯಸಭೆಯು ಅಂಗೀಕಾರ ನೀಡಿದೆ. ಈ ಮಸೂದೆಯಲ್ಲಿ ಇರುವ ಅಂಶಗಳು, ಸಾಂವಿಧಾನಿಕ ಹುದ್ದೆಗಳಿಗೆ ನೇಮಕಾತಿಗಳನ್ನು ನಡೆಸುವಾಗ ಪಾಲಿಸಬೇಕಿರುವ ಮಾನದಂಡಗಳನ್ನು ಒಳಗೊಂಡಿಲ್ಲ. ಈ ಮಸೂದೆಯನ್ನು ಕೇಂದ್ರ ಸರ್ಕಾರವು ಆಗಸ್ಟ್‌ನಲ್ಲಿ ಮಂಡಿಸಿತ್ತು. ಆ ಮಸೂದೆಗೂ ಈಗಿನ ಮಸೂದೆಗೂ ಕೆಲವು ಬದಲಾವಣೆಗಳು ಇವೆ. ಮೊದಲು ಮಂಡನೆ ಆಗಿದ್ದ ಮಸೂದೆಗೆ ಎದುರಾದ ಟೀಕೆಗಳ ಕಾರಣದಿಂದಾಗಿ ಈ ಬದಲಾವಣೆಗಳನ್ನು ತಂದಿರಬಹುದು. ಹೀಗಿದ್ದರೂ ಮಸೂದೆಯಲ್ಲಿನ ಅತ್ಯಂತ ಪ್ರಮುಖ ಲೋಪಗಳನ್ನು ಸರಿಪಡಿಸುವ ಕೆಲಸ ಆಗಿಲ್ಲ. ಶಿಷ್ಟಾಚಾರದ ವಿಚಾರವಾಗಿ, ಸಿ.ಇ.ಸಿ. ಹಾಗೂ ಇ.ಸಿ. ಹುದ್ದೆಗಳು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಹುದ್ದೆಗಳಿಗೆ ಸಮಾನವಾಗಿರುತ್ತವೆ ಎಂದು ಈಗಿನ ಮಸೂದೆಯಲ್ಲಿ ಹೇಳಲಾಗಿದೆ. ಆಗಸ್ಟ್‌ನಲ್ಲಿ ಮಂಡನೆ ಆಗಿದ್ದ ಮಸೂದೆಯಲ್ಲಿ ಸಿ.ಇ.ಸಿ. ಮತ್ತು ಇ.ಸಿ. ಹುದ್ದೆಗಳಲ್ಲಿ ಇರುವವರು ಶಿಷ್ಟಾಚಾರದ ವಿಚಾರವಾಗಿ ಸಂಪುಟ ಕಾರ್ಯದರ್ಶಿ ಹುದ್ದೆಗೆ ಸಮಾನರಾಗಿರುತ್ತಾರೆ ಎಂದು ಹೇಳಲಾಗಿತ್ತು. ಕೇಂದ್ರವು ತಂದಿರುವ ಪ್ರಮುಖ ಬದಲಾವಣೆಗಳಲ್ಲಿ ಇದೂ ಒಂದು. ಹೀಗಿದ್ದರೂ ಸಿ.ಇ.ಸಿ. ಮತ್ತು ಇ.ಸಿ. ಹುದ್ದೆಗಳಿಗೆ ಸರ್ಕಾರವೇ (ಕಾರ್ಯಾಂಗ) ನೇಮಕಾತಿ ನಡೆಸಲಿದೆ ಎಂಬ ಅಂಶವು ಬದಲಾವಣೆ ಕಂಡಿಲ್ಲ. ಈ ಕಾರಣದಿಂದಾಗಿ, ಈ ಹುದ್ದೆಗಳಿಗೆ ನಡೆಯುವುದು ರಾಜಕೀಯ ಲೆಕ್ಕಾಚಾರದ ನೇಮಕಾತಿಗಳೇ ಆಗಲಿವೆ.



ಸುಪ್ರೀಂ ಕೋರ್ಟ್ ನೀಡಿದ ಸೂಚನೆಯ ಅನುಸಾರವಾಗಿ ಮಸೂದೆಯನ್ನು ಸಿದ್ಧಪಡಿಸಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಆದರೆ ಈ ಮಾತಿನಲ್ಲಿ ಇರುವುದು ಅರ್ಧಸತ್ಯ ಮಾತ್ರ. ಈ ಮಸೂದೆಯು ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನದ ಆಶಯಕ್ಕೆ ಅನುಗುಣವಾಗಿ ಇಲ್ಲ. ಸಿ.ಇ.ಸಿ. ನೇಮಕಕ್ಕೆ ಸಂವಿಧಾನವು ನಿರ್ದಿಷ್ಟ ಪ್ರಕ್ರಿಯೆಯನ್ನು ರೂಪಿಸಿರಲಿಲ್ಲ. 1991ರ ಕಾನೂನಿನಲ್ಲಿ ಕೂಡ ನಿರ್ದಿಷ್ಟ ಪ್ರಕ್ರಿಯೆಯ ವಿವರ ಇಲ್ಲ. ಕಾನೂನಿನ ಲೋಪವನ್ನು ಹಿಂದಿನ ಆಡಳಿತ ವ್ಯವಸ್ಥೆಗಳು ದುರ್ಬಳಕೆ ಮಾಡಿಕೊಂಡಿರಬಹುದು. ಈ ವರ್ಷದ ಮಾರ್ಚ್‌ನಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನವೊಂದನ್ನು ನೀಡಿದೆ. ಅದರ ಪ್ರಕಾರ, ಸಿ.ಇ.ಸಿ. ಹುದ್ದೆಗಳಿಗೆ ಯಾರನ್ನು ನೇಮಕ ಮಾಡಬೇಕು ಎಂಬುದನ್ನು ಪ್ರಧಾನಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ತೀರ್ಮಾನಿಸಬೇಕು. ಈ ಪ್ರಕ್ರಿಯೆಯು ಸಿ.ಇ.ಸಿ. ನೇಮಕದ ವಿಚಾರವಾಗಿ ಸಾರ್ವಜನಿಕರ ವಿಶ್ವಾಸವನ್ನು ಇನ್ನಷ್ಟು ಹೆಚ್ಚು ಮಾಡುವಂತೆ ಇತ್ತು. ಆದರೆ ಕೇಂದ್ರ ಸರ್ಕಾರವು ಸಿಜೆಐ ಅವರನ್ನು ನೇಮಕ ಪ್ರಕ್ರಿಯೆಯಿಂದ ಹೊರಗೆ ಇರಿಸಿದೆ. ಮಸೂದೆಯ ಪ್ರಕಾರ, ಸಿ.ಇ.ಸಿ. ಆಯ್ಕೆ ಸಮಿತಿಯಲ್ಲಿ ಪ್ರಧಾನಿ, ಕೇಂದ್ರ ಸಂಪುಟದ ಒಬ್ಬ ಸದಸ್ಯ ಹಾಗೂ ಲೋಕಸಭೆಯ ಅತಿದೊಡ್ಡ ವಿರೋಧ ಪಕ್ಷದ ನಾಯಕ ಇರುತ್ತಾರೆ. ಸಿ.ಇ.ಸಿ. ಹಾಗೂ ಇ.ಸಿ. ಕೈಗೊಳ್ಳುವ ಯಾವುದೇ ತೀರ್ಮಾನವು ಅದೆಷ್ಟೇ ತಪ್ಪಾಗಿದ್ದರೂ ಅವರು ಕಾನೂನಿನ ಪ್ರಕ್ರಿಯೆಯಿಂದ ಅತೀತರಾಗಿ ಇರುತ್ತಾರೆ ಎಂಬ ಅಂಶವು ಕೂಡ ಮಸೂದೆಯಲ್ಲಿ ಇದೆ.

> ಆಯ್ಕೆ ಸಮಿತಿಯಲ್ಲಿ ವಿರೋಧ ಪಕ್ಷದ ಪ್ರತಿನಿಧಿ ಇರುತ್ತಾರಾದರೂ ಎಲ್ಲ ಹಂತಗಳಲ್ಲಿಯೂ ನೇಮಕಾತಿ ಪ್ರಕ್ರಿಯೆಯನ್ನು ಸರ್ಕಾರವೇ ನಿಯಂತ್ರಿಸುತ್ತಿರುತ್ತದೆ. ವಿರೋಧ ಪಕ್ಷದ ನಾಯಕನ ಪಾತ್ರ ಇಲ್ಲಿ ಔಪಚಾರಿಕ ಮಾತ್ರ

ಆಯ್ಕೆ ಸಮಿತಿಯಲ್ಲಿ ವಿರೋಧ ಪಕ್ಷದ ಪ್ರತಿನಿಧಿ ಇರುತ್ತಾರಾದರೂ ಎಲ್ಲ ಹಂತಗಳಲ್ಲಿಯೂ ನೇಮಕಾತಿ ಪ್ರಕ್ರಿಯೆಯನ್ನು ಸರ್ಕಾರವೇ ನಿಯಂತ್ರಿಸುತ್ತಿರುತ್ತದೆ. ವಿರೋಧ ಪಕ್ಷದ ನಾಯಕನ ಪಾತ್ರವು ಇಲ್ಲಿ ಔಪಚಾರಿಕ ಮಾತ್ರ, ಇದು ಕಣ್ಣೊರೆಸುವ ತಂತ್ರವೂ ಹೌದು. ಸರ್ಕಾರವು ತಾನು ಬಯಸಿದವರನ್ನು ನೇಮಕ ಮಾಡಬಹುದು. ಹೀಗಾಗಿ, ಆಡಳಿತಾರೂಢ ಪಕ್ಷಕ್ಕೆ ಅನುಕೂಲ ಆಗುವ ರೀತಿಯಲ್ಲಿಯೇ ಅದು ನೇಮಕಾತಿಗಳನ್ನು ನಡೆಸಬಹುದು. ಆಗ ಚುನಾವಣಾ ಆಯೋಗವು ಕೇಂದ್ರ ಸರ್ಕಾರಕ್ಕೆ ಋಣಿಯಾಗಿರುವ ಸಂಸ್ಥೆಯಂತೆ ಆಗುತ್ತದೆ. ಚುನಾವಣೆಗಳು ಮುಕ್ತವಾಗಿ ಹಾಗೂ ನ್ಯಾಯಸಮ್ಮತವಾಗಿ ನಡೆಯಬೇಕು ಎಂದಾದರೆ, ಚುನಾವಣಾ ಆಯೋಗವು ಸ್ವತಂತ್ರವಾಗಿ ಮತ್ತು ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಿರಬೇಕಾಗುತ್ತದೆ. ಇದು ಪ್ರಜಾತಂತ್ರ ವ್ಯವಸ್ಥೆಯ ಆರೋಗ್ಯಕ್ಕೆ ಅತ್ಯಂತ ಮಹತ್ವದ್ದು. ಆಯೋಗಕ್ಕೆ ನಡೆಯುವ ಪ್ರಮುಖ ನೇಮಕಾತಿಗಳ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಒಂದು ವಿಧವೆಂದರೆ, ನೇಮಕಾತಿ ಪ್ರಕ್ರಿಯೆಯಲ್ಲಿ ಸಿಜೆಐ ಅವರನ್ನೂ ಒಳಗೊಳ್ಳುವುದು. ಅಥವಾ, ಈಗಿನ ಮಸೂದೆಯನ್ನೇ ಪರಿಗಣಿಸಿ ಹೇಳುವುದಾದರೆ, ನೇಮಕಾತಿ ವಿಚಾರದಲ್ಲಿ ಆಯ್ಕೆ ಸಮಿತಿಯಲ್ಲಿ ಒಮ್ಮತ ಇರಬೇಕು ಎಂಬ ಅಂಶವನ್ನು ಕಡ್ಡಾಯಗೊಳಿಸಬಹುದು. ಆಗ ಸಿ.ಇ.ಸಿ, ಇ.ಸಿ. ಹುದ್ದೆಗಳಿಗೆ ನೇಮಕ ಆಗುವವರು ವಿರೋಧ ಪಕ್ಷಕ್ಕೂ ಒಪ್ಪಿಗೆಯಾಗುತ್ತಾರೆ. ಮಸೂದೆಯು ಈಗಿರುವ ಸ್ಥಿತಿಯಲ್ಲಿ, ರಾಜಕೀಯದಿಂದ ಹೊರಗೆ ನಿಂತಿರುವ ಹಾಗೂ ಸ್ವತಂತ್ರವಾಗಿ ಕೆಲಸ ಮಾಡುವ ಚುನಾವಣಾ ಆಯೋಗವನ್ನು ಕಟ್ಟುವ ಬಗೆಯಲ್ಲಿ ಇಲ್ಲ. ಈಗಿನ ಮಸೂದೆಯು ಕೈಗೊಂಬೆ ಆಯುಕ್ತರನ್ನು ನೇಮಕ ಮಾಡುವುದನ್ನೇ ಕಾನೂನು ಆಗಿಸುವ ಉದ್ದೇಶ ಹೊಂದಿರುವಂತಿದೆ.

ದಿನದ ಟ್ವೀಟ್


ಸಂಶಯವೇಕೆ?



ಮತಯಂತ್ರಗಳ ಸಾಚಾತನವನ್ನು ದೃಢಪಡಿಸಿಕೊಳ್ಳಲು ಐಐಟಿ ಹಾಗೂ ಇತರ ತಜ್ಞರನ್ನು ಸಂಪರ್ಕಿಸಿದ ಸುಪ್ರೀಂ ಕೋರ್ಟ್, ಈ ವಿಷಯದಲ್ಲಿ ತೃಪ್ತಿ ವ್ಯಕ್ತಪಡಿಸಿದೆ. ಬಳಿಕ ಅದು, ಮತಯಂತ್ರಗಳನ್ನು ನಿಷೇಧಿಸಿ ಮತಪತ್ರ ವ್ಯವಸ್ಥೆಗೆ ಮರಳಬೇಕೆಂದು ಕೋರಿದ್ದ ವಿವಿಧ ಅರ್ಜಿಗಳನ್ನು ತಳ್ಳಿಹಾಕಿದೆ. ಅಷ್ಟಾದರೂ ವಿರೋಧ ಪಕ್ಷಗಳಿಗೆ ಮನವರಿಕೆಯಾಗಿಲ್ಲ.

ದೀಪಕ್ ಪ್ರಭು

ಕಿಡಿನುಡಿ



ಸಂಸತ್ತಿನಲ್ಲಿ ಭದ್ರತಾ ಲೋಪ ನಡೆದ ಮರುದಿನ ಸರ್ಕಾರ ನೀಡಿದ ಪ್ರತಿಕ್ರಿಯೆ ವೈರುಧ್ಯಗಳಿಂದ ಕೂಡಿತ್ತು. ಸಂಸತ್ತಿನಲ್ಲಿ ದೈನಂದಿನ ಕೆಲಸಗಳು ಎಂದಿನಂತೆ ಸಾಗಿವೆ ಎಂಬ ಸಂದೇಶವನ್ನು ನೀಡಲು ಅದು ಪ್ರಯತ್ನಿಸಿತು. ಸ್ಪೀಕರ್ ಮತ್ತು ಆಡಳಿತ ಪಕ್ಷ, ಅಧಿಕಾರಿಗಳು ಹಾಗೂ ಮಾಧ್ಯಮ ಪ್ರತಿನಿಧಿಗಳು ಸಹ ಅದನ್ನು ಭದ್ರತೆಯ ಲೋಪ ಎಂದೇ ಹೇಳುತ್ತಿದ್ದಾರೆ. ಹೀಗಿದ್ದರೂ, ಬಂಧಿಸಲಾಗಿರುವ ಐವರು ವ್ಯಕ್ತಿಗಳ ವಿರುದ್ಧ ಭಯೋತ್ಪಾದನಾ ವಿರೋಧಿ ಕಾನೂನಿನ ಅಡಿ ಪ್ರಕರಣ ದಾಖಲಿಸಲಾಗಿದೆ.

ಪ್ರಶಾಂತ್ ಭೂಷಣ್, ಸುಪ್ರೀಂ ಕೋರ್ಟ್ ವಕೀಲ

25 ವರ್ಷಗಳ ಹಿಂದೆ

ಶುಕ್ರವಾರ, 18-12-1998

• **ಮುಷ್ಕರ: ನೌಕರರ ಜತೆ ರಾಜ್ಯ ಸರ್ಕಾರದ ಮಾತುಕತೆ ವಿಫಲ**

ಬೆಂಗಳೂರು, ಡಿ. 17 – ತಮ್ಮ ಮೂರು ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ಸರ್ಕಾರಿ ನೌಕರರು ಡಿ. 21ರಿಂದ ನಡೆಸಲು ಉದ್ದೇಶಿಸಿರುವ ಅನಿರ್ದಿಷ್ಟ ಕಾಲದ ಮುಷ್ಕರವನ್ನು ತಡೆಗಟ್ಟಲು ಸರ್ಕಾರ ಮತ್ತು ನೌಕರರ ಸಂಘದ ಮುಖಂಡರ ನಡುವೆ ಇಂದು ನಡೆದ ಎರಡೂ ಸುತ್ತಿನ ಮಾತುಕತೆಗಳು ವಿಫಲವಾದವು.

ಸರ್ಕಾರದ ಪರವಾಗಿ ಹಣಕಾಸು ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಳಿಗ್ಗೆ ಮತ್ತು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಸಂಜೆ ನೌಕರರ ಸಂಘದ ಅಧ್ಯಕ್ಷ ಕೆ.ಸಿಪ್ಪೇಗೌಡ ಮತ್ತು ಇತರೆ ಮುಖಂಡರೊಂದಿಗೆ ಮಾತುಕತೆ ನಡೆಸಿದರು. ಸರ್ಕಾರದ ಮುಖ್ಯ ಕಾರ್ಯದರ್ಶಿ ಬಿ.ಕೆ.ಭಟ್ಟಾಚಾರ್ಯ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಆದರೆ, ಎರಡೂ ಕಡೆಯವರು ತಮ್ಮ ನಿಲುವುಗಳಿಗೆ ಅಂಟಿಕೊಂಡಿದ್ದರಿಂದ ಯಾವುದೇ ಪರಿಹಾರ ಕಾಣದೆ ಮಾತುಕತೆ ಮುರಿದುಬಿದ್ದಿತು.

50 ವರ್ಷಗಳ ಹಿಂದೆ

ಮಂಗಳವಾರ, 18-12-1973

• **ಲೋಕಸಭೆಯಲ್ಲಿ ವಿರೋಧ ಪಕ್ಷಗಳ ಪ್ರತಿಭಟನೆ, ಸಭಾತ್ಯಾಗ**

ನವದೆಹಲಿ, ಡಿ. 17– ಸಂಸತ್ ಗಮನಕ್ಕೆ ತರದೆ ಮುಕ್ತಪೇಟೆಯಲ್ಲಿ ಸಕ್ಕರೆ ಮೇಲಿನ ಅಬಕಾರಿ ಸುಂಕ ಏರಿಸಿದ ಸರ್ಕಾರದ ಕ್ರಮವನ್ನು ಪ್ರತಿಭಟಿಸಿ ಇಂದು ಲೋಕಸಭೆಯಲ್ಲಿ ಇಡೀ ವಿರೋಧ ಪಕ್ಷದ ಸದಸ್ಯರೆಲ್ಲಾ ಸಭಾತ್ಯಾಗ ಮಾಡಿದರು.

ಸಂಸತ್ ಅಧಿವೇಶನ ಸೇರದೇ ಇರುವಾಗ ಶನಿವಾರ ಸಕ್ಕರೆ ಬೆಲೆ ಏರಿಸುವ ಆಜ್ಞೆ ಹೊರಡಿಸಿದ ಸರ್ಕಾರದ ಕ್ರಮವು ಸಭಾನಿಂದನೆ ಎಂದು ವಿರೋಧ ಪಕ್ಷದ ಎಸ್.ಎನ್.ಮಿಶ್ರಾ ಮತ್ತು ಮಧುಲಿಮಯೆ ಅವರು ಆಪಾದಿಸಿದರು.

ಸಭಾತ್ಯಾಗಕ್ಕೂ ಮುಂಚೆ ನಡೆದ ಚರ್ಚೆಯಲ್ಲಿ ಮಧ್ಯಪ್ರವೇಶ ಮಾಡಿದ ಕೃಷಿ ಸಚಿವ ಫಕ್ರುದ್ದೀನ್ ಅಲಿ ಅಹ್ಮದ್ ಅವರು ಸರ್ಕಾರದ ಈ ಕ್ರಮ ಅನುಚಿತವಾಗುವುದಿಲ್ಲ ಎಂದು ಪ್ರತಿಪಾದಿಸಿದರು.

• **ಕನ್ನಡ ಮೇಲಕ್ಕೆ**

ಬೆಂಗಳೂರು, ಡಿ. 17– ಇಂದಿನಿಂದ ಬೆಂಗಳೂರು ನಗರ ರೈಲು ನಿಲ್ದಾಣದ ವಿದ್ಯುತ್ ದೀಪಗಳ ಕನ್ನಡ ನಾಮಫಲಕಕ್ಕೆ ಅಂತಸ್ತಿನಲ್ಲಿ ಬಡ್ತಿ. ಇದುವರೆಗೆ ಇಂಗ್ಲಿಷ್ ನಾಮಫಲಕ ಮೇಲಿತ್ತು; ಅದರ ಕೆಳಗೆ ಕನ್ನಡ ನಾಮ ಫಲಕವಿತ್ತು. ಕರ್ನಾಟಕ ಮರು ನಾಮಕರಣ ಮತ್ತು ರಾಜ್ಯದ ಜನತೆಯ ಭಾವನೆಗಳನ್ನು ಗೌರವಿಸಲು ದಕ್ಷಿಣ ರೈಲ್ವೆ ಅಧಿಕಾರಿಗಳು ಈ ಕ್ರಮ ಕೈಗೊಂಡರು; ಅಂತೆಯೇ ಕನ್ನಡ ಫಲಕ ಮೇಲೇರಿತು.

ಸರ್ಕಾರ ಮಣಿಸುವ ಪ್ರತಿಪಕ್ಷಗಳ ಆಸೆ ಭಗ್ನ– ‘ಉತ್ತರಾಸ್ತ್ರ’ ಬಳಸಿದ ಕಾಂಗ್ರೆಸ್

ಒಳಜಗಳ: ಮುದುಡಿದ ‘ಕಮಲ’



ಗತಿಬಿಂಬ

ವೈ.ಗ.ಜಗದೀಶ್

ವಿಧಾನಸಭಾ ಚುನಾವಣೆಯ ಹೀನಾಯ ಸೋಲಿನ ಬಳಿಕ ಕಂಗೆಟ್ಟು, ಕಮರಿ ಕುಳಿತಿದ್ದ ಬಿಜೆಪಿ ರಾಜ್ಯ ಘಟಕಕ್ಕೆ ಹೊಸ ಸಾರಥಿ, ವಿಧಾನಸಭೆಗೆ ವಿರೋಧ ಪಕ್ಷದ ನಾಯಕ ಬಂದರೂ ಪಕ್ಷ ಸಾವರಿಸಿಕೊಂಡು ಮೇಲೆದ್ದಿಲ್ಲ. ಅಧಿಕಾರಕ್ಕೆ ಬಂದ ಆರು ತಿಂಗಳಲ್ಲೇ ಕಾಂಗ್ರೆಸ್ ನೇತೃತ್ವದ ಸರ್ಕಾರ ಭ್ರಷ್ಟಾಚಾರದ ಹಲವು ಆರೋಪಗಳನ್ನು ಎದುರಿಸಬೇಕಾಯಿತು. ಇದನ್ನು ಹೋರಾಟದ ಅಸ್ತ್ರವಾಗಿ ಬಳಸಿ, ಸರ್ಕಾರದ ವೈಫಲ್ಯಗಳನ್ನು ಬಯಲು ಮಾಡಬಹುದಾದ ಅವಕಾಶವನ್ನು ಬೆಳಗಾವಿಯಲ್ಲಿ 10 ದಿನ ನಡೆದ ಅಧಿವೇಶನ ಕಲ್ಪಿಸಿತ್ತು. ನಾಯಕರ ನಡುವಿನ ಪ್ರತಿಷ್ಠೆ, ಆಂತರಿಕ ಜಗಳವು ಪಕ್ಷವನ್ನು ನಲುಗಿಸಿತು. ಸರ್ಕಾರವನ್ನು ಕಟ್ಟಿಹಾಕುವುದು ಹೋಗಲಿ, ಆಂತರಿಕ ಸಂಘರ್ಷದ ಚಕ್ರವ್ಯೂಹದಿಂದ ಹೊರಬರಲಾಗದೆ, ಮುಖಭಂಗವನ್ನೂ ಬಿಜೆಪಿ ಅನುಭವಿಸಿತು.

ಎನ್‌ಡಿಎ ಮೈತ್ರಿಕೂಟದ ಜತೆಗೆ ಗುರುತಿಸಿಕೊಂಡಿರುವ ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಕೃಷಿ ಸಚಿವರ ವಿರುದ್ಧ ಆರೋಪಗಳ ಸುರಿಮಳೆಗೈದಿದ್ದರು. ಅಧಿವೇಶನಕ್ಕೆ ಮುನ್ನವೇ ಕೆಲ ಮಾಹಿತಿ ಹೊರಹಾಕಿದ್ದ ಅವರು, ‘ದಾಖಲೆ– ವಿಡಿಯೊಗಳನ್ನು ಕಲಾಪದಲ್ಲಿ ಬಿಡುಗಡೆ ಮಾಡುವೆ. ಒಂದು ವಿಕೆಟ್ ಪತನ ಖಚಿತ’ ಎಂದಿದ್ದರು. ಕುಮಾರಸ್ವಾಮಿ ಸದನದಲ್ಲಿ ಹಲವು ದಿನ ಕುಳಿತರೇ ವಿನಾ ತಮ್ಮ ಬುಟ್ಟಿಯಿಂದ ಯಾವ ಹಾವನ್ನೂ ಬಿಡಲಿಲ್ಲ. ವಿರೋಧ ಪಕ್ಷದ ನಾಯಕ ಅಶೋಕ ಮತ್ತು ಕುಮಾರಸ್ವಾಮಿ ರಹಸ್ಯ ಮಾತುಕತೆ ನಡೆಸಿದರೂ ಸರ್ಕಾರದ ವಿರುದ್ಧದ ಆರೋಪಗಳ ಹಿಂದಿರುವ ಸತ್ಯವನ್ನು ಬಯಲು ಮಾಡಲು ಆಗಲೇ ಇಲ್ಲ. ಈ ಮಟ್ಟಿಗೆ ವಿರೋಧ ಪಕ್ಷಗಳು ಕೈಸೋತು ಕುಳಿತಿದ್ದು, ಬೆಳಗಾವಿ ಅಧಿವೇಶನದ ಇತಿಹಾಸದಲ್ಲಿ ಮೊದಲೆನ್ನಬಹುದು.

‘ನಮ್ಮ ಸಂಖ್ಯಾಬಲ ಕಡಿಮೆ ಇದೆ. ಕಾಂಗ್ರೆಸ್‌ನವರು 135 ಜನ ಇರುವುದರಿಂದ ಏನೂ ಮಾಡಲಾಗದು’ ಎಂದು ಬಿಜೆಪಿಯ ಶಾಸಕರೊಬ್ಬರು ಮೊಗಸಾಲೆಯಲ್ಲಿ ಹೇಳಿಕೊಂಡಿದ್ದುಂಟು. 2013ರಲ್ಲಿ ಬಿಜೆಪಿ 40, ಬಿ.ಎಸ್.ಯಡಿಯೂರಪ್ಪ ಅವರ ಕೆಜೆಪಿ 6 ಸದಸ್ಯರ ಬಲ ಹೊಂದಿದ್ದವು. ಆಗಲೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿದ್ದರು. ಆರೇ ಜನರನ್ನು ಬೆನ್ನಿಗಿಟ್ಟುಕೊಂಡಿದ್ದ ಯಡಿಯೂರಪ್ಪ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರವನ್ನು ನಡುಗಿಸಿದ್ದರು. ಆಗ ವಿರೋಧ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ. ಸಂಖ್ಯಾಬಲವನ್ನು ಲೆಕ್ಕಿಸದೇ ಮುನ್ನುಗ್ಗುವ, ಆಡಳಿತ ಪಕ್ಷದ ಸದಸ್ಯರೂ ತಲೆದೂಗುವ ರೀತಿಯಲ್ಲಿ ನಾಯಕತ್ವದ ಗುಣವನ್ನು ಯಡಿಯೂರಪ್ಪ ಪ್ರದರ್ಶಿಸಿದ್ದರು. ಆ ರೀತಿಯ ನಾಯಕತ್ವ ಗುಣವಿದ್ದರೆ ಸರ್ಕಾರವನ್ನು ಹಣ್ಣುಗಾಯಿ ಮಾಡುವುದು ಕಷ್ಟವೇನಲ್ಲ.

ಅಧ್ಯಕ್ಷರ ನೇಮಕ, ವಿರೋಧ ಪಕ್ಷದ ನಾಯಕನ ಆಯ್ಕೆ ಬಗೆಗೆ ಪಕ್ಷದ ಕೆಲವು ಸದಸ್ಯರು ಆಕ್ಷೇಪ ಹೊರಹಾಕಿದ್ದರು. ಸ್ವಪಕ್ಷೀಯರನ್ನು ಸಂಭಾಳಿಸಿ, ಸಮನ್ವಯ ಸಾಧಿಸಿಕೊಂಡು ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವ ಚಾಕಚಕ್ಯತೆಯನ್ನು ನಾಯಕ ತೋರಲಿಲ್ಲ. ಸರ್ಕಾರ ನಡೆಸುವಾಗ ಧರ್ಮದ ಹೆಸರಿನಲ್ಲಿ ಧ್ರುವೀಕರಣದ ರಾಜಕಾರಣ– ನೀತಿಗಳಿಗೆ ಜೋತುಬಿದ್ದ ಪರಿಣಾಮವಾಗಿ ಚುನಾವಣೆಯಲ್ಲಿ ಬಿಜೆಪಿ ಸೋಲು ಕಂಡಿತು. ಕೋಮುವಾದಿ ಅಸ್ತ್ರ ಫಲ ಕೊಟ್ಟಿಲ್ಲ ಎಂಬುದರ ಅರಿವಿದ್ದರೂ ಅಧಿವೇಶನದಲ್ಲೂ ಅದೇ ಅಸ್ತ್ರಕ್ಕೆ ಜೋತುಬಿದ್ದದ್ದು ಮುಳುವಾಯಿತು.

‘ಅಲ್ಪಸಂಖ್ಯಾತರ ಅಭಿವೃದ್ಧಿಗೆ ಮುಂದಿನ ದಿನಗಳಲ್ಲಿ ₹ 10 ಸಾವಿರ ಕೋಟಿ ಅನುದಾನ ನೀಡುತ್ತೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದನ್ನು ದೊಡ್ಡ ವಿವಾದವಾಗಿಸುವ ಯತ್ನ ಮಾಡಿತು. ಸಭಾಧ್ಯಕ್ಷ ಸ್ಥಾನಕ್ಕೆ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರನ್ನು ಆಯ್ಕೆ ಮಾಡಿದ್ದರ ಕುರಿತು ಸಚಿವ ಜಮೀರ್ ಅಹಮದ್ ಖಾನ್ ತೆಲಂಗಾಣದಲ್ಲಿ ನೀಡಿದ ಹೇಳಿಕೆ ಮುಂದಿಟ್ಟು ಕಲಾಪಕ್ಕೆ ಅಡ್ಡಿಪಡಿಸಲು ಯತ್ನಿಸಿತು. ವಿಧಾನ ಪರಿಷತ್ತಿನ ಕಾಂಗ್ರೆಸ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಹಾಗೂ ಬಿಜೆಪಿ ಮುಖಂಡ ಪೃಥ್ವಿ ಸಿಂಗ್ ಮಧ್ಯದ ವೈಯಕ್ತಿಕ ಜಗಳ, ಹಲ್ಲೆಯನ್ನು ಮುಂದಿಟ್ಟು ನಡೆಸಿದ ಧರಣಿ ಕೂಡ ಕಲಾಪಕ್ಕೆ ತೊಡಕು ಉಂಟುಮಾಡಿತು. ಬಿಜೆಪಿ ಸಿದ್ಧಾಂತದ ವಿಷಯದಲ್ಲಿ ಈ ಹಲ್ಲೆ ನಡೆದಿದ್ದರೆ, ಪಕ್ಷದ ಹೋರಾಟಕ್ಕೆ ಸಮರ್ಥನೆ-ಯಾದರೂ ಇರುತ್ತಿತ್ತು. ಅದ್ಯಾವುದೂ ಇಲ್ಲದೇ ಕದನಕ್ಕೆ ಇಳಿದಿದ್ದು ವ್ಯರ್ಥಪ್ರಯತ್ನವಾಗಿಬಿಟ್ಟಿತು.

ನಾಡು ಅನುಭವಿಸುತ್ತಿರುವ ಸಂಕಟಗಳಿಗೆ ಶಾಸನಸಭೆಯು ಧ್ವನಿಯಾಗಬೇಕು. ಜನವಿರೋಧಿ ಶಾಸನಗಳನ್ನು ಸರ್ಕಾರ ಸದನದಲ್ಲಿ ಮಂಡಿಸಿದಾಗ, ಅದರ ಹುಳುಕುಗಳನ್ನು ತೆರೆದಿಡುವುದೇ ಕಲಾಪದ ಆದ್ಯತೆಯಾಗಬೇಕು. ಅಧಿವೇಶನದಲ್ಲಿ ಅನೇಕ ಮಸೂದೆಗಳನ್ನು ಮಂಡಿಸಿದ ಸರ್ಕಾರ, ಗಲಾಟೆ ಮಧ್ಯೆಯೇ ಒಪ್ಪಿಗೆ ಪಡೆಯಿತು. ಕೆಲಸಕ್ಕೆ ಬಾರದ ಸಂಗತಿಗಳೇ ಪ್ರಧಾನ ಆಸಕ್ತಿಯಾಗಿ ಮುನ್ನೆಲೆಗೆ ಬಂದವು. ಇದನ್ನು ಗಮನಿಸಿದವರಲ್ಲಿ ಕೆಲವರಿಗಾದರೂ ವಿರೋಧ ಪಕ್ಷಗಳಿಗೆ ಶಾಸನಸಭೆಯ ಜವಾಬ್ದಾರಿಯೇ ಮರೆತುಹೋದಂತಿದೆ ಎಂದು ಅನ್ನಿಸಿರಬಹುದು.

ಸದನದಲ್ಲಿ ಆಯಾ ಪಕ್ಷಗಳ ಶಾಸಕರಿಗೆ ಮಾರ್ಗದರ್ಶನ ಮಾಡುತ್ತಾ, ಚರ್ಚೆಗೆ ದಿಕ್ಕು ತೋರಿಸುವುದು ನಾಯಕನ ಜವಾಬ್ದಾರಿ. ಅಶೋಕ ಆಯ್ಕೆಗೆ ಆರಂಭದಿಂದಲೇ ಮೂಡಿದ ಅಪಸ್ವರ, ಸದನದೊಳಗೆ ವಿಕಾರ ರೂಪದಲ್ಲಿ ಪ್ರದರ್ಶನಗೊಂಡಿತು. ಅಧ್ಯಕ್ಷ, ನಾಯಕನ ಬಗ್ಗೆ ಕಿಡಿಕಾರಿದ್ದ ಬಸನಗೌಡ ಪಾಟೀಲ ಯತ್ನಾಳ, ಪ್ರತಿದಿನವೂ ಸದನದ ಒಳಗೆ, ಹೊರಗೆ ಅವರನ್ನು ಟೀಕಿಸುತ್ತಲೇ ಪಕ್ಷವನ್ನು ಮುಜುಗರಕ್ಕೆ ದೂಡಿದರು. ಬಿ.ವೈ.ವಿಜಯೇಂದ್ರ ಬಣ, ವಿ.ಸುನಿಲ್ ಕುಮಾರ್‌ರ ಕರಾವಳಿ ಬಣ, ಸಿ.ಎನ್.ಅಶ್ವತ್ಥನಾರಾಯಣ ಅವರ ಬೆಂಗಳೂರು ಬಣ, ಯಾರ ಬಣದ ಜತೆಗೂ ಗುರುತಿಸಿ-ಕೊಳ್ಳದ ಇನ್ನಷ್ಟು ಶಾಸಕರು... ಹೀಗೆ ಪ್ರತ್ಯೇಕ ಬಣಗಳು ಬಿಜೆಪಿ ಮುರಿದ ಮನೆಯಾಗಿರುವುದನ್ನು ತೋರಿಸಿದವು. ಸಾಲದ್ದಕ್ಕೆ, ಪಕ್ಷದಿಂದ ಒಂದು ಕಾಲು ಹೊರಗಿಟ್ಟಿರುವ ಎಸ್.ಟಿ.ಸೋಮಶೇಖರ್, ಶಿವರಾಂ ಹೆಬ್ಬಾರ್ ಧರಣಿಯಲ್ಲಿ ಪಾಲ್ಗೊಳ್ಳದೆ, ಭಿನ್ನ ನಿಲುವು ತಾಳಿದರು.



ಅಶೋಕ ಗಮನಕ್ಕೆ ಬಾರದೇ ವಿಜಯೇಂದ್ರ, ಸುನಿಲ್ ಕುಮಾರ್ ಪ್ರತ್ಯೇಕವಾಗಿ ಸಭಾಧ್ಯಕ್ಷರ ಪೀಠದ ಎದುರಿನ ಧರಣಿಗೆ ನಾಯಕತ್ವ ವಹಿಸಿದರು. ಯತ್ನಾಳರು ಒಮ್ಮೆ ಸಭಾತ್ಯಾಗ ಮಾಡಿಸಿದರು. ಚನ್ನರಾಜ ಹಟ್ಟಿಹೊಳಿ ಪ್ರಕರಣದಲ್ಲಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬೇಕೆಂದು ಹಟಕ್ಕೆ ಬಿದ್ದಂತಿದ್ದ ವಿಜಯೇಂದ್ರ, ಧರಣಿಗೆ ತಮ್ಮ ಶಾಸಕರನ್ನು ಹುರಿದುಂಬಿಸಿದ್ದರು. ಕೆಲವರು ಧರಣಿ ಕಡೆಗೆ ಹೊರಟರೆ, ಅಶೋಕ ಸಭಾತ್ಯಾಗ ಮಾಡಿಸಿದರು. ಬೆಂಗಳೂರಿನ ಎಸ್.ಆರ್.ವಿಶ್ವನಾಥ್ ಎಲ್ಲರ ಎದುರೇ ಅವಾಚ್ಯ ಶಬ್ದಗಳಿಂದ ತಮ್ಮ ನಾಯಕನನ್ನೇ ನಿಂದಿಸಿದ್ದು, ಪಕ್ಷದೊಳಗಿನ ವೈಮನಸ್ಸು ಪ್ರಬಲವಾಗಿರುವುದನ್ನು ತೆರೆದಿಟ್ಟಿತು.

ಇದನ್ನು ಸಮರ್ಥವಾಗಿ ಬಳಸಿಕೊಂಡ ಕಾಂಗ್ರೆಸ್, ಎದುರಾಳಿಗಳನ್ನು ಕಟ್ಟಿಹಾಕಿತು. ಜಮೀರ್ ಅಹಮದ್ ರಾಜೀನಾಮೆಗೆ ಆಗ್ರಹಿಸಿ ಧರಣಿ ನಡೆಸುವ ಸಲಹೆಯನ್ನು ಬೆಂಗಳೂರಿನ ಹಿರಿಯ ಶಾಸಕರೊಬ್ಬರು ಅಶೋಕಗೆ ನೀಡಿದರು. ‘ಉತ್ತರ ಕರ್ನಾಟಕದ ಬಗೆಗಿನ ಚರ್ಚೆಗೆ ಬಿಜೆಪಿಗೆ ಆಸಕ್ತಿ ಇಲ್ಲ’ ಎಂಬ ಪ್ರತ್ಯಸ್ತ್ರ ಬಳಸಿದ ಕಾಂಗ್ರೆಸ್, ಎದುರಾಳಿಗಳ ಮಗ್ಗುಲು ಮುರಿಯಿತು. ವಿರೋಧ ಪಕ್ಷದ ಸದಸ್ಯರು ಧರಣಿನಿರತರಾಗಿರುವಾಗಲೇ ಸಭಾಧ್ಯಕ್ಷರು ಕಲಾಪ ನಡೆಸಿದರು. ಆರಂಭದಲ್ಲಿ ಉಗ್ರ ಘೋಷಣೆಗಳನ್ನು ಕೂಗಿದ ಬಿಜೆಪಿ ಸದಸ್ಯರು ಆಮೇಲೆ ಮೌನಕ್ಕೆ ಶರಣಾದರು. ಸುಮಾರು ಐದು ಗಂಟೆ ನಿಂತೇ ಕಾಲ ಕಳೆದ ಬಿಜೆಪಿ ಸದಸ್ಯರು ಕೊನೆಗೆ ಹತಾಶೆಗೆ ತುತ್ತಾಗಿದ್ದರು.

‘ಒಂದು ದಿನದ ಮಟ್ಟಿಗೆ ಅಮಾನತು ಮಾಡಿ, ನಾವು ಗೆದ್ದಂತಾಗುತ್ತದೆ’ ಎಂದು ‘ಸಂಧಾನ ಸೂತ್ರ’ವನ್ನು ಬಿಜೆಪಿ ಮುಂದಿಟ್ಟರೂ ಸಭಾಧ್ಯಕ್ಷರು ಒಪ್ಪಲಿಲ್ಲ. ಈ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಸಾಧ್ಯವಿಲ್ಲವೆಂದು ಗೊತ್ತಿದ್ದರೂ ಹಿರಿಯರೊಬ್ಬರ ಸಲಹೆಯನ್ನು ಪಾಲಿಸಿದ್ದು ವಿರೋಧ ಪಕ್ಷದ ಸದಸ್ಯರನ್ನು ಕಂಗೆಡಿಸಿತು. ಅಲ್ಲಿಯೂ ಸೋತು, ಕೊನೆಗೆ ಧರಣಿ ವಾಪಸ್ ಪಡೆಯಬೇಕಾದ ಸ್ಥಿತಿಗೆ ಬಿಜೆಪಿ ತಲುಪಿತು.

ಸರ್ಕಾರದ ಲೋಪದೋಷಗಳನ್ನು ಬಯಲುಗೊಳಿಸುವ ಉಮೇದಿನಿಂದ ಬೆಳಗಾವಿಗೆ ದೌಡಾಯಿಸಿದ್ದ ಬಿಜೆಪಿಯನ್ನು ತನ್ನೊಡಲ ಕಿಚ್ಚೇ ಸುಟ್ಟಿತು. ವರ್ಗಾವಣೆಯಲ್ಲಿ ಭ್ರಷ್ಟಾಚಾರ, ಬಿಬಿಎಂಪಿ ಹಾಗೂ ಕೆಲವು ಇಲಾಖೆಗಳಲ್ಲಿನ ಬಿಲ್ ಪಾವತಿಗೆ ಕಮಿಷನ್, ಪ್ರಭಾವಿಗಳ ಮಕ್ಕಳ ಹಸ್ತಕ್ಷೇಪದಂತಹ ಗಂಭೀರ ಆರೋಪಗಳ ಕುರಿತು ಚರ್ಚಿಸುವ ಗೋಜಿಗೇ ಹೋಗದ ಪ್ರತಿಪಕ್ಷವು ಜನರ ಹಿತಾಸಕ್ತಿಯ ಪರ ಧ್ವನಿ ಎತ್ತುವಲ್ಲಿಯೂ ವಿಫಲವಾಯಿತು.

ಚುರುಮುರಿ



ಉತ್ತರ ಗೊತ್ತಿದ್ದಾಗ...

• ಸುಮಂಗಲಾ

‘ಏ, ನೋಡಿಲ್ಲಿ... ಇಡೀ ದೇಶದಾಗೆ ನಮ್ ಕರುನಾಡು ಮೂರನೇ ಸ್ಥಾನದಾಗೆ ಐತಿ’ ಬೆಕ್ಕಣ್ಣ ಖುಷಿಯಿಂದ ಹೆಡ್‌ಲೈನ್ ಓದಿತು. ಆಮೇಲೆ ಸುದ್ದಿ ಓದುತ್ತಿದ್ದಂತೆ, ‘ಛೆ... ನೀವು ಕನ್ನಡಿಗರು ಏನೋ ಸಾಧನೆ ಮಾಡೀರಿ ಅಂತ ನಾ ಖುಷಿಯಾದೆ, ನೋಡಿದರೆ ಮಹಿಳೆಯರನ್ನು ವಿವಸ್ತ್ರಗೊಳಿಸುವ ಉದ್ದೇಶದಿಂದ ದೌರ್ಜನ್ಯ ಎಸಗಿದ ಪ್ರಕರಣಗಳ ಸಂಖ್ಯೆಯಲ್ಲಿ ಮೂರನೇ ಸ್ಥಾನವಂತೆ’ ಎಂದು ನನ್ನ ಮೂತಿಗೆ ತಿವಿಯಿತು. ನಾನು ತ್ತೆತ್ತೆಬ್ಬೆಬ್ಬೆ ಗುಟ್ಟಿದೆ.

‘ನಮ್ಮ ರಾಜ್ಯವನ್ನು ಯೋಗಿ ಮಾದರಿ ರಾಜ್ಯ ಮಾಡತೀವಿ ಅಂತಿದ್ದರಲ್ಲ, ಈ ವಿಚಾರದಾಗೆ ಹಂಗೇ ಆದಂಗೆ ಕಾಣತೈತಿ. ಮೊದಲ ಸ್ಥಾನದಾಗೆ ಉತ್ತರಪ್ರದೇಶ, ಮೂರನೇ ಸ್ಥಾನದಾಗೆ ನಾವು ಅದೀವಿ’ ಎಂದೆ ನಾನು ಬೇಸರದಿಂದ.

‘ಯಾರಿಗೆ ಯಾರು ಮಾದರಿಯೋ’ ಎಂದು ಹಣೆ ಚಚ್ಚಿಕೊಂಡಿತು.

‘ಅದಿರಲಿ, ಮೊನ್ನೆ ಸಂಸತ್ತಿಗೆ ನುಗ್ಗಿ ದಾಂದಲೆ ಮಾಡಿದವ್ರಲ್ಲಿ ಒಬ್ಬನಿಗೆ ನಿಮ್ಮ ಪ್ರತಾಪಣ್ಣನೇ ಪಾಸ್ ಕೊಡಿಸಿದ್ದನಂತೆ’ ಮಾತು ಬದಲಿಸಿದೆ.

‘ಪ್ರತಾಪಣ್ಣನ ಹತ್ತಿರ ಅವನನ್ನು ಕಳಿಸಿದವರು ಎಡಬಿಡಂಗಿಗಳಿರಬೇಕು ಅಥವಾ ಕಾಂಗಿಗಳೇ ಇರಬಕು. ಪಾಸ್ ಕೊಡಿಸಿದ ಮಾತ್ರಕ್ಕೇ ಪ್ರತಾಪಣ್ಣನ ರಾಷ್ಟ್ರಭಕ್ತಿನ ಪ್ರಶ್ನೆ ಮಾಡೂದೇನು’ ಬೆಕ್ಕಣ್ಣ ಗುರುಗುಟ್ಟಿತು.

‘ಮಹುವಾ ಪಾಸ್‌ವರ್ಡ್ ಕೊಟ್ಟಾಳೆ ಅಂತ ಆಕಿನ್ನ ಉಚ್ಚಾಟನೆ ಮಾಡಿದ್ರು, ಮತ್ತ ಇಂವಾ ಪಾಸ್ ಕೊಡಿಸಿದರೆ ಅಡ್ಡಿಲ್ಲೇನು?’

‘ಪಾಸ್ ಕೊಡೂದಕ್ಕೂ ಪಾಸ್‌ವರ್ಡನ್ನೇ ಕೊಡೋದಕ್ಕೂ ಅಜಗಜಾಂತರ ಐತಿ. ಪಾಸ್‌ವರ್ಡ್ ಕೊಡೂದಂದ್ರೆ ಸಂಸತ್ತಿನ ವರ್ಚುವಲ್ ಕೀಲಿಕೈ ಕೊಟ್ಟಂಗೆ’ ಎಂದು ವಿತಂಡವಾದ ಹೂಡಿತು.

‘ಎರಡೂ ಪ್ರಕರಣದಾಗೆ ಮುಖ್ಯ ಪ್ರಶ್ನೆನೇ ತಳ್ಳಿಹಾಕಿದ್ರಲ್ಲ! ಅದಾನಿ ಕುರಿತು ಚಕಾರ ಎತ್ತಂಗಿಲ್ಲ, ನಿರುದ್ಯೋಗ, ಹಣದುಬ್ಬರ, ಮಣಿಪುರ ಹಿಂಸಾಚಾರ ಕುರಿತ ಪ್ರಶ್ನೆಗಳನ್ನೂ ಗಾಳಿಗೆ ತೂರಿದ್ರು’ ಎಂದೆ.

‘ಉತ್ತರ ಗೊತ್ತಿದ್ದಾಗ ಪ್ರಶ್ನೆ ಎದಕ್ಕೆ ಕೇಳಬೇಕು’ ಬೆಕ್ಕಣ್ಣ ಗಹಗಹಿಸಿತು!

ಸಂಗತ

ಒಳಗೊಳ್ಳುವಿಕೆಯೇ ಮುನ್ನಡೆ

ಹೆಚ್ಚು ಸದ್ದಿಲ್ಲದೆ ಆಗುವ ಬದಲಾವಣೆಯ ಬಿಸಿ ನಿಧಾನವಾಗಿ ತಟ್ಟುತ್ತದೆ. ಆ ಬಿಸಿ ಬೆಚ್ಚನೆಯ ಭಾವವನ್ನು ಹುಟ್ಟಿಸುತ್ತದೆ

• ವಾದಿರಾಜ್

ಐದು ರಾಜ್ಯಗಳ ವಿಧಾನಸಭೆಗಳಿಗೆ ಇತ್ತೀಚೆಗೆ ನಡೆದ ಚುನಾವಣೆಯ ಫಲಿತಾಂಶ ಮತ್ತು ಅನಂತರದ ಬೆಳವಣಿಗೆಗಳು ತಳವರ್ಗಗಳ ನೈಜ ಒಳಗೊಳ್ಳುವಿಕೆ ಇಲ್ಲದೆ ಗಟ್ಟಿಯಾದ ರಾಜಕೀಯ ಮುನ್ನಡೆ ಸಾಧ್ಯವಿಲ್ಲ ಎಂಬುದನ್ನು ಸಾಬೀತುಪಡಿಸಿವೆ. ನೂರು ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದ ಅವರು ಇದನ್ನೇ ‘ಮುಂದಿನ್ನು ಶೂದ್ರರ ಕಾಲ’ ಎಂದು ಹರಳುಗಟ್ಟಿದ ಮಾತಿನಲ್ಲಿ ಹೇಳಿದ್ದರು. ಪಂಚರಾಜ್ಯಗಳ ಚುನಾವಣೋತ್ತರ ಬೆಳವಣಿಗೆಗಳ ಆಳವನ್ನು ಬಗೆದರೆ, ತಳವರ್ಗಗಳು ಮುಂಚೂಣಿಗೆ ಬರುತ್ತಿರುವುದು ಸ್ಪಷ್ಟವಾಗುತ್ತದೆ.

ಹಿಂದಿನ ವರ್ಷ ಉತ್ತರಪ್ರದೇಶದಲ್ಲಿ ಚುನಾವಣಾ ಗೆಲುವಿನ ನಂತರ ಅಸ್ತಿತ್ವಕ್ಕೆ ಬಂದ ಯೋಗಿ ಆದಿತ್ಯನಾಥ ನೇತೃತ್ವದ ಸಚಿವ ಸಂಪುಟದಲ್ಲಿ ಐವರು ಮಹಿಳೆಯರು ಸ್ಥಾನ ಪಡೆದರು. ಮಾತ್ರವಲ್ಲ, ಅವರಲ್ಲಿ ಮೂವರು ಅಸ್ಪೃಶ್ಯರೆನಿಸಿದ ಜಾಟವ, ಚಮ್ಮಾರ್ ಸಮುದಾಯಕ್ಕೆ ಸೇರಿದವರು. ಇವರು ಸ್ನಾತಕೋತ್ತರ ಪದವೀಧರರೂ ಆಗಿರುವುದು, ಇದು ಬರೀ ಪ್ರಾತಿನಿಧ್ಯಕ್ಕೆ ಸಿಕ್ಕ ಮಾನ್ಯತೆ ಅಲ್ಲ ಎಂಬುದನ್ನು ದೃಢಪಡಿಸುತ್ತದೆ. ದಲಿತರಲ್ಲಿ ಮಹಿಳೆಯರೂ ಒಳಗೊಳ್ಳುವಿಕೆಯ ವ್ಯಾಪ್ತಿಗೆ ಬಂದಿದ್ದಾರೆ ಎಂಬುದು ರಾಜಕಾರಣದಲ್ಲಿ ಐತಿಹಾಸಿಕ ಮುನ್ನಡೆಯೆನಿಸಿದೆ. ಈಗ ‘ಒಳಗೊಳ್ಳುವಿಕೆಯ ರಾಜಕಾರಣ’ ಹಲವು ಮುಖಗಳಲ್ಲಿ ತೆರೆದುಕೊಳ್ಳುತ್ತಿರುವುದು ಗಮನಾರ್ಹವೆನಿಸಿದೆ.

ಇತ್ತೀಚೆಗೆ ಚುನಾವಣೆ ಮುಗಿಸಿದ ದೂರದ ಮಿಜೋರಾಂನ 40 ವಿಧಾನಸಭಾ ಕ್ಷೇತ್ರಗಳಲ್ಲಿ 39 ಪರಿಶಿಷ್ಟ ಪಂಗಡ (ಎಸ್‌ಟಿ) ಮೀಸಲು ಕ್ಷೇತ್ರಗಳು. ರಾಜಧಾನಿ ಐಜ್ವಾಲ್‌ನ ಒಂದು ಕ್ಷೇತ್ರ ಮಾತ್ರ ಸಾಮಾನ್ಯವಾದರೂ ಅಲ್ಲಿಯೂ ಸ್ಪರ್ಧಿಸಿದ ಎಲ್ಲಾ 6 ಅಭ್ಯರ್ಥಿಗಳು ಪರಿಶಿಷ್ಟ ಪಂಗಡದವರೇ ಆಗಿದ್ದರು!

ತೆಲಂಗಾಣದಲ್ಲಿ ಅಧಿಕಾರ ಹಿಡಿದ ಕಾಂಗ್ರೆಸ್ ಅಲ್ಲಿನ 19 ಪರಿಶಿಷ್ಟ ಜಾತಿ (ಎಸ್‌ಸಿ) ಮೀಸಲು ಕ್ಷೇತ್ರ-ಗಳಲ್ಲಿ ಹದಿನಾಲ್ಕನ್ನು ತನ್ನದಾಗಿಸಿಕೊಂಡಿದೆ. ಉಳಿದ ಐದು ಬಿಆರ್‌ಎಸ್ ಪಾಲಾಗಿವೆ. ತೆಲಂಗಾಣದ 12 ಎಸ್ಟಿ ಮೀಸಲು ಕ್ಷೇತ್ರಗಳಲ್ಲಿ ಕಾಂಗ್ರೆಸ್ಸಿಗೆ 9, ಬಿಆರ್‌ಎಸ್‌ಗೆ 3 ಸ್ಥಾನ ದಕ್ಕಿವೆ. ಮತದಾನಕ್ಕೆ ಕೆಲ ದಿನದ ಮೊದಲು ಪ್ರಧಾನಿ ನರೇಂದ್ರ ಮೋದಿ ‘ಮಾದಿಗ ವಿಶ್ವರೂಪಂ’ ಕಾರ್ಯಕ್ರಮದಲ್ಲಿ ಪಾಲ್ಗೊಂಡು ‘ಒಳಮೀಸಲಾತಿಯ ಹೋರಾಟದಲ್ಲಿ ನಿಮ್ಮ ಜೊತೆಗಿದ್ದೇನೆ, ಸಾಮಾಜಿಕ ನ್ಯಾಯ ಕೊಡುವುದು ನನ್ನ ಜವಾಬ್ದಾರಿ’ ಎಂದು ಘೋಷಿಸಿದರು. ಇದರ ಪರಿಣಾಮ ಏನಾಯಿತು? ಅಂದಾಜಿಸುವುದು ಕಷ್ಟ. ಆದರೆ ಅಲ್ಲಿ ಬಿಜೆಪಿಯ ಒಟ್ಟು ಮತ ಗಳಿಕೆ ಪ್ರಮಾಣ ದ್ವಿಗುಣಗೊಂಡಿದೆ.

ತೆಲಂಗಾಣದ ಹೊಸ ಸರ್ಕಾರದಲ್ಲಿ ಬಲ ದಲಿತ ಸಮುದಾಯದ ಮಲ್ಲು ಭಟ್ಟಿವಿಕ್ರಮಾರ್ಕ ಉಪ ಮುಖ್ಯಮಂತ್ರಿಯಾದರೆ, ಅದೇ ಸಮುದಾಯದ ಗಡ್ಡಂ ಪ್ರಸಾದ್ ಕುಮಾರ್ ಸ್ಪೀಕರ್ ಹುದ್ದೆಗೆ ಏರಿದ್ದಾರೆ. ಹಿಂದೆ ಅವಿಭಜಿತ ಆಂಧ್ರಪ್ರದೇಶದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ಮಾದಿಗ ಸಮುದಾಯದ ದಾಮೋದರ ರಾಜನರಸಿಂಹ ಮತ್ತು ಬುಡಕಟ್ಟು ಮೂಲದ, ಮಾಜಿ ನಕ್ಸಲ್ ನಾಯಕಿ ಸೀತಕ್ಕ (ಧನಸರಿ ಅನುಸೂಯ) ಸಚಿವರಾಗಿದ್ದಾರೆ.

ಶೇ 33ರಷ್ಟು ಆದಿವಾಸಿಗಳ ಜನಬಾಹುಳ್ಯವಿರುವ ಛತ್ತೀಸಗಢವು ಬಿಜೆಪಿಯನ್ನು ಆಯ್ಕೆ ಮಾಡಿಕೊಂಡಿದೆ. ಎರಡನೇ ಅತಿದೊಡ್ಡ ಸಮುದಾಯವೆನಿಸಿದ ‘ಕನ್ವರ್’ ಬುಡಕಟ್ಟಿನ ವಿಷ್ಣುದೇವ್ ಸಾಯ್ ಮುಖ್ಯಮಂತ್ರಿ ಆಗಿದ್ದಾರೆ. ಛತ್ತೀಸಗಢದ 29 ಎಸ್ಟಿ ಮೀಸಲು ಕ್ಷೇತ್ರಗಳಲ್ಲಿ 17 ಬಿಜೆಪಿಯ ಪಾಲಾದರೆ, ಕಾಂಗ್ರೆಸ್ಸಿಗೆ ಸಿಕ್ಕಿದ್ದು 11. ಎಸ್‌ಸಿ ಮೀಸಲು ಕ್ಷೇತ್ರಗಳಲ್ಲಿ ಕಾಂಗ್ರೆಸ್ 6 , ಬಿಜೆಪಿ 4 ಸ್ಥಾನ ಪಡೆದಿವೆ.

ಮಧ್ಯಪ್ರದೇಶದ 46 ಎಸ್‌ಟಿ ಮೀಸಲು ಕ್ಷೇತ್ರಗಳಲ್ಲಿ ಬಿಜೆಪಿ 24, ಕಾಂಗ್ರೆಸ್ 22 ಸ್ಥಾನ ಗಳಿಸಿವೆ. ರಾಜ್ಯದ 35 ಎಸ್‌ಸಿ ಮೀಸಲು ಕ್ಷೇತ್ರಗಳಲ್ಲಿ 26 ಬಿಜೆಪಿ ಪಾಲಾದರೆ, ಕಾಂಗ್ರೆಸ್ಸಿಗೆ 9 ಸ್ಥಾನ ಸಿಕ್ಕಿದೆ. ಬಿಜೆಪಿಯು ಮಧ್ಯಪ್ರದೇಶದಲ್ಲಿ ಎಸ್‌ಸಿ ಮತಪ್ರಮಾಣದಲ್ಲಿ ಶೇ 51ರಷ್ಟನ್ನು ತನ್ನದಾಗಿಸಿಕೊಂಡಿದೆ. ಪ್ರಬಲ ಯಾದವ ಸಮುದಾಯಕ್ಕೆ ಮುಖ್ಯಮಂತ್ರಿ ಪದವಿ ಸಿಕ್ಕಿದೆ. ಈ ಹಿಂದೆ ಹಣಕಾಸು ಸಚಿವರೂ ಆಗಿದ್ದ, ಅರ್ಥಶಾಸ್ತ್ರದ ಸ್ನಾತಕೋತ್ತರ ಪದವೀಧರರಾದ ದಲಿತ ಸಮುದಾಯದ ಜಗದೀಶ ದೇವ್ಡಾ ಉಪಮುಖ್ಯಮಂತ್ರಿಯಾಗಿದ್ದಾರೆ.



ರಾಜಸ್ಥಾನದ 34 ಎಸ್‌ಸಿ ಮೀಸಲು ಕ್ಷೇತ್ರಗಳಲ್ಲಿ 22 ಬಿಜೆಪಿಯ ಪಾಲಾದರೆ, ಕಾಂಗ್ರೆಸ್ ಉಳಿಸಿಕೊಂಡಿದ್ದು 11 ಕ್ಷೇತ್ರ ಮಾತ್ರ. ರಾಜ್ಯದ ಎಸ್‌ಟಿ ಮೀಸಲು ಕ್ಷೇತ್ರಗಳಲ್ಲಿ 12ರಲ್ಲಿ ಬಿಜೆಪಿ ಗೆದ್ದರೆ, ಕಾಂಗ್ರೆಸ್ಸಿಗೆ ದಕ್ಕಿದ್ದು 10 ಸ್ಥಾನಗಳು. ಚಾಪೆ, ಹಗ್ಗ ನೇಯುವ ‘ಭೈರ್ವ’ ಎಂಬ ಪರಿಶಿಷ್ಟ ಜಾತಿಯ, ಪಿಎಚ್.ಡಿ ಪದವೀಧರರಾದ ಪ್ರೇಮಚಂದ್ ಉಪಮುಖ್ಯಮಂತ್ರಿ ಹುದ್ದೆಗೆ ಏರಿದ್ದಾರೆ.

ಜಾತಿ ಸಮೀಕರಣದ ರಾಜಕಾರಣ ಒಂದು ಸೀಮಿತ ರಣತಂತ್ರವಾಗಬಹುದಷ್ಟೆ. ಸಾಮಾಜಿಕ ಬದ್ಧತೆ ಇದ್ದರಷ್ಟೇ ‘ಒಳಗೊಳ್ಳುವಿಕೆಯ ರಾಜಕಾರಣ’ವನ್ನು ದಕ್ಕಿಸಿಕೊಳ್ಳಬಹುದು. ಬಾಬಾಸಾಹೇಬ್ ಅಂಬೇಡ್ಕರ್ ಅವರ ನಂತರ ದೇಶಕ್ಕೆ ದಲಿತರು ಕಾನೂನು ಸಚಿವ-ರಾಗಿರುವುದು ಅಪರೂಪ. ಬಿ. ಶಂಕರಾನಂದ ಅವರು ಒಮ್ಮೆ ಕಾನೂನು ಸಚಿವರಾಗಿದ್ದರು. ಕೇಂದ್ರ ಸರ್ಕಾರದ ಈಗಿನ ಕಾನೂನು ಸಚಿವರಾದ ಅರ್ಜುನ್ ರಾಂ ಮೇಘವಾಲ್ ದಲಿತರೆ. ಸಂಸತ್ತಿಗೆ ಸೈಕಲ್ಲಿನಲ್ಲಿ ಬರುವ ಸರಳ ವ್ಯಕ್ತಿತ್ವದ ಮೇಘವಾಲರ ಕಿಸೆಯಲ್ಲಿ ಕಾನೂನು, ಎಂಎ, ಎಂಬಿಎ ಪದವಿಗಳಿವೆ. ಇಂತಹ ತಣ್ಣನೆಯ ಬದಲಾವಣೆಯ ಬಿಸಿ ನಿಧಾನವಾಗಿ ತಟ್ಟುತ್ತದೆ. ಆ ಬಿಸಿ ಬೆಚ್ಚನೆಯ ಭಾವವನ್ನು ಹುಟ್ಟಿಸುತ್ತದೆ.

ಲೇಖಕ: ಆರ್‌ಎಸ್‌ಎಸ್ ಕಾರ್ಯಕರ್ತ

ವಾಚಕರ ವಾಣಿ

ನಿಷ್ಪಕ್ಷಪಾತ ತನಿಖೆ ನಡೆಯಲಿ

ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗಾಗಿ ಕಿತ್ತೂರು ರಾಣಿ ಚೆನ್ನಮ್ಮ, ಮೊರಾರ್ಜಿ ದೇಸಾಯಿಯಂತಹ ವಸತಿ ಶಾಲೆಗಳನ್ನು ತೆರೆದು ಕೋಟ್ಯಂತರ ರೂಪಾಯಿ ಅನುದಾನವನ್ನು ವ್ಯಯಿಸುವ ಮೂಲಕ ಉಚಿತ ಸೌಲಭ್ಯಗಳನ್ನು ಸರ್ಕಾರವೇನೊ ಒದಗಿಸಿದೆ. ಆದರೆ ಈ ಕೆಲವು ಶಾಲೆಗಳಲ್ಲಿನ ಪ್ರಾಂಶುಪಾಲರು ಮತ್ತು ಶಿಕ್ಷಕರು ಯಾವುದೇ ಲಂಗುಲಗಾಮಿಲ್ಲದೆ ಮೇಲಧಿಕಾರಿಗಳೊಂದಿಗೆ ಶಾಮೀಲಾಗಿ, ಮನಬಂದಂತೆ ಕರ್ತವ್ಯ ನಿರ್ವಹಿಸುತ್ತಿರುವುದು ಆಗಾಗ ಪತ್ರಿಕೆಗಳಲ್ಲಿ ವರದಿಯಾಗುತ್ತಿರುತ್ತದೆ.

ಅದರಂತೆಯೇ ಈಗ ನಡೆದಿರುವುದು, ಮಾಲೂರು ತಾಲ್ಲೂಕಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯೊಂದರಲ್ಲಿ ಮಲಗುಂಡಿಯ ಸ್ವಚ್ಛತಾ ಕಾರ್ಯಕ್ಕೆ ಮಕ್ಕಳನ್ನು ಇಳಿಸಿದ ಪ್ರಕರಣ. ಮಲಗುಂಡಿಗೆ ಮಕ್ಕಳನ್ನು ಇಳಿಸುವುದನ್ನು ತಡೆಯುವ ಅವಕಾಶವಿದ್ದರೂ ತಡೆಯದೆ, ಅದರ ಫೋಟೊ ತೆಗೆದು, ಆ ಮಕ್ಕಳ ಹೇಳಿಕೆಯನ್ನು ಗುಟ್ಟಾಗಿ ವಿಡಿಯೊ ಮಾಡಿರುವ ಶಿಕ್ಷಕ ಸಹ ಇಲ್ಲಿ ತಪ್ಪಿತಸ್ಥನಂತೆ ಕಾಣುತ್ತಾರೆ. ಇಲ್ಲಿಯ ಮಕ್ಕಳಿಗಾಗಲೀ ಪೋಷಕರಿಗಾಗಲೀ ಹಣಬಲ, ಜಾತಿಬಲ, ಜನಬಲವಿಲ್ಲವೆಂಬ ಕಾರಣದಿಂದ ಈ ಪ್ರಕರಣ ಕೂಡ ಹತ್ತರಲ್ಲಿ ಹನ್ನೊಂದಾಗದೆ, ನಿಷ್ಪಕ್ಷಪಾತ ತನಿಖೆಯಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ.

ಮಂಜುನಾಥ್ ಕೇಶವ್, ಕೃಷ್ಣರಾಜಪೇಟೆ, ಮಂಡ್ಯ

ಪಠ್ಯಕ್ರಮ: ಕೃಷಿ, ಪರಿಸರಕ್ಕಿರಲಿ ಆದ್ಯತೆ

ಪಠ್ಯಕ್ರಮದಲ್ಲಿ ಸಾಮಾಜಿಕ, ಆರ್ಥಿಕ ವೈವಿಧ್ಯಗಳ ಕುರಿತು ಅರಿವು ಮೂಡಿಸುವುದು ಅಗತ್ಯ ಎಂದು ಬರಗೂರು ರಾಮಚಂದ್ರಪ್ಪ ತಮ್ಮ ಲೇಖನದಲ್ಲಿ (ಪ್ರ.ವಾ., ಡಿ.16) ಅಭಿಪ್ರಾಯಪಟ್ಟಿದ್ದಾರೆ. ನಮ್ಮ ಹಾಲಿ ಪಠ್ಯಕ್ರಮದಲ್ಲಿ ಕೃಷಿ, ಪರಿಸರ ವಿಜ್ಞಾನಕ್ಕೆ ಅತಿ ಕಡಿಮೆ ಮಹತ್ವ ನೀಡಲಾಗಿದೆ. ಜಪಾನ್, ಜರ್ಮನಿ, ಅಮೆರಿಕ, ಚೀನಾ ದೇಶಗಳಲ್ಲಿ ಪರಿಸರವನ್ನು ಪಠ್ಯಕ್ರಮದಲ್ಲಿ ಸೇರಿಸಿ ಬೋಧಿಸಲಾಗುತ್ತಿದೆ. ಮಣ್ಣು, ನೀರು, ಗಾಳಿ, ಬಿಸಿಲು, ಮರ, ಪ್ರಾಣಿ, ಪಕ್ಷಿಗಳ ಮಹತ್ವ, ಉತ್ತಮ ಆಹಾರ ಪದಾರ್ಥ ಮತ್ತು ರೈತನಿಗೆ ನೀಡಬೇಕಾದ ಆದ್ಯತೆ, ವಾಯು, ಜಲ, ಮಣ್ಣಿನ ಮಾಲಿನ್ಯ ತಡೆಗಟ್ಟುವಿಕೆ, ಅರಣ್ಯದ ಮಹತ್ವ, ಜಾಗತಿಕ ತಾಪಮಾನದಂತಹ ವಿಷಯಗಳು ಪಠ್ಯಕ್ರಮದಲ್ಲಿ ಸೇರ್ಪಡೆಯಾಗಲಿ. ಕೃಷಿ ತಂತ್ರಜ್ಞರ ಸಂಸ್ಥೆಯು ಪಠ್ಯಕ್ರಮದಲ್ಲಿ ಕೃಷಿ, ಪರಿಸರ ವಿಜ್ಞಾನ ವಿಷಯಗಳ ಸೇರ್ಪಡೆ ಕುರಿತು ಸಲಹೆ ನೀಡಿದೆ. ಪಠ್ಯಕ್ರಮ ರೂಪಿಸಲು ಕೃಷಿ ತಂತ್ರಜ್ಞರನ್ನು ವಿಷಯತಜ್ಞರಾಗಿ ಸೇರಿಸಿಕೊಳ್ಳಬೇಕು.

ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಎಥೆನಾಲ್ ಉತ್ಪಾದನೆ: ಅಕ್ಕಿ ಬಳಕೆ ಬೇಡ

ಎಥೆನಾಲ್ ಒಂದು ಜೈವಿಕ ಇಂಧನವಾಗಿದ್ದು, ಇದನ್ನು ಕಬ್ಬು, ಜೋಳ, ಅಕ್ಕಿ, ಗೋಧಿಯಂತಹ ಮೂಲಗಳಿಂದ ಉತ್ಪಾದಿಸಲಾಗುತ್ತದೆ. ಪೆಟ್ರೋಲ್‌ಗೆ ಮಿಶ್ರಣ ಮಾಡಿ ವಾಹನಗಳಿಗೆ ಬಳಸಬಹುದಾದ್ದರಿಂದ, ಇದೊಂದು ತುಂಬಾ ಮಹತ್ವದ ವಸ್ತುವಾಗಿದೆ. ಇದರ ಬಳಕೆಯಿಂದ ಮಾಲಿನ್ಯವನ್ನು ತಡೆಗಟ್ಟಬಹುದಾಗಿದೆ. ಕಚ್ಚಾತೈಲ ಆಮದಿನ ಪ್ರಮಾಣವನ್ನು ತಗ್ಗಿಸುವ ಮೂಲಕ ದೇಶಕ್ಕೆ ದೊಡ್ಡ ಪ್ರಮಾಣದಲ್ಲಿ ಹಣದ ಉಳಿತಾಯವಾಗುವಂತೆ ಮಾಡಬಹುದಾಗಿದೆ. ಅದರೆ ಕೇಂದ್ರ ಸರ್ಕಾರವು ಉತ್ತಮ ಗುಣಮಟ್ಟದ ಅಕ್ಕಿಯನ್ನು 2020ರಿಂದಲೇ ಎಥೆನಾಲ್ ಉತ್ಪಾದನೆಗೆ ಬಳಸಲು ಅವಕಾಶ ಮಾಡಿಕೊಟ್ಟಿದೆ. ಮಾರುಕಟ್ಟೆಯಲ್ಲಿ ಅಕ್ಕಿಯ ಬೆಲೆ ಹೆಚ್ಚಾಗಲು ಇದು ಕೂಡ ಒಂದು ಕಾರಣ ಆಗಿರಬಹುದು.

2022- 23ನೇ ಸಾಲಿನಲ್ಲಿ 16 ಲಕ್ಷ ಟನ್ ಉತ್ತಮ ಗುಣಮಟ್ಟದ ಅಕ್ಕಿಯು ಎಥೆನಾಲ್ ಉತ್ಪಾದನೆಗೆ ಬಳಕೆಯಾಗಿದ್ದು, ಅಕ್ಕಿಯ ಬೆಲೆ ಗಗನಕ್ಕೇರುವಂತೆ ಮಾಡುವಲ್ಲಿ ಕೊಡುಗೆ ನೀಡಿದೆ. ಇದರ ಜೊತೆಗೆ ರಾಜ್ಯದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿರುವುದರಿಂದ ಭತ್ತದ ಉತ್ಪಾದನೆಯಲ್ಲಿ ಗಣನೀಯ ಪ್ರಮಾಣದಲ್ಲಿ ಕುಸಿತವಾಗಿದೆ. ಎಥೆನಾಲ್ ಉತ್ಪಾದನೆಗೆ ಉತ್ತಮ ಗುಣಮಟ್ಟದ ಅಕ್ಕಿ ಬಳಸುವುದನ್ನು ತಡೆಯಬೇಕು. ಎಥೆನಾಲ್ ಉತ್ಪಾದನೆ ಮಾಡಲು ಅಕ್ಕಿಗೆ ಪರ್ಯಾಯವಾಗಿ ಬೇರೆ ವಸ್ತುಗಳನ್ನು ಬಳಸುವ ಬಗ್ಗೆ ಯೋಚಿಸಬೇಕಾಗಿದೆ.

ರಾಸುಮ ಭಟ್, ಚಿಕ್ಕಮಗಳೂರು

‘ಟೂ ಮಚ್ ಪಾಲಿಟಿಕ್ಸ್’...!

ಬೇರೆ ಬೇರೆ ರಾಜ್ಯಗಳಿಗೆ ಸೇರಿದ ಕೆಲವು ಯುವಕರು ಸಂಸತ್ ಅಧಿವೇಶನದ ಸಂದರ್ಭದಲ್ಲಿ ನಡೆಸಿದ ದಾಂದಲೆ ವೇಳೆ, ದೇಶದೆಲ್ಲೆಡೆ ಇರುವ ನಿರುದ್ಯೋಗ ಹಾಗೂ ಪರಿಹಾರ ಕಾಣದ ರೈತರ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ ಎಂದು ವರದಿಯಾಗಿದೆ. ದೇಶದ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳು ಶಾಸನಸಭೆಗೆ ತಮ್ಮ ಪಕ್ಷದ ಹೆಚ್ಚು ಸಂಖ್ಯೆಯ ಸದಸ್ಯರನ್ನು ಆಯ್ಕೆ ಮಾಡಿಸುವ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಿವೆಯೇ ವಿನಾ ದೇಶದ ಸಮಸ್ಯೆಗಳ ಪರಿಹಾರ ಮಾಡಲು ಪ್ರಾಮಾಣಿಕವಾಗಿ ಶ್ರಮಿಸುತ್ತಿಲ್ಲ ಎಂಬುದು ಕಣ್ಣಿಗೆ ಕಟ್ಟುವಂತೆ ಇದೆ. ಕ್ರಿಕೆಟ್ ಪಂದ್ಯಗಳು ಇತ್ತೀಚೆಗೆ ಅತಿಯಾಗಿ ನಡೆಯುತ್ತಿರುವ ಬಗ್ಗೆ ‘ಟೂ ಮಚ್ ಕ್ರಿಕೆಟ್’ ಎಂದು ವಿಶ್ಲೇಷಿಸಲಾಗಿದೆ. ಅದರಂತೆ ದೇಶದಲ್ಲಿ ‘ಟೂ ಮಚ್ ಪಾಲಿಟಿಕ್ಸ್’ ಆಟ ನಡೆಯುತ್ತಿದೆ ಎಂಬುದನ್ನು ಪುನಃ ಹೇಳಬೇಕಿಲ್ಲ.

ಇಲ್ಲಿ ಆ ಯುವಕರಿಗೆ ಇದ್ದಿರಬಹುದಾದ ರಾಜಕೀಯ ಹಿನ್ನೆಲೆ ಅಥವಾ ಆಗಿರುವ ಭದ್ರತಾ ಲೋಪವನ್ನಷ್ಟೇ ಪ್ರಮುಖ ಅಂಶಗಳನ್ನಾಗಿ ಪರಿಗಣಿಸದೆ, ಯುವಕರು ಮತ್ತು ರೈತರ ಸಮಸ್ಯೆಗಳಿಗೆ ಸರ್ಕಾರಗಳು ಹೇಗೆ ಸ್ಪಂದಿಸಿವೆ ಎಂಬುದನ್ನು ವ್ಯವಧಾನದಿಂದ ವಿವೇಚಿಸಬೇಕಾಗಿದೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಆಡಳಿತ ನಡೆಸುತ್ತಿರುವ ಸರ್ಕಾರಗಳು ನಿರುದ್ಯೋಗ ಹಾಗೂ ರೈತರ ಸಮಸ್ಯೆ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ದಾರಿ ತಪ್ಪುತ್ತಿದೆ ಕಲಾಪ

ಶಾಸನಸಭೆಯ ನಡಾವಳಿಗಳು ಇತ್ತೀಚಿನ ವರ್ಷಗಳಲ್ಲಿ ಸಂಸದೀಯ ಘನತೆ, ಗೌರವವನ್ನು ಕಳೆದುಕೊಳ್ಳುತ್ತಿವೆ. ಶಾಸನವನ್ನು ರೂಪಿಸಬೇಕಾದ ಸದಸ್ಯರು ಯಾವುದೇ ರೀತಿಯ ಪೂರ್ವಸಿದ್ಧತೆ ಇಲ್ಲದೆ ಪಾಲ್ಗೊಳ್ಳುತ್ತಿದ್ದಾರೆ. ಬರೀ ವ್ಯಕ್ತಿನಿಂದನೆ, ಪರಸ್ಪರ ದೋಷಾರೋಪ, ಏಕವಚನದಲ್ಲಿ ನಿಂದಿಸುವುದು ವಿಧಾನಸಭೆಗೆ ಶೋಭೆಯಲ್ಲ. ಇಂತಹ ನಡವಳಿಕೆಗಳಿಗೆ ಸಭಾಧ್ಯಕ್ಷರು ಕಡಿವಾಣ ಹಾಕಬೇಕು. ಈ ದಿಸೆಯಲ್ಲಿ ಕಠಿಣವಾಗಿ ವರ್ತಿಸಬೇಕು. ಕಲಾಪ ನಡೆಸಲು ಅಪಾರ ಹಣ ವೆಚ್ಚವಾಗುತ್ತದೆ. ಹಾಗಿರುವಾಗ ಸದನದ ಕಾರ್ಯದಕ್ಷತೆಯು ಯೋಗ್ಯ ರೀತಿಯಲ್ಲಿ ಇರಬೇಕಾದುದು ಅಪೇಕ್ಷಣೀಯವಲ್ಲವೇ?

ಟಿ.ವಿ.ನಾಗರಾಜ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕುದಿ ಬಾಣಲೆಯಲ್ಲಿ ಭೂಮಿ



ಪ್ರಜಾವಾಣಿ ವಾರ್ತೆ

ಭೂಮಿಯ ಇತಿಹಾಸದಲ್ಲಿಯೇ ಈ ವರ್ಷ ಅಂದರೆ, 2023 ಗರಿಷ್ಠ ತಾಪಮಾನದ ವರ್ಷವಾಗಬಹುದು ಎಂದು ವಿಶ್ವ ಹವಾಮಾನ ಸಂಘಟನೆಯು (ಡಬ್ಲ್ಯುಎಂಒ) ಹೇಳಿದೆ. ಈ ವರ್ಷದ ಜೂನ್, ಜುಲೈ, ಆಗಸ್ಟ್ ಮತ್ತು ನವೆಂಬರ್ ಈವರೆಗಿನ ಅತಿ ಹೆಚ್ಚು ತಾಪಮಾನದ ತಿಂಗಳುಗಳು ಎಂದು ದಾಖಲಾಗಿವೆ. ಭೂಮಿಯ ವಿವಿಧ ಭಾಗಗಳಲ್ಲಿ ಉಂಟಾದ ಕಾಳ್ಗಿಚ್ಚು ಅದಕ್ಕೆ ಒಂದು ಮುಖ್ಯವಾದ ಕಾರಣ ಎಂದೂ ಹೇಳಲಾಗಿದೆ.

ಜೂನ್ ಆರಂಭದಲ್ಲಿ ಪೂರ್ವ ಕೆನಡಾದಲ್ಲಿ ಹಬ್ಬಿದ ಕಾಳ್ಗಿಚ್ಚು ಉತ್ತರ ಅಮೆರಿಕದ ಮೇಲೆ ದಟ್ಟ ಹೊಗೆಯ ಪದರವನ್ನೇ ಸೃಷ್ಟಿಸಿತ್ತು. ಆಗಸವು ಕಿತ್ತಳೆ ಬಣ್ಣ ತಳೆಯಿತು. ಇಡೀ ಪ್ರದೇಶದ ವಾಯುಗುಣಮಟ್ಟವು ಅಪಾಯಕಾರಿ ಹಂತಕ್ಕೆ ಕುಸಿದುದರ ಕುರಿತು ಭಾರಿ ಕಳವಳ ವ್ಯಕ್ತವಾಯಿತು. ಕೆನಡಾದಲ್ಲಿ ಕಾಳ್ಗಿಚ್ಚು ಅಂತ್ಯವಿಲ್ಲದಂತೆ ಉರಿಯುತ್ತಲೇ ಹೋಯಿತು.

ಈ ವರ್ಷದ ನವೆಂಬರ್ ವರೆಗೆ, 4.5 ಕೋಟಿ ಎಕರೆ ಅರಣ್ಯವು ಈ ದೇಶದಲ್ಲಿ ಕಾಳ್ಗಿಚ್ಚಿನಿಂದಾಗಿ ಸುಟ್ಟು ಕರಕಲಾಗಿದೆ. ಕೆನಡಾದ ಒಟ್ಟು ಅರಣ್ಯದಲ್ಲಿ ಶೇ 5ರಷ್ಟು ಹೀಗೆ ಬೆಂಕಿಗೆ ತುತ್ತಾಯಿತು. ಇದರಿಂದ ಬಿಡುಗಡೆ ಆದ ಇಂಗಾಲವು 40 ಕೋಟಿ ಟನ್‌ಗೂ ಹೆಚ್ಚು ಎಂದು ಲೆಕ್ಕಹಾಕಲಾಗಿದೆ. ಈ ಹಿಂದೆ 2014ರಲ್ಲಿ ಈ ದೇಶದಲ್ಲಿ ಕಾಳ್ಗಿಚ್ಚಿನ ಬೆಂಕಿಯಿಂದ 13.8 ಟನ್ ಇಂಗಾಲ ಬಿಡುಗಡೆ ಆಗಿತ್ತು. ಈವರೆಗಿನ ಗರಿಷ್ಠ ಮೊತ್ತ ಇದೇ ಆಗಿತ್ತು.

ಹವಾಮಾನ ಬದಲಾವಣೆಯೇ ಪೂರ್ವ ಕೆನಡಾದಲ್ಲಿ ಕಾಳ್ಗಿಚ್ಚಿಗೆ ಕಾರಣ ಎಂದು ವಿಜ್ಞಾನಿಗಳು ಹೇಳಿದ್ದಾರೆ. ಮೇಯಿಂದ ಜುಲೈ ನಡುವಲ್ಲಿ ಸಾಮಾನ್ಯಕ್ಕಿಂತ ಎರಡು ಪಟ್ಟಿಗೂ ಹೆಚ್ಚು ಕಾಳ್ಗಿಚ್ಚು ಉಂಟಾಗಿದೆ. ಇತರ ಪ್ರದೇಶಗಳು ಕೂಡ ಇಂತಹುದೇ ಸ್ಥಿತಿಯನ್ನು ಎದುರಿಸಿವೆ. ವರ್ಷವಿಡೀ ಅನುಭವಕ್ಕೆ ಬಂದ ಅತಿಯಾದ ತಾಪಮಾನವು ಇನ್ನೂ ಮುಂದುವರಿದಿದೆ ಮತ್ತು ಬಿಸಿ ಕಡಿಮೆಯಾಗುವ ಯಾವುದೇ ಲಕ್ಷಣ ಕಾಣಿಸುತ್ತಿಲ್ಲ. ಈ ವರ್ಷದ ನವೆಂಬರ್ ತಿಂಗಳು ಗರಿಷ್ಠ ತಾಪಮಾನವನ್ನು ದಾಖಲಿಸುವುದರ ಜೊತೆಗೆ, ಭೂ ಮೇಲ್ಮೈಯ ಅತಿ ಹೆಚ್ಚು ತಾಪಮಾನದ ದಿನಗಳು ಎಂದು ನವೆಂಬರ್ 17 ಮತ್ತು 18 ದಾಖಲೆ ಸೇರಿವೆ. ಕೈಗಾರಿಕಾ ಕ್ರಾಂತಿಯ ಹಿಂದಿನ ದಿನಗಳಿಗೆ ಹೋಲಿಸಿದರೆ ಈ ಎರಡೂ ದಿನಗಳ ತಾಪಮಾನದಲ್ಲಿ ಕ್ರಮವಾಗಿ 2.07 ಡಿಗ್ರಿ ಸೆಲ್ಸಿಯಸ್ ಮತ್ತು 2.06 ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿಕೆ ಕಂಡಿತ್ತು.

ಕೈಗಾರಿಕಾ ಕ್ರಾಂತಿಯ ದಿನಗಳೇ ಮಾನದಂಡ

ತಾಪಮಾನಕ್ಕೆ ಸಂಬಂಧಿಸಿ ಸಂಗ್ರಹಿಸಲಾದ ಈ ವರ್ಷದ ಅಕ್ಟೋಬರ್‌ವರೆಗಿನ ದತ್ತಾಂಶ ಪ್ರಕಾರ, ಕೈಗಾರಿಕಾ ಕ್ರಾಂತಿಯ ದಿನಗಳಿಗೆ ಹೋಲಿಸಿದರೆ ಭೂಮಿಯ ತಾಪವು 1.4 ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿಕೆ ಕಂಡಿದೆ. ಇದು ಈವರೆಗಿನ ಗರಿಷ್ಠ ಏರಿಕೆ ಅನ್ನಿಸಿಕೊಂಡಿದೆ. ಕೊನೆಯ ಎರಡು ತಿಂಗಳ ದತ್ತಾಂಶವನ್ನು ಪಡೆದುಕೊಂಡ ಬಳಿಕ ಫಲಿತಾಂಶದಲ್ಲಿ ಬದಲಾವಣೆ ಉಂಟಾಗುವ ಸಾಧ್ಯತೆ ಇಲ್ಲ. ಕೈಗಾರಿಕಾ ಕ್ರಾಂತಿಯ ಅವಧಿಯನ್ನೇ (1850–1900) ಹವಾಮಾನ ಬದಲಾವಣೆಯನ್ನು ಅಳೆಯುವ ಮಾನದಂಡವಾಗಿ ಇರಿಸಿಕೊಳ್ಳಲಾಗಿದೆ. ಕೈಗಾರಿಕಾ ಕ್ರಾಂತಿಯ ಬಳಿಕವೇ ಪಳೆಯುಳಿಕೆ ಇಂಧನವನ್ನು ವ್ಯಾಪಕವಾಗಿ ಬಳಸಲು ಆರಂಭಿಸಲಾಯಿತು. ಇದು ತಾಪಮಾನ ಹೆಚ್ಚಳಕ್ಕೆ ಮೂಲ ಕಾರಣವಾಗಿದೆ. ಹಾಗಾಗಿಯೇ ಪಳೆಯುಳಿಕೆ ಇಂಧನ ಕಡಿಮೆ ಬಳಕೆಯ ದಿನಗಳು ಹವಾಮಾನ ಬದಲಾವಣೆಯ ಮಾನದಂಡವಾಗಿವೆ.

ಆಧಾರ: ರಾಯಿಟರ್ಸ್, ವಿಶ್ವ ಹವಾಮಾನ ಸಂಸ್ಥೆ ವರದಿ, 'ಕೋಪರ್ನಿಕಸ್ ಕ್ಲೈಮೆಟ್ ಚೇಂಜ್ ಸರ್ವೀಸ್'ನ ವರದಿಗಳು

ಮರಳಲು ಆಗದು

ಹಸಿರುಮನೆ ಅನಿಲ ಹೊರಸೂಸುವಿಕೆ ಗರಿಷ್ಠ ಪ್ರಮಾಣದಲ್ಲಿದೆ. ಜಾಗತಿಕ ತಾಪಮಾನ ದಾಖಲೆ ಮಟ್ಟದಲ್ಲಿದೆ. ಸಮುದ್ರ ಮಟ್ಟ ಏರಿಕೆಯು ಗರಿಷ್ಠ ಪ್ರಮಾಣದಲ್ಲಿದೆ. ಅಂಟಾರ್ಕ್ಟಿಕ್ ಸಮುದ್ರದ ಮಂಜುಗಡ್ಡೆಯು ಕನಿಷ್ಠ ಮಟ್ಟದಲ್ಲಿದೆ. ದಾಖಲೆಗಳ ಮುರಿಯುವಿಕೆಯ ಕರ್ಕಶ ಸದ್ದು ಕಿವಿಗಡಚಿಕ್ಕುವಂತಿದೆ. 20ನೇ ಶತಮಾನದ ಹವಾಮಾನಕ್ಕೆ ನಾವು ಮರಳುವುದು ಅಸಾಧ್ಯ. ಆದರೆ ಮುಂದಿನ ಶತಮಾನಗಳಲ್ಲಿ ಈ ಭೂಮಿಯಲ್ಲಿ ಬದುಕಲು ಅಸಾಧ್ಯ ಎಂಬ ಸ್ಥಿತಿಯನ್ನು ತಡೆಯಲು ಶ್ರಮಿಸಬೇಕು



ಪ್ರೊ. ಪೆಟ್ಟೆರಿ ಟಾಲಸ್
ವಿಶ್ವ ಹವಾಮಾನ ಸಂಘಟನೆಯ ಪ್ರಧಾನ ಕಾರ್ಯದರ್ಶಿ

ಅತಿ ಮಳೆ, ಅತಿ ಬರ

ಚಂಡಮಾರುತಗಳು, ಪ್ರವಾಹ, ಅತಿ ತಾಪಮಾನ, ಅತಿಯಾದ ಬರ ಹಾಗೂ ಕಾಳ್ಗಿಚ್ಚುಗಳು– ಇವು ವಿಪರೀತ ಹವಾಮಾನ ವೈಪರೀತ್ಯದ ಲಕ್ಷಣಗಳು. ಡೇನಿಯಲ್ ಚಂಡಮಾರುತವು ಗ್ರೀಸ್, ಬಲ್ಗೇರಿಯಾ, ಟರ್ಕಿ ಹಾಗೂ ಲಿಬಿಯಾವನ್ನು ಪ್ರಭಾವಿಸಿತು. ಇಲ್ಲೆಲ್ಲಾ ಅತಿಯಾದ ಪ್ರವಾಹ ಉಂಟಾಗಿತ್ತು. ಸೆಪ್ಟೆಂಬರ್‌ನಲ್ಲಿ ಲಿಬಿಯಾದಲ್ಲಿ ಇದರ ಪರಿಣಾಮ ತುಸು ಹೆಚ್ಚೇ ಆಗಿತ್ತು.

ಫೆಬ್ರುವರಿ ಹಾಗೂ ಮಾರ್ಚ್‌ನಲ್ಲಿ ಬಂದ ಫ್ರೆಡಿ ಚಂಡಮಾರುತವು ಹೆಚ್ಚು ದಿನಗಳವರೆಗೆ ಇದ್ದ ಚಂಡಮಾರುತವಾಗಿತ್ತು. ಬಂಗಾಳಕೊಲ್ಲಿಯಲ್ಲಿ ಮೇ ತಿಂಗಳಿನಲ್ಲಿ ಎದ್ದಿದ್ದ ಮೋಚಾ ಚಂಡಮಾರುತವು ಭಾರತ ಹಾಗೂ ಬಾಂಗ್ಲಾದೇಶದಲ್ಲಿ ಹಾನಿಯುಂಟು ಮಾಡಿತು.

ಯುರೋಪ್, ಉತ್ತರ ಆಫ್ರಿಕಾದಲ್ಲಿ ಅತಿಯಾದ ಉಷ್ಣಾಂಶವು ಪರಿಣಾಮ ಬೀರಿತ್ತು. ಅದರಲ್ಲಿಯೂ ಜುಲೈನ ದ್ವಿತೀಯಾರ್ಧದಲ್ಲಿ ತೀವ್ರವಾದ ತಾಪಮಾನ ದಾಖಲಾಗಿತ್ತು. ಮೊರಕ್ಕೊದ ಅಗಧೀರದಲ್ಲಿ 50 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. ಹವಾಯಿಯಲ್ಲಿ ಇದೇ ವರ್ಷ ಎದ್ದಿದ್ದ ಕಾಳ್ಗಿಚ್ಚಿನ ಪರಿಣಾಮ 99 ಮಂದಿ ಮೃತಪಟ್ಟರು.

ಅಮೆಜಾನ್ ಕಾಡಿನಲ್ಲಿ ಬರ ಬಡಿದಿದೆ. ಆಫ್ರಿಕಾದ ಗ್ರೇಟರ್ ಹಾರ್ನ್ ಪ್ರದೇಶದಲ್ಲಿ ಐದು ವರ್ಷದಿಂದ ಬರ ತಲೆದೋರಿತ್ತು. ಆದರೆ, ಈ ವರ್ಷ ಆ ಪ್ರದೇಶದಲ್ಲಿ ಪ್ರವಾಹ ಉಂಟಾಯಿತು. ಹಲವು ಮಂದಿ ಸ್ಥಳಾಂತರಗೊಂಡರು. ಅತಿಯಾದ ಬರದ ಕಾರಣ, ನೀರನ್ನು ಹಿಡಿದುಕೊಳ್ಳುವ ಶಕ್ತಿಯನ್ನು ಮಣ್ಣು ಕಳೆದುಕೊಂಡಿತ್ತು. ಇದೇ ಕಾರಣಕ್ಕೆ ದೊಡ್ಡ ಮಟ್ಟದ ಪ್ರವಾಹ ಉಂಟಾಯಿತು.

ಗರಿಷ್ಠ ತಾಪಮಾನ ಕೆಲವು ಲಕ್ಷಣ

ತಿಂಗಳಿನಿಂದ ತಿಂಗಳಿಗೆ ಹೊಸ ಹೊಸ ದಾಖಲೆಗಳನ್ನು ಬರೆಯುತ್ತಾ, 2023ನೇ ವರ್ಷವು ಇತಿಹಾಸದಲ್ಲಿಯೇ ಅತಿ ಹೆಚ್ಚು ತಾಪಮಾನ ದಾಖಲಾದ ವರ್ಷವಾಗಿದೆ. ತಾಪಮಾನ ಏರಿಕೆಯಾದ ಕಾರಣ ಜಗತ್ತು ಹಲವು ವಿಧದಲ್ಲಿ ಹಲವು ಮೊದಲುಗಳನ್ನು ದಾಖಲಿಸಿದೆ. ಹೆಚ್ಚುತ್ತಿರುವ ಕಾಳ್ಗಿಚ್ಚು, ಹಿಮಕರಗುವಿಕೆ, ಸಮುದ್ರದ ಮೇಲ್ಮೈ ತಾಪಮಾನದಲ್ಲಿ ಏರಿಕೆ... ಹೀಗೆ ಹಲವು ವಿಧಗಳಲ್ಲಿ ಜಗತ್ತು ಸಂಕಷ್ಟ ಎದುರಿಸಿತು. ಈ ಬಗ್ಗೆ ವಿಶ್ವ ಹವಾಮಾನ ಸಂಘಟನೆಯು ಪಟ್ಟಿ ಮಾಡಿದೆ. ಈ ಸಂಘಟನೆಯು ತನ್ನ ಪೂರ್ಣ ಪ್ರಮಾಣದ ವರದಿಯನ್ನು 2024ರ ಮೊದಲಾರ್ಧದ ಹೊತ್ತಿಗೆ ಬಿಡುಗಡೆ ಮಾಡಲಿದೆ. ಆದರೆ, ದುಬೈನಲ್ಲಿ ನಡೆದ 'ಹವಾಮಾನ ಶೃಂಗಸಭೆ'ಯ ಕಾರಣಕ್ಕಾಗಿ ತನ್ನ ವರದಿಯ ಸಾರಾಂಶವನ್ನು ಮಾತ್ರ ಇದೇ ವರ್ಷವೇ ಬಿಡುಗಡೆ ಮಾಡಿದೆ.

ಹಸಿರುಮನೆ ಅನಿಲ: ಇಂಗಾಲದ ಆಕ್ಸೈಡ್, ಮೀಥೇನ್ ಹಾಗೂ ನೈಟ್ರಸ್ ಆಕ್ಸೈಡ್– ಈ ಮೂರು ಅನಿಲಗಳು, ವಾತಾವರಣವನ್ನು ಸೇರುತ್ತಿರುವ ಪ್ರಮಾಣವು ಹೆಚ್ಚಾಗಿದೆ. 2022ಕ್ಕೆ ಹೋಲಿಸಿಕೊಂಡರೆ 2023ರಲ್ಲಿ ಈ ಮೂರು ಅನಿಲಗಳ ಸೋರಿಕೆಯು ಏರುತ್ತಲೇ ಇದೆ.

ಸಮುದ್ರದ ಮೇಲ್ಮೈ ತಾಪಮಾನ ಏರಿಕೆ: ಉತ್ತರ ಅಟ್ಲಾಂಟಿಕ್‌ನ ಪೂರ್ವ ಭಾಗ, ಮೆಕ್ಸಿಕೊ ಕೊಲ್ಲಿ, ಕೆರೀಬಿಯನ್ ಸಮುದ್ರ ಜೊತೆಗೆ ಅಂಟಾರ್ಕ್ಟಿಕ್ ಸಮುದ್ರದ ಬಹು ದೊಡ್ಡ ಪ್ರದೇಶವು ಅತಿಯಾದ ತಾಪಮಾನಕ್ಕೆ ಗುರಿಯಾಗಿತ್ತು. ಈ ಸಮುದ್ರಗಳಲ್ಲಿ ದೊಡ್ಡ ಮಟ್ಟದ ಬಿಸಿ ಗಾಳಿಯೂ ಎದ್ದಿತ್ತು. ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ತಾಪಮಾನ ಹೆಚ್ಚಿತ್ತು. ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ಮಧ್ಯದಲ್ಲಿ 0.21 ಡಿಗ್ರಿ ಸೆಲ್ಸಿಯಸ್‌ನಿಂದ 0.27 ಡಿಗ್ರಿ ಸೆಲ್ಸಿಯಸ್‌ವರೆಗೂ ತಾಪಮಾನ ದಾಖಲಾಗಿತ್ತು.

ಏರಿಕೆ ಕಂಡ ಸಮುದ್ರದ ಶಾಖ: ಕಳೆದ ಎರಡು ದಶಕಗಳಿಗೆ ಹೋಲಿಸಿಕೊಂಡರೆ, ಸಮುದ್ರದ ಶಾಖದಲ್ಲಿ ಏರಿಕೆ ಕಂಡಿದೆ. 2022ರಲ್ಲಿಯೇ ಈ ಪ್ರಮಾಣ ಹೆಚ್ಚಿತ್ತು. 2023ರ ಹೊತ್ತಿಗೆ ಇದು ಇನ್ನಷ್ಟು ಏರಿಕೆಯಾಗಿದೆ. ಸಮುದ್ರದ ಶಾಖದ ಪ್ರಮಾಣವನ್ನು ಕಳೆದ 65 ವರ್ಷಗಳಿಂದ ಅಳೆಯಲಾಗುತ್ತಿದೆ. ಈ ವರ್ಷಗಳಲ್ಲೇ ಅತಿ ಹೆಚ್ಚಿನ ಶಾಖದ ಪ್ರಮಾಣವು 2023ರಲ್ಲಿ ದಾಖಲಾಗಿದೆ.

ಸಮುದ್ರ ಮಟ್ಟದಲ್ಲಿ ಏರಿಕೆ: 1993ರಿಂದ ಉಪಗ್ರಹದ ಮೂಲಕ ಸಮುದ್ರ ಮಟ್ಟವನ್ನು ಅಳತೆ ಮಾಡಲಾಗುತ್ತಿದೆ. ಅಲ್ಲಿಂದ ಇಲ್ಲಿಯವರೆಗೆ ಸಮುದ್ರ ಮಟ್ಟದ ಏರಿಕೆ ಪ್ರಮಾಣವನ್ನು ಹೋಲಿಸಿ ನೋಡಿದರೆ, 2023ರಲ್ಲಿ ಸಮುದ್ರ ಮಟ್ಟದಲ್ಲಿ ಹೆಚ್ಚಿನ ಪ್ರಮಾಣದ ಏರಿಕೆ ಕಂಡುಬಂದಿದೆ. ನೀರ್ಗಲ್ಲು ಹಾಗೂ ಹಿಮದ ಪದರಗಳ ನಿರಂತರ ಕರಗುವಿಕೆಯ ಕಾರಣದಿಂದ ಸಮುದ್ರ ಮಟ್ಟದಲ್ಲಿ ಏರಿಕೆಯಾಗಿದೆ.

ಕಡಿಮೆಯಾಗುತ್ತಿರುವ ಹಿಮಗಡ್ಡೆ ಪದರ: ಅಂಟಾರ್ಕ್ಟಿಕ್ ಸಮುದ್ರದಲ್ಲಿನ ಹಿಮ ಪದರ ಇರುವ ಪ್ರದೇಶವು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಲೇ ಇದೆ. 1991–2020ರ ಸರಾಸರಿಗೆ ಹೋಲಿಸಿದರೆ, ಅಂಟಾರ್ಕ್ಟಿಕ್ ಸಮುದ್ರದಲ್ಲಿನ ಹಿಮ ಪದರ ಪ್ರದೇಶವು 2023ರ ಸೆಪ್ಟೆಂಬರ್‌ನಲ್ಲಿ 15 ಲಕ್ಷ ಚದರ ಕಿ.ಮೀನಷ್ಟು ಕಡಿಮೆಯಾಗಿತ್ತು. 1986ರಲ್ಲಿ ಈ ಪದರದ ಪ್ರದೇಶವು ಆವರೆಗಿನ ಕನಿಷ್ಠ ಮಟ್ಟದಲ್ಲಿತ್ತು. ಈ ವರ್ಷಕ್ಕೆ ಹೋಲಿಸಿಕೊಂಡರೆ, ಈ ಪದರದ ಪ್ರದೇಶವು 2023ರ ಹೊತ್ತಿಗೆ 12 ಲಕ್ಷ ಚದರ ಕಿ.ಮೀನಷ್ಟು ಕಡಿಮೆಯಾಗಿದೆ.

ಆರ್ಕ್ಟಿಕ್ ಸಮುದ್ರದ ಹಿಮ ಪದರ ಪ್ರದೇಶವು ಸಾಮಾನ್ಯಕ್ಕಿಂತ ಕಡಿಮೆಯೇ ಇದೆ. ಉತ್ತರ ಅಮೆರಿಕದ ಪೂರ್ವ ಭಾಗ ಹಾಗೂ ಯುರೋಪಿನ ಪರ್ವತಗಳಲ್ಲಿನ (ಆಲ್ಪ್ಸ್) ಹಿಮಗಳೂ ದೊಡ್ಡ ಪ್ರಮಾಣದಲ್ಲಿ ಕರಗಿವೆ. ಸ್ವಿಟ್ಜರ್ಲೆಂಡ್‌ನಲ್ಲಿರುವ ನೀರ್ಗಲ್ಲುಗಳಲ್ಲಿ ಶೇ 10ರಷ್ಟು 20 ವರ್ಷಗಳಲ್ಲಿ ಕರಗಿವೆ.

ಸಿನಿ ಬಿಟ್ಸ್

ಹಲವು ಅವತಾರಗಳಲ್ಲಿ ದರ್ಶನ!



ದರ್ಶನ್, ಆರಾಧನಾ

ತರುಣ್ ಸುಧೀರ್ ನಿರ್ದೇಶಿಸಿ, ದರ್ಶನ್ ಅಭಿನಯಿಸಿರುವ 'ಕಾಟೇರ' ಚಿತ್ರದ ಟ್ರೇಲರ್ ಬಿಡುಗಡೆಗೊಂಡಿದೆ. ಮಾಸ್, ಆ್ಯಕ್ಷನ್ ಭರಿತ ಟ್ರೇಲರ್‌ನಲ್ಲಿ ಅಮಾಯಕ ಯುವಕನಾಗಿ, ಅನ್ಯಾಯದ ವಿರುದ್ಧ ಹೋರಾಡುವವನಾಗಿ, ರೈತರಿಗೆ ಸ್ಫೂರ್ತಿ ತುಂಬುವ ವ್ಯಕ್ತಿಯಾಗಿ ಹಲವು ಶೇಡ್‌ಗಳಲ್ಲಿ ದರ್ಶನ್ ಕಾಣಿಸಿಕೊಂಡಿದ್ದಾರೆ.

'ಈ ಚಿತ್ರ ಇಂದಿರಾ ಗಾಂಧಿ ಕಾಲದ ಕಥೆ. 1974ರಲ್ಲಿ ಉಳುವವನೆ ಭೂಮಿಯ ಒಡೆಯ ಕಾನೂನು ಬಂದಾಗ ನಡೆದಿರುವ ಘಟನೆಯನ್ನು ಆಧರಿಸಿದೆ. ಆಗ ಬಾವಿಯೊಂದರಲ್ಲಿ ತುಂಬಾ ಜನರ ಮೂಳೆಗಳು ಸಿಕ್ಕಿದ್ದವು. ಆ ಮೂಳೆಗಳು ಯಾರವು ಎಂದು ಯಾರಿಗೂ ಗೊತ್ತಿಲ್ಲ. ಆ ಘಟನೆ ಕುರಿತು ಈ ಸಿನಿಮಾದಲ್ಲಿ ಹೇಳಲು ಹೊರಟಿದ್ದೇವೆ' ಎಂದಿದ್ದಾರೆ ದರ್ಶನ್.

ಹುಬ್ಬಳ್ಳಿಯಲ್ಲಿ ಅದ್ದೂರಿಯಾಗಿ ನಡೆದ ಸಮಾರಂಭದಲ್ಲಿ ಸಿಎಂ ಸಿದ್ದರಾಮಯ್ಯ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ರಾಕ್‌ಲೈನ್ ವೆಂಕಟೇಶ್ ನಿರ್ಮಾಣದ ಈ ಚಿತ್ರ ಡಿ.29ರಂದು ತೆರೆ ಕಾಣುತ್ತಿದೆ. ಮಾಲಾಶ್ರೀ ಪುತ್ರಿ ಆರಾಧನಾ ದರ್ಶನ್‌ಗೆ ಜೋಡಿಯಾಗಿದ್ದಾರೆ. ಕುಮಾರ್ ಗೋವಿಂದ್, ಶ್ರುತಿ, ಜಗಪತಿ ಬಾಬು ಸೇರಿದಂತೆ ಹಲವು ನಟರು ಚಿತ್ರದಲ್ಲಿದ್ದಾರೆ.

'ಬಘೀರ'ನಿಗೆ ಟೀಸರ್ ಉಡುಗೊರೆ



ನಟ ಶ್ರೀಮುರಳಿ ಜನ್ಮದಿನದ ಪ್ರಯುಕ್ತ 'ಬಘೀರ' ಚಿತ್ರತಂಡ ಟೀಸರ್ ಬಿಡುಗಡೆ ಮಾಡಿದೆ. ಮಾತಿಲ್ಲದೆ, ಬರೀ ಆ್ಯಕ್ಷನ್ ದೃಶ್ಯಗಳಿಂದಲೇ ಕೂಡಿರುವ ಈ ಟೀಸರ್ ಮುರಳಿ ಬತ್ತಳಿಕೆಯಿಂದ ಮತ್ತೊಂದು ಮಾಸ್ ಚಿತ್ರದ ಮುನ್ಸೂಚನೆ ನೀಡಿದೆ. ಸಮಾಜದಲ್ಲಿನ ದುಷ್ಟಶಕ್ತಿಯನ್ನು ಮಟ್ಟಹಾಕಲು ಮುಖವಾಡ ಧರಿಸಿರುವ ಶ್ರೀಮುರಳಿ ವಿಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

'ಬಘೀರ'ನಿಗೆ ಪ್ರಶಾಂತ್ ನೀಲ್ ಕಥೆ ಬರೆದಿದ್ದು, ಸೂರಿ ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸುತ್ತಿದ್ದಾರೆ. ಹೊಂಬಾಳೆ ಫಿಲ್ಮ್ಸ್ ಈ ಚಿತ್ರವನ್ನು ನಿರ್ಮಿಸುತ್ತಿದೆ. 'ಉಗ್ರಂ' ಬಳಿಕ ಪ್ರಶಾಂತ್ ನೀಲ್– ಶ್ರೀಮುರಳಿ ಜೋಡಿಯ ಬಹುನಿರೀಕ್ಷಿತ ಚಿತ್ರ ಇದಾಗಿದೆ.

'ಕೆಜಿಎಫ್: ಚಾಪ್ಟರ್ 2', 'ಸಲಾರ್' ರೀತಿಯೇ ಈ ಸಿನಿಮಾ ಕೂಡ ಕಗ್ಗತ್ತಲಿನಿಂದ ಕೂಡಿದೆ ಎಂಬುದಕ್ಕೆ ಸಾಕ್ಷಿಯಂತಿದೆ ಚಿತ್ರದ ಟೀಸರ್. ಮೂರು ವರ್ಷಗಳ ಹಿಂದೆ ಘೋಷಣೆಯಾದ ಈ ಚಿತ್ರದ ಚಿತ್ರೀಕರಣ ಅಂತಿಮ ಹಂತದಲ್ಲಿದ್ದು, ಎ.ಜೆ. ಶೆಟ್ಟಿ ಛಾಯಾಗ್ರಹಣ, ಅಜನೀಶ್ ಲೋಕನಾಥ್ ಸಂಗೀತ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಭಾರತ ವಿದ್ಯಾರ್ಥಿ ಒಕ್ಕೂಟ (ಎಸ್‌ಎಫ್‌ಐ) ಮೈಸೂರು ಘಟಕವು ಆಯೋಜಿಸಿದ್ದ 'ಮೈಸೂರು ನಗರ ಸಮ್ಮೇಳನ' ಕಾರ್ಯಕ್ರಮದ ಫೋಟೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. ಈ ಫೋಟೊದಲ್ಲಿ ವ್ಯಕ್ತಿಯೊಬ್ಬರ ಮುಖದ ಸುತ್ತಲು ಕೆಂಪು ಬಣ್ಣದ ರೇಖೆಯಿಂದ ವೃತ್ತಾಕಾರದಲ್ಲಿ ಗುರುತಿಸಲಾಗಿದೆ ಮತ್ತು ಈ ವ್ಯಕ್ತಿಯನ್ನು ಮನೋರಂಜನ್ ಎಂದು ಫೋಟೊ ಜೊತೆಗಿನ ಪೋಸ್ಟ್‌ಗಳಲ್ಲಿ ಹೇಳಲಾಗುತ್ತಿದೆ. ಮನೋರಂಜನ್ ಮತ್ತು ಇತರ ಕೆಲವರು ಸಂಸತ್ತಿನ ಒಳನುಗ್ಗಿ ಸ್ಮೋಕ್ ಟಿನ್ ಅನ್ನು ಲೋಕಸಭೆ ಒಳಗೆ ಇತ್ತೀಚೆಗಷ್ಟೆ ಬಿಸಾಡಿದ್ದರು. ಮನೋರಂಜನ್ ಅವರು ಎಸ್‌ಎಫ್‌ಐ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ ಎಂದು ಆರೋಪಿಸಿ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.



ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿರುವ ಫೋಟೊದಲ್ಲಿ ಇರುವವರು ಎಸ್‌ಎಫ್‌ಐ, ಮೈಸೂರಿನ ಜಿಲ್ಲಾ ಅಧ್ಯಕ್ಷ ವಿಜಯ್ ಕುಮಾರ್. ಇವರನ್ನೇ ತಪ್ಪಾಗಿ ಮನೋರಂಜನ್ ಎಂದು ಹೇಳಲಾಗುತ್ತಿದೆ. ಈ ಬಗ್ಗೆ ಮೈಸೂರಿನ ಎಸ್‌ಎಫ್‌ಐ ಹಾಗೂ ಸ್ವತಃ ವಿಜಯ್ ಕುಮಾರ್ ಅವರು ಸ್ಪಷ್ಟನೆ ನೀಡಿದ್ದಾರೆ. ಸುಳ್ಳು ಸುದ್ದಿ ಹಬ್ಬಿಸುತ್ತಿರುವವರ ಕುರಿತು ವಿಜಯ್ ಅವರು ಪೊಲೀಸರಿಗೂ ದೂರು ನೀಡಿದ್ದಾರೆ. ಆದ್ದರಿಂದ, ಹಂಚಿಕೆಯಾಗುತ್ತಿರುವ ಫೋಟೊದಲ್ಲಿ ಇರುವವರು ಮನೋರಂಜನ್ ಅಲ್ಲ ಎಂದು 'ದಿ ಕ್ವಿಂಟ್' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನುಡಿ ಬೆಳಗು

ಮೂಗು ತೂರಿಸುವ ಮುನ್ನ ಎಚ್ಚರವಿರಲಿ



ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಒಂದು ತತ್ತ್ವಜ್ಞಾನಿ ಕಪ್ಪೆ ಇತ್ತು. ಅದಕ್ಕೆ ತನ್ನ ತತ್ತ್ವ, ಸಿದ್ಧಾಂತದ ನೆಲೆಯಲ್ಲಿ ಬೇರೆಯವರ ಬದುಕನ್ನು ವಿಶ್ಲೇಷಿಸುವ ಹವ್ಯಾಸ. ತನ್ನ ಅನುಮಾನ, ಪ್ರಶ್ನೆಗಳನ್ನು ಬೇರೆಯವರ ತಲೆಯೊಳಗೆ ತೂರಿ ಬಿಟ್ಟು ತಾನು ತಣ್ಣಗೆ ಕೂರುತ್ತಿತ್ತು. ದಿನವೂ ಅದರ ಗೂಡಿನ ಎದುರಿನಲ್ಲಿ ಶತಪದಿಯೊಂದು ಹಾದು ಹೋಗುತ್ತಿತ್ತು. ತನ್ನ ನೂರು ಕಾಲುಗಳಿಂದ ಶತಪದಿ ಚಲಿಸುವುದನ್ನು ದಿನವೂ ನೋಡುತ್ತಿದ್ದ ಕಪ್ಪೆಗೆ ಒಂದು ಪ್ರಶ್ನೆ ಕೊರೆಯ ತೊಡಗಿತು. ಈ ಶತಪದಿ ನಡೆಯುವಾಗ ತನ್ನ ನೂರು ಕಾಲುಗಳಲ್ಲಿ ಯಾವ ಕಾಲನ್ನು ಮೊದಲು ಮುಂದೆ ಇಡುತ್ತದೆ ಎಂಬುದೇ ಕಪ್ಪೆಯ ತಲೆ ಹೊಕ್ಕಿದ್ದ ಪ್ರಶ್ನೆ.

ಇದಕ್ಕೆ ಉತ್ತರ ಸಿಗದ ಕಪ್ಪೆ ಒಂದು ದಿನ ಶತಪದಿಯನ್ನು ತಡೆದು ನಿಲ್ಲಿಸಿ, ಕೇಳಿಯೇ ಬಿಟ್ಟಿತು. 'ಅಣ್ಣಾ ನಾನು ನಿನ್ನನ್ನು ದಿನವೂ ಗಮನಿಸುತ್ತೇನೆ. ನೂರು ಕಾಲುಗಳನ್ನು ಹೊಂದಿರುವ ನಿನಗೆ ನನ್ನ ವಿಶೇಷ ಅಭಿನಂದನೆಗಳು. ಆದರೆ ನನ್ನ ತಲೆಯಲ್ಲಿ ಈ ಬಗ್ಗೆ ಪ್ರಶ್ನೆಯೊಂದು ಕೊರೆಯುತ್ತಿದೆ. ನೀನು ನಡೆಯುವಾಗ ನಿನ್ನ ನೂರು ಕಾಲುಗಳಲ್ಲಿ ಯಾವ ಕಾಲನ್ನು ಮೊದಲಿಗೆ ಇಡುತ್ತೀ?'

ಈ ಪ್ರಶ್ನೆಯನ್ನು ಆಲಿಸಿದ ಶತಪದಿ ಕಕ್ಕಾಬಿಕ್ಕಿಯಾಯಿತು. ಅದು ಈವರೆಗೂ ತನ್ನ ಚಲನೆಯ ಬಗ್ಗೆ ಯೋಚಿಸಿಯೇ ಇರಲಿಲ್ಲ. ತನ್ನ ಪಾಡಿಗೆ ತಾನು ನೂರು ಕಾಲುಗಳಲ್ಲಿ ನಡೆದುಕೊಂಡಿತ್ತು. ಈಗ ಈ ಕಪ್ಪೆಯ ಮಾತನ್ನಾಲಿಸಿದ ನಂತರ, 'ಹೌದಲ್ಲ, ನಾನು ಯಾವ ಕಾಲು ಮೊದಲು ಇಟ್ಟು ನಡೆಯುತ್ತೇನೆ?' ಎಂಬ ಚಿಂತೆ ಅದನ್ನು ತೀವ್ರವಾಗಿ ಕಾಡಲಾರಂಭಿಸಿತು. ಎಷ್ಟರಮಟ್ಟಿಗೆ ಈ ಚಿಂತೆ ಶತಪದಿಯನ್ನು ಆವರಿಸಿಕೊಂಡು ಬಿಟ್ಟಿತು ಎಂದರೆ ಮುಂದಕ್ಕೆ ಅಡಿ ಇಡಲಾರದಷ್ಟು. ಈ ಚಿಂತೆಯ ತೀವ್ರತೆಯಲ್ಲಿ ಶತಪದಿ ಅಲ್ಲಿಯೇ ಕುಸಿದು ಬಿತ್ತು.

ಕೆಲವೊಮ್ಮೆ ನಮ್ಮ ನಡುವೆ ಇರುವ ಬುದ್ಧಿವಂತರು ಸಹ ಇದೇ ಕೆಲಸವನ್ನು ಮಾಡುತ್ತಿರುತ್ತಾರೆ. ಇನ್ನೊಬ್ಬರ ಕೆಲಸ ಕಾರ್ಯದಲ್ಲಿ ಮೂಗು ತೂರಿಸಿ, ತಮ್ಮ ಅಭಿಪ್ರಾಯವೇ ಸರಿ ಎಂಬ ಗುಂಗಿಹುಳುವನ್ನು ಅವರ ತಲೆಯಲ್ಲಿ ತೂರಿಬಿಡುತ್ತಾರೆ. ಮನೆ ಕಟ್ಟುವ ಸಂದರ್ಭ ಇರಬಹುದು, ಮಕ್ಕಳ ವಿದ್ಯಾಭ್ಯಾಸ ಇರಬಹುದು ಹೊಸತೊಂದು ಉದ್ಯೋಗಕ್ಕೆ, ಪ್ರಯತ್ನಕ್ಕೆ ಕೈ ಹಾಕುವ ವಿಚಾರವಿರಬಹುದು. ಇಂತಹ ಸಂದರ್ಭದಲ್ಲಿ ಒಬ್ಬೊಬ್ಬರದು ಒಂದೊಂದು ರೀತಿಯ ಅಗತ್ಯ, ಅವಶ್ಯಕತೆ ಹಾಗೂ ಸನ್ನಿವೇಶವಿರುತ್ತದೆ. ಆಗ ಸಲಹೆ ಸೂಚಿಸುವ ಭರದಲ್ಲಿ ವಿಭಿನ್ನ ರೀತಿಯ ಪ್ರಶ್ನೆ ಸಂದೇಹಗಳನ್ನು ಅವರ ತಲೆಯಲ್ಲಿ ತುರುಕಿದ್ದೇ ಆದರೆ ಮೊದಲೇ ಸಂದೇಹದಲ್ಲಿರುವ ವ್ಯಕ್ತಿ, ಇನ್ನಷ್ಟು ಗೊಂದಲಕ್ಕೆ ಒಳಗಾಗುವ ಸಾಧ್ಯತೆ ಇರುತ್ತದೆ.

ಇನ್ನು ಕೆಲವರ ಬದುಕು ಅವರ ನಂಬಿಕೆಯ ಮೇಲೆ ಅವಲಂಬಿತವಾಗಿರುತ್ತದೆ. ನಾವು ಇನ್ನೊಬ್ಬರ ನಂಬಿಕೆಗಳನ್ನು ನಮ್ಮ ತಲೆಯಲ್ಲಿರುವ ಸಂದೇಹ, ಪ್ರಶ್ನೆಗಳೊಂದಿಗೆ ಅಲ್ಲಾಡಿಸುವ ಕೆಲಸವನ್ನು ಎಂದೂ ಮಾಡಬಾರದು. ಹಾಗೆಯೇ ನಮ್ಮ ನಂಬಿಕೆಯೇ ಸರಿ ಅದನ್ನು ಬೇರೆಯವರೂ ಒಪ್ಪಲೇಬೇಕು ಎಂಬ ರೀತಿಯ ವರ್ತನೆಯೂ ಸಲ್ಲ. ಇದರಿಂದ ಇನ್ನೊಬ್ಬರ ಬದುಕು, ನಂಬಿಯೂ ನಂಬದಿರುವ ಇಬ್ಬಂದಿ ಸ್ಥಿತಿಯನ್ನು ತಲುಪುವ ಸಾಧ್ಯತೆ ಇರುತ್ತದೆ ಎಂಬುದನ್ನು ನಾವೆಂದಿಗೂ ಮರೆಯಬಾರದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಸೋಮವಾರ ಡಿಸೆಂಬರ್ 18, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಷಷ್ಠಿ ಗಂ. 15-15 ನಕ್ಷತ್ರ: ಶತಭಿಷ ಗಂ. 25-22 ಯೋಗ: ವಜ್ರ ಗಂ 21-32 ಕರಣ: ತೈತಿಲ ಗಂ. 15-15, ಧನು ಮಾಸದ 02ನೇ ದಿನ, ಮಳೆನಕ್ಷತ್ರ: ಮೂಲಾ 1.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-50 **ಸೂರ್ಯಾಸ್ತ :** 06-03
ಮುಸ್ಲಿಂ ದಿನಾಂಕ : 04 ಜುಮಾದುಸ್ಸಾನಿ
ದಿನ ವಿಶೇಷ : ಸುಬ್ರಹ್ಮಣ್ಯ ಷಷ್ಠಿ, ಅದೃಷ್ಟ ಸಂಖ್ಯೆ : 11, 6

ಮೇಷ: ಇಂದ್ರಿಯಗಳ ಚಾಂಚಲ್ಯತೆಯು ನಿಮ್ಮ ಏಕಾಗ್ರತೆಯನ್ನು ಭಂಗಗೊಳಿಸುವ ಜೊತೆಗೆ ನಿಮ್ಮ ಹಾದಿಯನ್ನು ತಪ್ಪಿಸುವ ಸಾಧ್ಯತೆಯೇ ಹೆಚ್ಚಿರುತ್ತದೆ. ತಪ್ಪು ನಿರ್ಧಾರ ತೆಗೆದುಕೊಳ್ಳುವಂತಾಗಬಹುದು.

ವೃಷಭ: ಸುತ್ತಮುತ್ತಲ ವಿದ್ಯಮಾನಗಳನ್ನು ಗಮನಿಸಿ ವೃತ್ತಿಪರ ಸಮಾಲೋಚನೆ ನಡೆಸಿ. ಇತರರೊಂದಿಗೆ ಇದ್ದ ವಿವಾದಗಳನ್ನು ರಾಜಿಯೊಂದಿಗೆ ಬಗೆಹರಿಸಿಕೊಳ್ಳುವಿರಿ. ವೃತ್ತಿಯಲ್ಲಿ ಹೊಸ ಪ್ರಯತ್ನಗಳು ಲಾಭವನ್ನು ತಂದು ಕೊಡುವವು.

ಮಿಥುನ: ನಿಮಗೆ ಒಳಿತಾಗುವ ನಿರ್ಧಾರ ತೆಗೆದುಕೊಳ್ಳುವಲ್ಲಿ ಯಾವುದೇ ರೀತಿಯ ಯೋಚನೆ ಬೇಡ. ಸಮಸ್ಯೆಗಳನ್ನು ನಾಜೂಕಾಗಿ ಬಗೆಹರಿಸಿಕೊಳ್ಳುವ ಪ್ರಯತ್ನ ನಡೆಸಿ. ಮಕ್ಕಳ ಆರೋಗ್ಯ ಉತ್ತಮ ಸ್ಥಿತಿಗೆ ಬರುತ್ತದೆ.

ಕರ್ಕಾಟಕ: ಕುಟುಂಬದಲ್ಲಿ ಭಿನ್ನಾಭಿಪ್ರಾಯ ತೋರಿಬಂದರೂ ತಾಳ್ಮೆಯನ್ನು ಕಳೆದುಕೊಳ್ಳಬೇಡಿ, ಸಮಾಧಾನ ಇರಲಿ. ದುಶ್ಚಟಗಳಿಂದ ಮುಕ್ತರಾಗುವ ಮನಸ್ಸಿನ ಮಾತು ಕೇಳಿ. ಕಾರ್ಮಿಕರ ಬೇಡಿಕೆ ಪೂರೈಸುವ ತೀರ್ಮಾನ ಮಾಡಿರಿ.

ಸಿಂಹ: ನಿಮ್ಮ ಅಧಿಕ ಶ್ರಮದಿಂದ ನಿಮ್ಮ ಕನಸಿನ ದೀರ್ಘಕಾಲಿಕ ಕಾರ್ಯಗಳು ಚಾಲನೆಗೊಂಡು ಸಂತಸ ವೃದ್ಧಿಯಾಗುವುದು. ಅಧಿಕವಾಗಿದ್ದ ರಕ್ತದೊತ್ತಡ ನಿಯಂತ್ರಣಕ್ಕೆ ಬಂದು ಮನಸ್ಸಿಗೆ ಸಮಾಧಾನ ಆಗುವುದು.

ಕನ್ಯಾ: ಕೋರ್ಟು, ಕಚೇರಿ ವ್ಯವಹಾರದಲ್ಲಿ ಜಯ ಪಡೆಯುವ ಬಗ್ಗೆ ಅಧಿಕವಾದ ಪ್ರಯತ್ನವಿರಲಿ. ಹಳೆಯ ವಾಹನದ ಕೊಡು ಕೊಳ್ಳುವಿಕೆಯಲ್ಲಿ ಲೆಕ್ಕ ಪತ್ರಗಳಲ್ಲಿ ಹೆಚ್ಚಿನ ಗಮನವಿರಲಿ. ಬಟ್ಟೆ ಉದ್ಯಮದವರಿಗೆ ಇಂದು ಲಾಭ ಬರುವುದು.

ತುಲಾ: ವಾಣಿಜ್ಯ ಬೆಳೆಗಳನ್ನು ದಾಸ್ತಾನು ಮಾಡಿಕೊಳ್ಳುವ ಯೋಚನೆ ಸರಿಯಾದದ್ದಾಗಿರುತ್ತದೆ. ಉದ್ಯೋಗ ವ್ಯವಹಾರಗಳಲ್ಲಿ ಯಾವುದೇ ತೊಂದರೆಗಳಿರುವುದಿಲ್ಲ.

ವೃಶ್ಚಿಕ: ಮಕ್ಕಳ ಓದಿಗೆ ಅಡ್ಡಿಯಾಗಿರುವ ಸಮಸ್ಯೆಗೆ ಪರಿಹಾರ ಸಿಕ್ಕಿ ಮನಸ್ಸಿನಲ್ಲಿ ನೆಮ್ಮದಿ ಮೂಡುತ್ತದೆ. ಸಿನೆಮಾ ನಟ ನಟಿಯರಿಗೆ ಹೆಚ್ಚಿನ ಅವಕಾಶ ದೊರೆಯಲಿವೆ. ಪಾಲುದಾರಿಕೆ ವ್ಯವಹಾರದಲ್ಲಿ ಸ್ನೇಹಿತನಿಂದ ಪ್ರಗತಿ ಉಂಟಾಗುವುದು.

ಧನು: ಸಾರ್ವಜನಿಕರಲ್ಲಿ ಹೆಚ್ಚಾಗಿ ಬೆರೆಯುವ ಸಂದರ್ಭ ಬರುವುದರಿಂದ ಆರೋಗ್ಯದಲ್ಲಿ ವಿಶೇಷ ಗಮನವಹಿಸಿ. ಲೇವಾದೇವಿ ವ್ಯವಹಾರ ನಡೆಸುವವರು ವ್ಯವಹಾರದಲ್ಲಿ ಸ್ವಲ್ಪ ಪ್ರಮಾಣದ ನಷ್ಟ ಸಂಭವಿಸಿ ಹಿನ್ನಡೆಯನ್ನು ಕಾಣಲಿದೆ.

ಮಕರ: ಆಡಳಿತಾರೂಢ ಜನರ ಸಂಪರ್ಕದಿಂದ ಕೆಲಸಗಳನ್ನು ಸಾಧಿಸಿಕೊಳ್ಳಲು ಬಹಳವಾಗಿ ಕಷ್ಟವೆನಿಸುವುದು. ಬಲು ಅಪರೂಪದ ಹಾಗು ನಿಮ್ಮ ಕೈಗತವಾದ ವಿದ್ಯೆಯು ನಿಮಗೆ ಅಧಿಕ ಲಾಭವನ್ನು ತಂದುಕೊಡುವುದು.


ಕುಂಭ: ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮುಂದಾಳತ್ವ ವಹಿಸಿ ಧನ್ಯತೆಯ ಮನೋಭಾವ ನಿಮ್ಮದಾಗುವುದು. ಆಪ್ತರು ಎಂದು ನೀವು ತಿಳಿದ ವ್ಯಕ್ತಿಗಳು ನಿಮ್ಮ ಆಪತ್ತಿನ ಕಾಲಕ್ಕೆ ಸಹಾಯವನ್ನು ಮಾಡದೇ ಇರಬಹುದು.

ಮೀನ: ತಾಂತ್ರಿಕ ವಿದ್ಯೆಯನ್ನು ವ್ಯಾಸಂಗ ಮಾಡುವವರಿಗೆ ಉತ್ತಮ ಫಲಿತಾಂಶ ಲಭಿಸುವುದು. ಮಗನ ಉದ್ಯೋಗದಲ್ಲಿನ ಪ್ರಗತಿಯಿಂದ ಸಂತೋಷವಾಗುತ್ತದೆ. ನಿಮ್ಮ ಸ್ವಂತ ವ್ಯವಹಾರಗಳಲ್ಲಿ ನಿರೀಕ್ಷಿತ ಯಶಸ್ಸನ್ನು ಕಾಣುವಿರಿ.

ಪದಬಂಧ 5533 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹೊಸಬಗೆಯಲ್ಲಿ ಬಂದಿರುವ ಶುಭವಾರ್ತೆ (3)
3.ಅಸಹಾಯಕನ ಮುಂದೆ ಈ ಶೌರ್ಯವೇ! (3)
5.ಧನಿಕ ಹಿಡಿದಿರುವ ಕೊತ್ತಂಬರಿ ಕಾಳು (3)
6.ಹೊಸಲು ನೋಡಿದಾಗ ಕಾಣುತ್ತಿರುವ ನಾವೀನ್ಯ (4)
8.ಸಕತ್ತು ಗಲೀಜು! (2)
10.ಒಸಗೆ ತೋರಿ ಮಾಡಿದ ಹೊಂದಿಕೆ (3)
11.ಸೆದೆ ಬಡಿಯಲು ತಿರುಗಿದ ದಿಕ್ಕು! (2)
13.ಇದು ಅನ್ಯರ ಒಳಿತು (4)
15.ಅವಳಿ ಮಕ್ಕಳಿಗೆ ಖರೀದಿಸಿದ ಬಟ್ಟೆ (3)
16.ಹಣಿಕಿ ಹಾಕಿ ಲೆಕ್ಕ ಮಾಡುವುದು (3)
17.ಸಂಕಲೆ ತೊಟ್ಟವನ ಇಚ್ಛೆ! (3)

ಮೇಲಿಂದ ಕೆಳಕ್ಕೆ
2.ಯಮನ ಹತ್ತಿರ ಕಳೆದ ಕಾಲ (3)
4.ಹರಿದಂತದಲ್ಲಿರುವ ಹಸಿರು ಬಣ್ಣ (3)
5.ಧಮನಿಯ ತೋರುತ್ತಿರುವ ಸಾಹುಕಾರ (3)
6.ಹೊಸಿಲ ಬಳಿಯಲ್ಲಿ ಕೆಟ್ಟವಾಸನೆಯೇ? (5)
7.ನಕರಾ ತೋರದೆ ಮಾಡುವ ಕೆತ್ತನೆ ಕೆಲಸ (3)
9. ಚಕ್ಕಂದದ ಮಾತುಕತೆ (3)
12.ಈ ಬ್ರೋಕರ್ ಕನ್ನಡಿಗ! (3)
14.ಮಣಿ ಹಿಡಿದಿರುವ ನಲ್ಲೆ (3)
15.ಟಕ ಟಕ ಶಬ್ದದ ಕುದುರೆಬಂಡಿ (3)



5532ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮುಂಗೋಪ 3.ಕುಸುಮ 5.ಹಗೇವು 6.ಮಕರ 8.ತೆಪ್ಪ 9.ಒರಳು 10.ಪ್ರಾಸ 13.ಸಂಪುಟ 15.ಪ್ರೇಯಸಿ 16.ಪ್ರಪಂಚ 17.ಉನಕ

ಮೇಲಿಂದ ಕೆಳಕ್ಕೆ: 1.ಮುಂಜಾವು 2.ಪರಮ 3.ಕುಟೀರ 4.ಮಹಿಳೆ 5.ಹಣತೆ 7.ಕರುಳು 9.ಒನಪು 11.ಸನ್ಯಾಸಿ 12.ತಿಗಪ್ರ 13.ಸಂಕೋಚ 14.ಟಪಾಲು 15.ಪ್ರೇಕ್ಷಕ

ಸುಡೊಕು 5919

						5		
	2	9	6		7			
	6	5		4			9	1
	4				1		7	
8				2				4
	9		7			6		
9				3		4		
			4		8			9
2		4					5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ

5918 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

ಸಿಂಗಪುರ: ಚಿನ್ನ ಕಳ್ಳ ಸಾಗಣೆಗೆ ವಲಸೆ ಕಾರ್ಮಿಕರ ಬಳಕೆ

ಸಿಂಗಪುರ (ಪಿಟಿಐ): ಚಿನ್ನ ಕಳ್ಳ ಸಾಗಣೆಗೆ ಭಾರತೀಯ ವಲಸೆ ಕಾರ್ಮಿಕರನ್ನು ಬಳಸಿಕೊಳ್ಳುವ ದಂಧೆ ಸಿಂಗಪುರದಲ್ಲಿ ಅವ್ಯಾಹತವಾಗಿ ನಡೆಯುತ್ತಿದೆ.

ಚಾಂಗಿ ವಿಮಾನ ನಿಲ್ದಾಣದ ಮೂಲಕ ಭಾರತಕ್ಕೆ ತೆರಳುವ ಕಾರ್ಮಿಕರನ್ನು ಸಂಪರ್ಕಿಸಿ ದಂಧೆಕೋರರು ಹಣದ ಆಮಿಷವೊಡ್ಡಿ ಚಿನ್ನ ಸಾಗಣೆಗೆ ಪುಸಲಾಯಿಸುತ್ತಿದ್ದಾರೆ. ಈ ಕುರಿತು ಸ್ಥಳೀಯ ಮಾಧ್ಯಮಗಳು ಭಾನುವಾರ ವರದಿ ಮಾಡಿವೆ.

ಚಿನ್ನ ಸಾಗಣೆಗೆ ಒಪ್ಪುವ ಭಾರತೀಯರನ್ನು ವಿಮಾನ ನಿಲ್ದಾಣದ ನಿಗದಿತ ಜಾಗಕ್ಕೆ ಕರೆದೊಯ್ದು ವ್ಯವಹಾರ ಕುದುರಿಸುತ್ತಾರೆ. ಭಾರತಕ್ಕೆ ಕಾಲಿಡುತ್ತಲೇ ಚಿನ್ನವನ್ನು ತಮ್ಮ ಗುಂಪಿನ ಸದಸ್ಯರು ಪಡೆಯುವ ಬಗ್ಗೆ ಕಳ್ಳಸಾಗಣೆದಾರರು ಕಾರ್ಮಿಕರಿಗೆ ಮೊದಲೇ ತಿಳಿಸಿರುತ್ತಾರೆ ಎಂದು 'ದಿ ಸ್ಟ್ರೈಟ್ಸ್ ಟೈಮ್ಸ್' ವರದಿ ಮಾಡಿದೆ.

'ಪ್ರಯಾಣಿಕರು ಚಿನ್ನ ಸೇರಿ ಬೆಲೆಬಾಳುವ ಲೋಹಗಳನ್ನು ದೇಶದಿಂದ ಹೊರಗೆ ಕೊಂಡೊಯ್ಯುವುದು ಸಿಂಗಾಪುರದಲ್ಲಿ ಕಾನೂನು ಬಾಹಿರವೇನಲ್ಲ. ಆದರೆ, ತಾವು ಹೊಂದಿರುವ ಚಿನ್ನವನ್ನು ಪ್ರಯಾಣಿಕರು ಮೊದಲೇ ಘೋಷಿಸದಿದ್ದರೆ ಭಾರತದಲ್ಲಿ ಕಾನೂನು ಉಲ್ಲಂಘನೆಯ ಅಪಾಯ ಎದುರಿಸಬೇಕಾಗುತ್ತದೆ' ಎಂದು ಸಿಂಗಾಪುರದ 'ಜೆಮ್ ಟ್ರೇಡರ್ಸ್ ಅಸೋಸಿಯೇಷನ್' ಅಧ್ಯಕ್ಷ ಮೊಹಮದ್ ಬಿಲಾಲ್ ಅವರ ಹೇಳಿಕೆ ಉಲ್ಲೇಖಿಸಿ ವರದಿ ಪ್ರಕಟಿಸಲಾಗಿದೆ.

ವಿದೇಶದಿಂದ ಮರಳುವ ಭಾರತೀಯರು, ಪುರುಷರಾದರೆ 20 ಗ್ರಾಂ ವರೆಗಿನ ಚಿನ್ನವನ್ನು ಮತ್ತು ಮಹಿಳೆಯರು ಇದರ ಎರಡು ಪಟ್ಟು ಚಿನ್ನವನ್ನು ಸುಂಕ ರಹಿತವಾಗಿ ತರಬಹುದು. ಇದಕ್ಕಿಂತಲೂ ಹೆಚ್ಚು ಚಿನ್ನವನ್ನು ದೇಶದೊಳಗೆ ತಂದರೆ ಅದಕ್ಕೆ ಸುಂಕ ವಿಧಿಸಲಾಗುತ್ತದೆ.

ಗೋಲ್ಡ್ ಬಾಂಡ್‌ನಲ್ಲಿ ಹೂಡಿಕೆ ಮಾಡಿ



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಭಾರತೀಯರಿಗೆ ಚಿನ್ನ ಅಂದ್ರೆ ಅಚ್ಚುಮೆಚ್ಚು. ಅಂದಾಜು ಒಂದರ ಪ್ರಕಾರ ದೇಶದ ನಾಗರಿಕರ ಬಳಿ ಇರುವ ಚಿನ್ನ ಸುಮಾರು 25ರಿಂದ 27 ಸಾವಿರ ಟನ್. ಹಬ್ಬ, ಮದುವೆ, ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವ –ಹೀಗೆ ಚಿನ್ನ ಖರೀದಿಗೆ ಇಲ್ಲಿ ಕಾರಣಗಳು ಅನೇಕ.

ಬಂಗಾರದ ಮೇಲೆ ಹೂಡಿಕೆ ಮಾಡಬೇಕು ಅಂದ ತಕ್ಷಣ ಬಹುಪಾಲು ಜನರು ಆಭರಣ ಖರೀದಿಯನ್ನು ಪರಿಗಣಿಸುತ್ತಾರೆ. ಆದರೆ, ಚಿನ್ನದ ಮೇಲೆ ಹೂಡಿಕೆ ಮಾಡಲು ಈಗ ಗೋಲ್ಡ್ ಇಟಿಎಫ್, ಗೋಲ್ಡ್ ಮ್ಯೂಚುಯಲ್ ಫಂಡ್, ಡಿಜಿಟಲ್ ಗೋಲ್ಡ್, ಸಾವರಿನ್ ಗೋಲ್ಡ್ ಬಾಂಡ್ ಹೀಗೆ ಹಲವು ಆಯ್ಕೆಗಳಿವೆ. ಇಷ್ಟೆಲ್ಲಾ ಆಯ್ಕೆಗಳ ಪೈಕಿ ಸಾವರಿನ್ ಗೋಲ್ಡ್ ಬಾಂಡ್ ಹೆಚ್ಚು ಸುದ್ದಿಯಲ್ಲಿದೆ.

2023-24ನೇ ಆರ್ಥಿಕ ವರ್ಷದ ಮೂರನೇ ಸರಣಿಯ ಸಾವರಿನ್ ಗೋಲ್ಡ್ ಬಾಂಡ್‌ಗಳನ್ನು ಆರ್‌ಬಿಐ ಡಿಸೆಂಬರ್ 18 ಮತ್ತು ಡಿಸೆಂಬರ್ 23ರ ನಡುವೆ ವಿತರಿಸುತ್ತಿದೆ. ಸಾವರಿನ್ ಗೋಲ್ಡ್ ಬಾಂಡ್ ಕೇಂದ್ರ ಸರ್ಕಾರದ ಗ್ಯಾರಂಟಿ ಇರುವ ಚಿನ್ನದ ಹೂಡಿಕೆಯಾಗಿದೆ. ಉತ್ತಮ ಲಾಭವನ್ನೂ ಹೂಡಿಕೆದಾರರಿಗೆ ತಂದುಕೊಡುತ್ತಿದೆ. ಬನ್ನಿ ಸಾವರಿನ್ ಗೋಲ್ಡ್ ಬಾಂಡ್ ಬಗ್ಗೆ ಇನ್ನಷ್ಟು ತಿಳಿದು ಜಾಗೃತ ಹೂಡಿಕೆದಾರರಾಗೋಣ.

ಏನಿದು ಸಾವರಿನ್ ಗೋಲ್ಡ್ ಬಾಂಡ್?: ಚಿನ್ನದ ಮೌಲ್ಯಕ್ಕೆ ಪ್ರತಿಯಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೀಡುವ ಬಾಂಡ್‌ಗಳನ್ನು ಸಾವರಿನ್ ಗೋಲ್ಡ್ ಬಾಂಡ್ ಎಂದು ಕರೆಯಬಹುದು. ಸಾವರಿನ್ ಗೋಲ್ಡ್ ಬಾಂಡ್‌ಗಳನ್ನು ಸರ್ಕಾರದ ಪರವಾಗಿ ಭಾರತೀಯ ರಿಸರ್ವ್ ಬ್ಯಾಂಕ್ ವಿತರಿಸುತ್ತದೆ. ಘನರೂಪದ ಚಿನ್ನಕ್ಕೆ ಪ್ರತಿಯಾಗಿ ಬಾಂಡ್‌ಗಳನ್ನು ವಿತರಿಸಲಾಗುತ್ತದೆ. ಪ್ರತಿ ಬಾಂಡ್ ಒಂದು ಗ್ರಾಂ ಚಿನ್ನಕ್ಕೆ ಸಮನಾದ ಮೌಲ್ಯವನ್ನು ಪ್ರತಿನಿಧಿಸುತ್ತದೆ.

ಪ್ರಸ್ತುತ ಮಾರುಕಟ್ಟೆಯಲ್ಲಿರುವ ಚಿನ್ನದ ಬೆಲೆ ಆಧರಿಸಿ ಸಾವರಿನ್ ಗೋಲ್ಡ್ ಬಾಂಡ್‌ನ ಬೆಲೆ ನಿಗದಿಯಾಗುತ್ತದೆ. ಚಿನ್ನದ ಬಾಂಡ್‌ನ ಬೆಲೆಯನ್ನು ಪ್ರತಿ ಗ್ರಾಂನ ಲೆಕ್ಕಾಚಾರದಲ್ಲಿ ನಿಗದಿ ಮಾಡಲಾಗುತ್ತದೆ. 2023-24ನೇ ಆರ್ಥಿಕ ವರ್ಷದ ಮೂರನೇ ಸರಣಿಯ ಸಾವರಿನ್ ಗೋಲ್ಡ್ ಬಾಂಡ್‌ನ ಪ್ರತಿ ಗ್ರಾಂನ ಬೆಲೆಯನ್ನು ₹6,199ಕ್ಕೆ ನಿಗದಿ ಮಾಡಲಾಗಿದೆ.

ಸಾವರಿನ್ ಗೋಲ್ಡ್ ಬಾಂಡ್ ಹೀಗೆ ಖರೀದಿಸಿ: 2023-24ನೇ ಸಾವರಿನ್ ಗೋಲ್ಡ್ ಬಾಂಡ್‌ನ ಮೂರನೇ ಸರಣಿ ಡಿಸೆಂಬರ್ 18ರಿಂದ ಡಿಸೆಂಬರ್ 22ರ ವರೆಗೆ ಖರೀದಿಗೆ ಲಭ್ಯವಿದೆ. 2023-24ನೇ ಸಾವರಿನ್ ಗೋಲ್ಡ್ ಬಾಂಡ್‌ನ ನಾಲ್ಕನೇ ಸರಣಿಯನ್ನು ಫೆಬ್ರುವರಿ 12ರಿಂದ 16ರವರೆಗೆ ಖರೀದಿಸಲು ಅವಕಾಶವಿದೆ. ಪ್ರಮುಖ ಅಂಚೆ ಕಚೇರಿಗಳು, ಬ್ಯಾಂಕ್‌ಗಳು, ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ), ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್‌ನಿಂದ (ಬಿಎಸ್‌ಇ) ಖರೀದಿಸಬಹುದಾಗಿದೆ.

ಡಿ ಮ್ಯಾಟ್ ಖಾತೆ ಇಲ್ಲದಿದ್ದರೂ ಗೋಲ್ಡ್ ಬಾಂಡ್ ಖರೀದಿ ಸಾಧ್ಯವಿದೆ. ಆನ್‌ಲೈನ್‌ನಲ್ಲಿ ಖರೀದಿಸಿದರೆ ಗ್ರಾಂ ಮೇಲೆ ₹50 ವಿನಾಯಿತಿ ಸಿಗುತ್ತದೆ. ಭಾರತದ ಪ್ರಜೆಗಳು, ಹಿಂದೂ ಅವಿಭಕ್ತ ಕುಟುಂಬಗಳು, ಟ್ರಸ್ಟ್‌ಗಳು, ಚಾರಿಟಬಲ್ ಸಂಸ್ಥೆಗಳು ಸಾವರಿನ್ ಗೋಲ್ಡ್ ಬಾಂಡ್‌ನಲ್ಲಿ ತೊಡಗಿಸಬಹುದು. ವ್ಯಕ್ತಿಗಳು ಮತ್ತು ಅವಿಭಕ್ತ ಕುಟುಂಬಗಳು ಕನಿಷ್ಠ 1 ಗ್ರಾಂ ಮತ್ತು ಗರಿಷ್ಠ 4 ಕೆ.ಜಿವರೆಗೆ ಹೂಡಿಕೆ ಮಾಡಬಹುದು.

ಟ್ರಸ್ಟಿಗಳಿಗೆ 20 ಕೆ.ಜಿವರೆಗೆ ಹೂಡಿಕೆಗೆ ಅವಕಾಶವಿದೆ. ಆದರೆ, ಈ ಬಾಂಡ್‌ಗಳಲ್ಲಿ 8 ವರ್ಷಗಳ ಲಾಕಿನ್ ಅವಧಿ ಇರುತ್ತದೆ. 5 ವರ್ಷಗಳ ಬಳಿಕ ಅವಧಿ ಪೂರ್ವ ನಗದೀಕರಣಕ್ಕೆ ಅವಕಾಶವಿದೆ. ಇದಲ್ಲದೆ ಬಾಂಡ್‌ಗಳ ಮೇಲೆ ಸಾಲ ಪಡೆಯುವ ಅವಕಾಶವೂ ಇದೆ. ಮತದಾರರ ಗುರುತಿನ ಚೀಟಿ, ಪ್ಯಾನ್‌ಕಾರ್ಡ್, ಆಧಾರ್ ಕಾರ್ಡ್, ಪಾಸ್‌ಪೋರ್ಟ್ ನಂತಹ ದಾಖಲೆಗಳನ್ನು ನೀಡಿ ಗೋಲ್ಡ್ ಬಾಂಡ್ ಖರೀದಿಸಬಹುದು.

ಬಾಂಡ್‌ನಲ್ಲಿ ಡಬಲ್ ಲಾಭ: ಆಭರಣ ಚಿನ್ನದ ಮೇಲೆ ಹೂಡಿಕೆ ಮಾಡಿದಾಗ ಚಿನ್ನದ ಬೆಲೆ ಹೆಚ್ಚಳವಾದಾಗ ಮಾತ್ರ ಲಾಭ ಸಿಗುತ್ತದೆ. ಆದರೆ, ಸಾವರಿನ್ ಗೋಲ್ಡ್ ಬಾಂಡ್‌ನಲ್ಲಿ ಹೂಡಿಕೆ ಮಾಡಿದಾಗ ಚಿನ್ನದ ಬೆಲೆ ಹೆಚ್ಚಳವಾದಾಗ ಅದರ ಲಾಭ ಸಿಗುವ ಜೊತೆಗೆ ಹೂಡಿಕೆ ಮೇಲೆ ವಾರ್ಷಿಕ ಶೇ 2.5ರಷ್ಟು ಬಡ್ಡಿ ಲಾಭಾಂಶವೂ ಲಭಿಸುತ್ತದೆ.

ಪ್ರತಿ 6 ತಿಂಗಳಿಗೊಮ್ಮೆ ಬಡ್ಡಿ ಪಾವತಿ ಆಗುತ್ತದೆ. ಆಭರಣ ಚಿನ್ನ ಖರೀದಿಸಿದಾಗ ಶೇ 15 ರಿಂದ ಶೇ 30ರವರೆಗೆ ಮೇಕಿಂಗ್ ಚಾರ್ಜಸ್ ನೀಡಬೇಕಾಗುತ್ತದೆ. ಸಾವರಿನ್ ಗೋಲ್ಡ್ ಬಾಂಡ್ ಖರೀದಿಸಿದರೆ ಈ ಹೊರೆ ಇರುವುದಿಲ್ಲ. ಆಭರಣ ಚಿನ್ನ ಖರೀದಿಸುವಾಗ ಅದರ ಸುರಕ್ಷತೆ ಮತ್ತು ಗುಣಮಟ್ಟದ ಬಗ್ಗೆ ನೀವೇ ತಲೆಕೆಡಿಸಿಕೊಳ್ಳಬೇಕು. ಆದರೆ, ಈ ಬಾಂಡ್ ಅನ್ನು ಭಾರತೀಯ ರಿಸರ್ವ್ ಬ್ಯಾಂಕ್ ನೀಡುವುದರಿಂದ ಗುಣಮಟ್ಟ ಮತ್ತು ಸುರಕ್ಷತೆ ಬಗ್ಗೆ ಶೇ 100ರಷ್ಟು ಖಾತರಿ ಇರುತ್ತದೆ. ಆಭರಣ ಚಿನ್ನ ಖರೀದಿಸಿದಾಗ ಜಿಎಸ್‌ಟಿ ಕಟ್ಟುವ ಜೊತೆಗೆ, ಬಂಗಾರವನ್ನು ಸುರಕ್ಷಿತವಾಗಿಡಲು ಬ್ಯಾಂಕ್ ಲಾಕರ್ ವೆಚ್ಚ ಕೊಡಬೇಕಾಗುತ್ತದೆ. ಸಾವರಿನ್ ಗೋಲ್ಡ್ ಬಾಂಡ್ ಖರೀದಿಸಿದರೆ ಜಿಎಸ್‌ಟಿಯೂ ಇಲ್ಲ; ಲಾಕರ್ ಶುಲ್ಕದ ಗೊಡವೆಯೂ ಇಲ್ಲ.

ಮೆಚ್ಯೂರಿಟಿ ಮತ್ತು ತೆರಿಗೆ: ಸಾವರಿನ್ ಗೋಲ್ಡ್ ಬಾಂಡ್ 8 ವರ್ಷಗಳ ನಂತರ ಮೆಚ್ಯೂರಿಟಿಗೆ ಒಳಪಡುತ್ತದೆ. ಮೆಚ್ಯೂರಿಟಿ ವೇಳೆ ಬರುವ ಹೂಡಿಕೆ ಮೇಲಿನ ಗಳಿಕೆಗೆ (ಕ್ಯಾಪಿಟಲ್ ಗೇನ್ಸ್) ಯಾವುದೇ ತೆರಿಗೆ ಕಟ್ಟಬೇಕಿಲ್ಲ. ಆದರೆ, ಪ್ರತಿವರ್ಷ ನೀಡುವ ಶೇ 2.5ರಷ್ಟು ಬಡ್ಡಿ ಗಳಿಕೆಗೆ ಆದಾಯ ತೆರಿಗೆ ಸ್ಲ್ಯಾಬ್‌ಗೆ ಅನುಗುಣವಾಗಿ ತೆರಿಗೆ ಪಾವತಿಸಬೇಕಾಗುತ್ತದೆ.

ಬಾಂಡ್ ಹೂಡಿಕೆ ಮೇಲಿನ ಗಳಿಕೆ: ಕಳೆದ 10 ವರ್ಷಗಳ ಅವಧಿಯಲ್ಲಿ ಚಿನ್ನದ ಮೇಲಿನ ಹೂಡಿಕೆ ವಾರ್ಷಿಕ ಸರಾಸರಿ ಶೇ 10ರಷ್ಟು ಲಾಭಾಂಶ ಕೊಟ್ಟಿದೆ. ಇದರ ಜೊತೆ ಸಾವರಿನ್ ಗೋಲ್ಡ್ ಬಾಂಡ್‌ನಲ್ಲಿ ವಾರ್ಷಿಕ ಶೇ 12.5ರಷ್ಟು ಲಾಭಾಂಶವೂ ಸಿಗುವುದರಿಂದ ಈ ಬಾಂಡ್‌ನಲ್ಲಿ ಶೇ 12ರಿಂದ ಶೇ 12.5ರ ವರೆಗೂ ಲಾಭಾಂಶ ನಿರೀಕ್ಷೆ ಮಾಡಬಹುದು. 8 ವರ್ಷಗಳ ಹಿಂದೆ ಹೂಡಿಕೆ ಮಾಡಿದ್ದ ಸಾವರಿನ್ ಗೋಲ್ಡ್ ಬಾಂಡ್‌ನ ಮೊದಲ ಕಂತಿನಲ್ಲಿ ಹೂಡಿಕೆ ಮಾಡಿದ್ದವರಿಗೆ ಬರೋಬ್ಬರಿ ಶೇ 12.9ರಷ್ಟು ಲಾಭಾಂಶ ದಕ್ಕಿದೆ.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ದಾಖಲೆ ಮಟ್ಟಕ್ಕೆ ಜಿಗಿದ ಷೇರುಪೇಟೆ ಸೂಚ್ಯಂಕಗಳು

ಷೇರುಪೇಟೆ ಸೂಚ್ಯಂಕಗಳು ಸತತ ಏಳನೇ ವಾರ ಗಳಿಕೆ ದಾಖಲಿಸಿವೆ. ಡಿಸೆಂಬರ್ 15ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಸಾರ್ವಕಾಲಿಕ ಏರಿಕೆ ಕಂಡಿವೆ.

71,483 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 2.37ರಷ್ಟು ಜಿಗಿದಿದೆ. 21,456 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 2.32ರಷ್ಟು ಹೆಚ್ಚಳ ಕಂಡಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡು ಬಂದ ಸಕಾರಾತ್ಮಕತೆ, ಅಮೆರಿಕ ಫೆಡರಲ್ ಬ್ಯಾಂಕ್‌ನಿಂದ ಬಡ್ಡಿದರ ಇಳಿಕೆಯ ಮುನ್ಸೂಚನೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಭರಾಟೆ, ವಿಶ್ವದ ಪ್ರಮುಖ ಸೆಂಟ್ರಲ್ ಬ್ಯಾಂಕ್‌ಗಳಲ್ಲಿ ಬಡ್ಡಿದರ ಯಥಾಸ್ಥಿತಿ ಸೇರಿ ಹಲವು ಅಂಶಗಳು ಮಾರುಕಟ್ಟೆ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿ ಅಂತ ನೋಡಿದಾಗ ಎಲ್ಲಾ ವಲಯಗಳು ಸಕಾರಾತ್ಮಕ ಗಳಿಕೆ ದಾಖಲಿಸಿವೆ. ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 7, ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಮತ್ತು ಲೋಹ ಸೂಚ್ಯಂಕ ತಲಾ ಶೇ 5ರಷ್ಟು ಜಿಗಿದಿವೆ. ನಿಫ್ಟಿ ರಿಯಲ್ ಎಸ್ಟೇಟ್ ಇಂಡೆಕ್ಸ್ ಶೇ 4ರಷ್ಟು ಗಳಿಸಿಕೊಂಡಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹18,858.34 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹ 2,592.35 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಏರಿಕೆ- ಇಳಿಕೆ: ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಇನ್ಫೋ ಎಡ್ಜ್ ಇಂಡಿಯಾ, ಎಚ್‌ಸಿಎಲ್ ಟೆಕ್ನಾಲಜೀಸ್, ಡಿಎಲ್‌ಎಫ್, ಎಲ್‌ಟಿಐ ಮೈಂಡ್ ಟ್ರೀ, ಬಂಧನ್ ಬ್ಯಾಂಕ್, ಹಿಂಡಾಲ್ಕೋ ಇಂಡಸ್ಟ್ರೀಸ್, ಎನ್‌ಟಿಪಿಸಿ, ಅಲ್ಟ್ರಾ ಟೆಕ್ ಸಿಮೆಂಟ್ ಗಳಿಸಿಕೊಂಡಿವೆ. ಅದಾನಿ ಟೋಟಲ್ ಗ್ಯಾಸ್, ಅದಾನಿ ಎನರ್ಜಿ ಸೆಲ್ಯೂಷನ್ಸ್, ಪೇಟಿಎಂ, ಭಾರತ್ ಪೆಟ್ರೋಲಿಯಂ ಮತ್ತು ಐಸಿಐಸಿಐ ಪ್ರೂಡೆನ್ಷಿಯಲ್ ಲೈಫ್ ಇನ್ಶೂರೆನ್ಸ್ ಕಂಪನಿ ಕುಸಿತ ಕಂಡಿವೆ.

ಮುನ್ನೋಟ: ಭಾರತೀಯ ರಿಸರ್ವ್ ಬ್ಯಾಂಕ್ ಜಿಡಿಪಿ ಬೆಳವಣಿಗೆ ಬಗ್ಗೆ ಆಶಾದಾಯಕವಾಗಿ ಇರುವುದು, ಜಾಗತಿಕ ಮಟ್ಟದಲ್ಲಿ ವಿವಿಧ ದೇಶಗಳ ಸೆಂಟ್ರಲ್ ಬ್ಯಾಂಕ್‌ಗಳು ಬಡ್ಡಿದರ ಇಳಿಕೆಯ ಬಗ್ಗೆ ಮನಸ್ಸು ಮಾಡಿರುವುದು ಸೇರಿದಂತೆ ಹಲವು ಅಂಶಗಳು ಭಾರತದ ಷೇರುಪೇಟೆಗೆ ಪೂರಕವಾಗಿವೆ. ಮುಂಬರುವ ಅಕ್ಟೋಬರ್-ಡಿಸೆಂಬರ್ ತ್ರೈಮಾಸಿಕ ಫಲಿತಾಂಶಗಳ ಮೇಲೆ ಹೂಡಿಕೆದಾರರ ದೃಷ್ಟಿ ನೆಟ್ಟಿದೆ. ಸದ್ಯದ ಮಟ್ಟಿಗೆ ದೊಡ್ಡಮಟ್ಟದ ಹೂಡಿಕೆಯ ಬದಲು ಎಸ್‌ಐಪಿ ಹೂಡಿಕೆಯನ್ನು ಪರಿಗಣಿಸುವುದು ಸೂಕ್ತ.

ಷೇರುಪೇಟೆ

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹223-444
ದ್ವಿತಳಿ (ಬಿ.ವಿ) ₹158-599

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100 ಮೊಟ್ಟೆಗೆ ₹600
12 ಮೊಟ್ಟೆಗೆ ₹80
ಮೈಸೂರು
100 ಮೊಟ್ಟೆಗೆ ₹604

ಜಿಎಸ್‌ಟಿ ರಿಟರ್ನ್ಸ್ ಸಲ್ಲಿಕೆ: ಶೇ 65ರಷ್ಟು ಏರಿಕೆ

ನವದೆಹಲಿ (ಪಿಟಿಐ): ಜಿಎಸ್‌ಟಿ ರಿಟರ್ನ್ಸ್ ಸಲ್ಲಿಕೆದಾರರ ಪ್ರಮಾಣವು 2023ರ ಏಪ್ರಿಲ್‌ಗೆ ಹೋಲಿಸಿದರೆ ಶೇ 65ರಷ್ಟು ಏರಿಕೆ ಕಂಡಿದೆ. ತೆರಿಗೆ ರಿಟರ್ನ್ಸ್ ಸಲ್ಲಿಕೆದಾರರ ಸಂಖ್ಯೆಯು 1.13 ಕೋಟಿಗೆ ಏರಿಕೆಯಾಗಿದೆ. ತೆರಿಗೆ ಪಾವತಿ ಪ್ರವೃತ್ತಿ ಉತ್ತಮಗೊಂಡಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಹೇಳಿದೆ.

ಜಿಎಸ್‌ಟಿ ಅಡಿಯಲ್ಲಿ ನೋಂದಣಿ ಮಾಡಿಕೊಂಡ ತೆರಿಗೆದಾರರ ಸಂಖ್ಯೆಯು 1.40 ಕೋಟಿಗೆ ಏರಿಕೆಯಾಗಿದೆ. 2018ರ ಏಪ್ರಿಲ್‌ನಲ್ಲಿ ಇದು 1.06 ಕೋಟಿ ಆಗಿತ್ತು.

ಜಿಎಸ್‌ಟಿಆರ್-3ಬಿಯಲ್ಲಿ ರಿಟರ್ನ್ಸ್ ಸಲ್ಲಿಸುವವರಲ್ಲಿ ಶೇ 90ರಷ್ಟು ಜನರು ತಿಂಗಳ ಕೊನೆಯೊಳಗೆ ಸಲ್ಲಿಸುತ್ತಿದ್ದಾರೆ. 2017-18ಕ್ಕೆ ಹೋಲಿಸಿದರೆ ಈ ಪ್ರಮಾಣದಲ್ಲಿ ಶೇ 68ರಷ್ಟು ಏರಿಕೆ ಉಂಟಾಗಿದೆ. 2017-18ರಲ್ಲಿ ಜಿಎಸ್‌ಟಿಯನ್ನು ಜಾರಿಗೊಳಿಸಲಾಯಿತು.

ಜಿಎಸ್‌ಟಿ ನಿಯಮಗಳು ಮತ್ತು ಪ್ರಕ್ರಿಯೆಗಳನ್ನು ಸರಳಗೊಳಿಸಿದ್ದೇ ಹೆಚ್ಚು ಹೆಚ್ಚು ಜನರು ತೆರಿಗೆ ಪಾವತಿಸಲು ಕಾರಣ ಎಂದು ಹಣಕಾಸು ಸಚಿವಾಲಯವು 'ಎಕ್ಸ್'ನಲ್ಲಿ ಪ್ರಕಟಿಸಿದ ಪೋಸ್ಟ್‌ನಲ್ಲಿ ಹೇಳಿಕೊಂಡಿದೆ.

ಜಿಎಸ್‌ಟಿಆರ್-3ಬಿ ಸಲ್ಲಿಕೆದಾರರ ಸಂಖ್ಯೆಯು 2018ರ ಏಪ್ರಿಲ್‌ನಲ್ಲಿ 72.49 ಲಕ್ಷ ಇದ್ದರೆ, ಈಗ ಅದು 1.13 ಕೋಟಿಗೆ ಏರಿಕೆಯಾಗಿದೆ. ಜಿಎಸ್‌ಟಿಆರ್-3ಬಿ ಎಂದರೆ ತೆರಿಗೆದಾರರ ಮಾಸಿಕ ವಹಿವಾಟು ಮತ್ತು ತೆರಿಗೆ ಪಾವತಿ ವಿವರಗಳ ಸಲ್ಲಿಕೆಯ ನಮೂನೆ.



ಮುಖ್ಯಾಂಶಗಳು

- ನವೆಂಬರ್‌ನಲ್ಲಿ ಜಿಎಸ್‌ಟಿ ಸಂಗ್ರಹವು ₹1.68 ಲಕ್ಷ ಕೋಟಿಗೆ ಏರಿದೆ
- ಈ ವರ್ಷ 6ನೇ ಬಾರಿ ಜಿಎಸ್‌ಟಿ ಸಂಗ್ರಹ ₹1.60 ಲಕ್ಷ ಕೋಟಿ ದಾಟಿದೆ
- ಏಪ್ರಿಲ್‌ನಲ್ಲಿ ಗರಿಷ್ಠ ಎಂದರೆ, ₹1.87 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ ಆಗಿತ್ತು

ಮನೆಯಿಂದಲೇ ಅಗತ್ಯ ಸೇವೆ ಪಡೆಯಬಹುದು: ಎಲ್‌ಐಸಿ ಅಧ್ಯಕ್ಷ ಸಿದ್ಧಾರ್ಥ ಮೊಹಂತಿ

ಗ್ರಾಮೀಣ ಪ್ರದೇಶಕ್ಕೆ ವಿಶೇಷ ವಿಮೆ

ನವದೆಹಲಿ (ಪಿಟಿಐ): '2047ರ ವೇಳೆಗೆ ಎಲ್ಲರಿಗೂ ವಿಮೆ' ಸಾಧಿಸುವ ಪ್ರಯತ್ನದಲ್ಲಿ ಎಲ್‌ಐಸಿ ಮಹತ್ವದ ಪಾತ್ರ ವಹಿಸಲಿದೆ ಮತ್ತು ಆ ಉದ್ದೇಶವನ್ನು ಪೂರೈಸಲು ವಿಶೇಷವಾಗಿ ಗ್ರಾಮೀಣ ಪ್ರದೇಶಗಳ ಜನರಿಗೆ ಹೊಂದಿಕೆ ಆಗುವಂತಹ ವಿಮಾ ಪಾಲಿಸಿಯನ್ನು ರೂಪಿಸಲು ಯೋಜಿಸುತ್ತಿದೆ ಎಂದು ಎಲ್‌ಐಸಿ ಅಧ್ಯಕ್ಷ ಸಿದ್ಧಾರ್ಥ ಮೊಹಂತಿ ಭಾನುವಾರ ಹೇಳಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ವಿಮೆ ಅಗತ್ಯ ಇರುವ ಗರಿಷ್ಠ ಸಂಖ್ಯೆಯ ಜನರನ್ನು ತಲುಪುವುದಕ್ಕೆ ಒತ್ತು ನೀಡಲಾಗುವುದು. ಮುಂದಿನ ದಿನಗಳಲ್ಲಿ ನಮ್ಮ ಒಟ್ಟು ವ್ಯವಹಾರದಲ್ಲಿ ಗ್ರಾಮೀಣ ಪ್ರದೇಶದ ಪಾಲು ಹೆಚ್ಚಲಿದೆ ಎಂದು ಅವರು ಹೇಳಿದ್ದಾರೆ.

> **ಗ್ರಾಹಕ ಕಚೇರಿಗೆ ಬರಬೇಕಾಗಿಲ್ಲ. ಮನೆಯಲ್ಲಿ ಕುಳಿತು ಮೊಬೈಲ್ ಮೂಲಕವೇ ಅಗತ್ಯ ಸೇವೆಗಳನ್ನು ಪಡೆದುಕೊಳ್ಳಬಹುದು**
> **ಸಿದ್ಧಾರ್ಥ ಮೊಹಂತಿ,** ಎಲ್‌ಐಸಿ ಅಧ್ಯಕ್ಷ

'ವಿಮಾ ನಿಯಂತ್ರಕರಿಗೆ ಕೃತಜ್ಞತೆ ಸಲ್ಲಿಸಲೇಬೇಕು. ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು 'ವಿಮಾ ವಿಸ್ತಾರ್' ಎಂಬ ಸಮಗ್ರವಾದ ವಿಮೆಯನ್ನು ಪ್ರಸ್ತಾಪಿಸಿದೆ. ಇದರಲ್ಲಿ ಜೀವ ವಿಮೆ, ಆರೋಗ್ಯ ವಿಮೆ ಮತ್ತು ಆಸ್ತಿ ವಿಮೆ ಅಡಕವಾಗಿದೆ' ಎಂದರು.

ಈ ವಿಮಾ ಪಾಲಿಸಿಯನ್ನು ಮಾರಾಟ ಮಾಡುವುದಕ್ಕಾಗಿ 'ವಿಮಾ ವಾಹಕ'ರನ್ನು ನೇಮಕ ಮಾಡಲಾಗುವುದು. ಇದು ಮಹಿಳಾ ಕೇಂದ್ರಿತ ಮಾರಾಟ ಮಾದರಿ ಆಗಿರಲಿದೆ ಎಂದು ಅವರು ವಿವರಿಸಿದರು.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವಿಮೆ ಮಾರಾಟ ಜಾಲವೊಂದನ್ನು ಸ್ಥಾಪಿಸುವ ಯೋಜನೆಯನ್ನು ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು ರೂಪಿಸಿದೆ. ವಿಮಾ ವಾಹಕರಿಗೆ ಸಂಬಂಧಿಸಿದ ಕರಡು ಮಾರ್ಗಸೂಚಿಯನ್ನು ಈ ಜೂನ್‌ನಲ್ಲಿ ಪ್ರಕಟಿಸಲಾಗಿದೆ. ಇದರಲ್ಲಿ ಕಾರ್ಪೊರೇಟ್ ವಿಮಾ ವಾಹಕ ಮತ್ತು ವೈಯಕ್ತಿಕ ವಿಮಾ ವಾಹಕ ಎಂಬ ವಿಭಾಗಗಳನ್ನು ಪ್ರಸ್ತಾಪಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಕಾರ್ಪೊರೇಟ್ ವಿಮಾ ವಾಹಕ ಸಂಸ್ಥೆಯು ಕಾನೂನಿನ ಅನ್ವಯ ನೋಂದಣಿ ಆಗಿರಬೇಕು. ಅಂಥ ಸಂಸ್ಥೆಗಳನ್ನು ವಿಮಾ ಕಂಪನಿಗಳು ನೇಮಕ ಮಾಡಿಕೊಳ್ಳುತ್ತವೆ. ವೈಯಕ್ತಿಕ ವಿಮಾ ವಾಹಕರು ಎಂದರೆ ವಿಮಾ ಕಂಪನಿ ಅಥವಾ ಕಾರ್ಪೊರೇಟ್ ವಿಮಾ ವಾಹಕ ಸಂಸ್ಥೆಯು ನೇಮಕ ಮಾಡಿಕೊಂಡ ವ್ಯಕ್ತಿಯಾಗಿರುತ್ತಾರೆ ಎಂದಿದ್ದಾರೆ.

ಸಂಪೂರ್ಣ ಡಿಜಿಟಲೀಕರಣದತ್ತ...

ಸಂಪೂರ್ಣ ಡಿಜಿಟಲೀಕರಣಗೊಳ್ಳಲು ಎಲ್‌ಐಸಿ ಮುಂದಾಗಿದೆ. ಅದಕ್ಕಾಗಿ ಡೈವ್ (ಡಿಜಿಟಲ್ ಇನ್ನೋವೇಷನ್ ಆ್ಯಂಡ್ ವ್ಯಾಲ್ಯೂ ಎನ್‌ಹಾನ್ಸ್‌ಮೆಂಟ್) ಎಂಬ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯನ್ನು ಮುನ್ನಡೆಸಲು ಸಮಾಲೋಚಕರನ್ನೂ ನೇಮಿಸಿದೆ.

'ನಮ್ಮ ಗ್ರಾಹಕರು, ಮಧ್ಯವರ್ತಿಗಳು, ಮಾರುಕಟ್ಟೆ ಸಿಬ್ಬಂದಿ ಮತ್ತು ನಮ್ಮೊಂದಿಗೆ ಕೆಲಸ ಮಾಡುವ ಎಲ್ಲರಿಗೂ ಅತ್ಯುತ್ತಮವಾದ ಡಿಜಿಟಲ್ ವ್ಯವಸ್ಥೆ ಒದಗಿಸುವುದು ನಮ್ಮ ಉದ್ದೇಶ. ಡೈವ್ ಮೂಲಕ ಅದನ್ನು ಸಾಧಿಸಲಿದ್ದೇವೆ' ಎಂದು ಸಿದ್ಧಾರ್ಥ ಮೊಹಂತಿ ಹೇಳಿದ್ದಾರೆ.

ತನ್ನದೇ ಆದ ಫಿನ್‌ಟೆಕ್ ವಿಭಾಗ ಹೊಂದುವ ಬಗ್ಗೆ ಎಲ್‌ಐಸಿ ಪರಿಶೀಲನೆ ನಡೆಸುತ್ತಿದೆ. ಅದನ್ನು ಮುಂದೆ ವ್ಯಾಪಾರ ಮಾದರಿಯಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

9 ಕಂಪನಿಗಳ ಎಂ–ಕ್ಯಾಪ್ ₹2.26 ಲಕ್ಷ ಕೋಟಿ ಏರಿಕೆ

ನವದೆಹಲಿ (ಪಿಟಿಐ): ಪ್ರಮುಖ 10 ಕಂಪನಿಗಳ ಪೈಕಿ 9 ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯ (ಎಂ–ಕ್ಯಾಪ್) ಕಳೆದ ವಾರ ₹2.26 ಲಕ್ಷ ಕೋಟಿಯಷ್ಟು ಗಳಿಕೆ ಕಂಡಿದೆ. ಟಾಟಾ ಕನ್ಸಲ್ಟೆನ್ಸಿ ಸರ್ವಿಸ್ (ಟಿಸಿಎಸ್) ಮತ್ತು ಇನ್ಫೊಸಿಸ್ ಹೆಚ್ಚು ಗಳಿಕೆ ಕಂಡಿವೆ.

ಟಿಸಿಎಸ್ ಮಾರುಕಟ್ಟೆ ಮೌಲ್ಯ ₹85,493 ಕೋಟಿ, ಇನ್ಫೊಸಿಸ್ ₹36,793 ಕೋಟಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ₹30,700 ಕೋಟಿ, ರಿಲಯನ್ಸ್ ಇಂಡಸ್ಟ್ರೀಸ್ ₹26,386 ಕೋಟಿ, ಐಸಿಐಸಿಐ ಬ್ಯಾಂಕ್ ₹18,493 ಕೋಟಿ, ಎಲ್‌ಐಸಿ ₹14,294 ಕೋಟಿ, ಐಟಿಸಿ ₹11,412 ಕೋಟಿ, ಎಚ್‌ಡಿಎಫ್‌ಸಿ ಬ್ಯಾಂಕ್ ₹2,428 ಮತ್ತು ಹಿಂದೂಸ್ತಾನ್ ಯೂನಿಲಿವರ್ ₹387 ಕೋಟಿ ಗಳಿಕೆ ಕಂಡಿವೆ.

ಭಾರ್ತಿ ಏರ್‌ಟೆಲ್ ಮೌಲ್ಯ ₹3,654 ಕೋಟಿಯಷ್ಟು ಇಳಿಕೆ ಕಂಡಿದೆ. ರಿಲಯನ್ಸ್ ಇಂಡಸ್ಟ್ರೀಸ್ ಗರಿಷ್ಠ ಮೌಲ್ಯಯುತ ಕಂಪನಿ ಎಂಬ ಹೆಗ್ಗಳಿಕೆ ಉಳಿಸಿಕೊಂಡಿದೆ. ನಂತರದ ಸ್ಥಾನದಲ್ಲಿ ಟಿಸಿಎಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಇನ್ಫೊಸಿಸ್, ಹಿಂದೂಸ್ತಾನ್ ಯೂನಿಲಿವರ್, ಎಸ್‌ಬಿಐ, ಐಟಿಸಿ, ಭಾರ್ತಿ ಏರ್‌ಟೆಲ್ ಮತ್ತು ಐಟಿಸಿ ಇವೆ.



ಕಳೆದ ವಾರ ಬಿಎಸ್‌ಇ 1,658 ಅಂಶ ಏರಿಕೆ ಆಗಿತ್ತು. 30 ಷೇರುಗಳ ಮುಂಬೈ ಷೇರು ವಿನಿಮಯ ಕೇಂದ್ರ (ಬಿಎಸ್‌ಇ) ಶುಕ್ರವಾರ 969 ಅಂಶ ಏರಿಕೆಯಾಗಿ 71,483ಕ್ಕೆ ತಲುಪಿತ್ತು. ದಿನದ ವಹಿವಾಟಿನಲ್ಲಿ ಈ ಅಂಶ 1,091ಕ್ಕೆ ಹೆಚ್ಚಳವಾಗಿ, 71,605 ಮುಟ್ಟಿತ್ತು.

ಚೀನಾದಲ್ಲಿ ತಾಪಮಾನ ಕುಸಿತ

ಬೀಜಿಂಗ್ (ರಾಯಿಟರ್ಸ್): ಶಾಂಕ್ಸಿ, ಹೆಬೈ ಮತ್ತು ಲಿಯಾನಿಂಗ್ ಪ್ರಾಂತ್ಯಗಳು ಸೇರಿದಂತೆ ಚೀನಾದ ವಿವಿಧ ಪ್ರದೇಶಗಳಲ್ಲಿ ತಾಪಮಾನವು ದಾಖಲೆ ಮಟ್ಟಕ್ಕೆ ಕುಸಿದಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಹೈಲಾಂಗ್ಜಿಯಾಂಗ್‌ನ ಯಿಚುನ್ ನಗರದಲ್ಲಿ ತಾಪಮಾನವು ಮೈನಸ್ 47.9 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಇದು 1980ರ ಜನವರಿಯ ಬಳಿಕ ದಾಖಲಾದ ಅತ್ಯಂತ ಕಡಿಮೆ ತಾಪಮಾನ ಎಂದು ಹವಾಮಾನ ಇಲಾಖೆ ಹೇಳಿದೆ.

ಗಾಜಾ: ಕದನ ವಿರಾಮಕ್ಕೆ ಆಗ್ರಹ

ಲಂಡನ್ (ಎಎಫ್‌ಪಿ): ಇಸ್ರೇಲ್ ಹಾಗೂ ಹಮಾಸ್ ನಡುವೆ ಗಾಜಾದಲ್ಲಿ ನಡೆಯುತ್ತಿರುವ ಯುದ್ಧ ಅಂತ್ಯಗೊಂಡು, ಶಾಂತಿ ನೆಲೆಸಬೇಕು ಎಂದು ಹಲವು ರಾಷ್ಟ್ರಗಳು ಭಾನುವಾರ ಆಗ್ರಹಿಸಿದೆ.

ಕದನ ವಿರಾಮ ಈ ಹೊತ್ತಿನ ಅಗತ್ಯ ಎಂದು ಬ್ರಿಟನ್, ಫ್ರಾನ್ಸ್ ಮತ್ತು ಜರ್ಮನಿ ಅಭಿಪ್ರಾಯಪಟ್ಟಿವೆ.

ಗಿಡ್ಡ ಕೂದಲಿನ ಸುಂದರಿಗೆ ಮಿಸ್ ಫ್ರಾನ್ಸ್ ಕಿರೀಟ

ಡಿಜಾನ್ (ಫ್ರಾನ್ಸ್) (ಎಎಫ್‌ಪಿ): ಲಿಂಗತಾರತಮ್ಯದ ಟೀಕೆಗಳನ್ನು ಎದುರಿಸಿದ್ದ ಮಿಸ್ ಫ್ರಾನ್ಸ್ ಸೌಂದರ್ಯ ಸ್ಪರ್ಧೆಯಲ್ಲಿ ಈ ಬಾರಿ ಗಿಡ್ಡ ಕೂದಲಿನ, ಸುಂದರಿ ಈವ್ ಗಿಲ್ಲೆಸ್ ವಿಜೇತರಾಗಿದ್ದಾರೆ.

'ಇದು ನನ್ನ ಗಿಡ್ಡ ಕೂದಲಿನ ವೈವಿಧ್ಯಕ್ಕೆಗೆ ಸಿಕ್ಕ ಜಯ' ಎಂದು ಈವ್ ಬಣ್ಣಿಸಿದ್ದಾರೆ. 'ನಾವು ಮಹಿಳೆಯ ಸೌಂದರ್ಯವನ್ನು ಉದ್ದ ಕೂದಲಿನೊಂದಿಗೂ ಅಳೆಯುತ್ತೇವೆ. ಆದರೆ, ನಾನು ಗಿಡ್ಡ ಕೂದಲಿನೊಂದಿಗೆ, ಪುರುಷರಂತೆ ತಲೆಗೂದಲು ಕತ್ತರಿಸಿ, ಕ್ರಾಪ್ ಮಾಡಿದ ರೀತಿಯಲ್ಲಿ ಈ ಸ್ಪರ್ಧೆಯಲ್ಲಿ ಕಾಣಿಸಿಕೊಂಡೆ. ಪ್ರತಿ ಮಹಿಳೆಯೂ ವಿಭಿನ್ನ. ನಾವೆಲ್ಲರೂ ಅನನ್ಯರು' ಎಂದು ಈವ್ ಗಿಲ್ಲೆಸ್ ಅವರು ಶನಿವಾರ ರಾತ್ರಿ ಮಿಸ್ ಫ್ರಾನ್ಸ್ ಕಿರೀಟ ಮುಡಿಗೇರಿಸಿಕೊಂಡ ನಂತರ ಹೇಳಿದರು.

ಫ್ರಾನ್ಸ್‌ನ ಉತ್ತರ ಭಾಗದ ಡಂಕಿರ್ಕ್ ಬಳಿಯ ಹಳ್ಳಿಯೊಂದರಿಂದ ಬಂದ ಮಹಿಳೆ ಈವ್ ಗಿಲ್ಲೆಸ್. ಡಿಜಾನ್ ನಗರದಲ್ಲಿ ಸುಮಾರು 5,000 ಮಂದಿ ಸೌಂದರ್ಯ ವೀಕ್ಷಕರ ಸಮ್ಮುಖದಲ್ಲಿ ಮಿಸ್ ಫ್ರಾನ್ಸ್ ಆಗಿ ಆಯ್ಕೆಯಾದರು. ವೀಕ್ಷಕರಿಂದ ಅರ್ಧದಷ್ಟು ಮತ್ತು ಏಳು ಮಂದಿ ಮಹಿಳಾ ತೀರ್ಪುಗಾರರಿಂದ ಇನ್ನರ್ಧದಷ್ಟು ಅಂಕ ಪರಿಗಣಿಸಿ ಆಯ್ಕೆ ಮಾಡಲಾಯಿತು.



ಮಿಸ್ ಫ್ರಾನ್ಸ್ 2024 ಕಿರೀಟ ಧರಿಸಿದ ಈವ್ ಗಿಲ್ಲೆಸ್ – ಎಎಫ್‌ಪಿ ಚಿತ್ರ

ಸಂಸದ ಪ್ರತಾಪ ಸಿಂಹ ಪಾತ್ರದ ಬಗ್ಗೆ ಪ್ರಧಾನಿಗೆ ಪ್ರಶ್ನೆಗಳು ಎದುರಾಗುವ ಭೀತಿ: ಕಾಂಗ್ರೆಸ್

‘ಚರ್ಚೆಯಿಂದ ಮೋದಿ ಪಲಾಯನ’

ನವದೆಹಲಿ (ಪಿಟಿಐ): ಸಂಸತ್ತಿನ ಭದ್ರತಾ ಲೋಪದ ಮೇಲಿನ ಚರ್ಚೆಯಿಂದ ಪ್ರಧಾನಿ ನರೇಂದ್ರ ಮೋದಿ ಅವರು ತಪ್ಪಿಸಿಕೊಳ್ಳುತ್ತಿದ್ದಾರೆ ಎಂದು ಕಾಂಗ್ರೆಸ್ ಪಕ್ಷವು ಭಾನುವಾರ ಆರೋಪಿಸಿದೆ.

ಲೋಕಸಭೆಯೊಳಕ್ಕೆ ಜಿಗಿದವರಿಗೆ ಪಾಸ್ ದೊರಕಿಸಿಕೊಟ್ಟವರಲ್ಲಿ ಮೈಸೂರಿನ ಸಂಸದ, ಬಿಜೆಪಿಯ ಪ್ರತಾಪ ಸಿಂಹ ಅವರ ಪಾತ್ರದ ಬಗ್ಗೆ ಪ್ರಶ್ನೆಗಳು ಎದುರಾಗುತ್ತವೆ ಎಂಬ ಕಾರಣಕ್ಕೆ ಪ್ರಧಾನಿ ನರೇಂದ್ರ ಮೋದಿ ಹೀಗೆ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ದೂರಿದೆ.

ಭದ್ರತಾ ಲೋಪದ ವಿಚಾರವಾಗಿ ಜಗಳ ಬೇಡ ಎಂದು ಪ್ರಧಾನಿ ಮೋದಿ ಭಾನುವಾರ ಹೇಳಿದರು. ಮೋದಿ ಹೇಳಿಕೆ ನೀಡಿದ ನಂತರದಲ್ಲಿ ಕಾಂಗ್ರೆಸ್ ಈ ಮಾತು ಹೇಳಿದೆ. ‘ಡಿಸೆಂಬರ್ 13ರಂದು ಲೋಕಸಭೆಯಲ್ಲಿ ನಡೆದ ಅಸಾಮಾನ್ಯ ವಿದ್ಯಮಾನದ ವಿಚಾರವಾಗಿ ಪ್ರಧಾನಿಯವರು ಕೊನೆಗೂ ಮೌನ ಮುರಿದಿದ್ದಾರೆ. ತನಿಖೆ ಆಗಬೇಕು; ಚರ್ಚೆ ಅಲ್ಲ, ತನಿಖೆಯು ನಡೆದಿದೆ ಎಂದು ಪ್ರಧಾನಿ ಹೇಳಿದ್ದಾರೆ. ಇಂಡಿಯಾ ಮೈತ್ರಿಕೂಟದ ಪಕ್ಷಗಳು ಕೇಳುತ್ತಿರುವುದು ಹಾಗೂ ಮುಂದೆಯೂ ಕೇಳಲಿರುವುದು ಡಿಸೆಂಬರ್ 13ರಂದು ಆಗಿದ್ದೇನು ಹಾಗೂ ನಿರ್ದಿಷ್ಟವಾಗಿ ಅದು ಹೇಗೆ ಆಯಿತು ಎಂಬ ಪ್ರಶ್ನೆಯನ್ನು’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ‘ಎಕ್ಸ್’ನಲ್ಲಿ ಬರೆದಿದ್ದಾರೆ.

ಮೊಬೈಲ್ ಫೋನ್ ಸುಟ್ಟದ್ದ ಆರೋಪಿಗಳು

ನವದೆಹಲಿ (ಪಿಟಿಐ): ಲೋಕಸಭೆಯಲ್ಲಿ ನಡೆದ ಭದ್ರತಾ ಲೋಪ ಪ್ರಕರಣದ ಆರೋಪಿಗಳು ಸಾಕ್ಷ್ಯವನ್ನು ನಾಶಪಡಿಸುವ ಉದ್ದೇಶದಿಂದ ಮೊಬೈಲ್ ಫೋನ್‌ಗಳನ್ನು ಸುಟ್ಟುಹಾಕಿದ್ದರು. ಮೊಬೈಲ್ ಫೋನ್‌ನ ಸುಟ್ಟ ಸ್ಥಿತಿಯಲ್ಲಿದ್ದ ಕೆಲವು ಚೂರುಗಳನ್ನು ಪೊಲೀಸರು ರಾಜಸ್ಥಾನದ ನಾಗೌರ್ ಎಂಬಲ್ಲಿ ಪತ್ತೆ ಹಚ್ಚಿ, ತಮ್ಮ ಸುಪರ್ದಿಗೆ ತೆಗೆದುಕೊಂಡಿದ್ದಾರೆ ಎಂದು ತನಿಖಾ ತಂಡದ ಅಧಿಕಾರಿಯೊಬ್ಬರು ಭಾನುವಾರ ಹೇಳಿದರು.

ಆರೋಪಿಗಳ ವಿರುದ್ಧ ಎಫ್‌ಐಆರ್‌ಗೆ ಪೊಲೀಸರು ಐಪಿಸಿಯ ಸೆಕ್ಷನ್ 201ಅನ್ನೂ (ಸಾಕ್ಷ್ಯ ನಾಶಪಡಿಸುವುದು) ಸೇರಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಇದುವರೆಗೆ ಆರು ಮಂದಿಯನ್ನು ಬಂಧಿಸಲಾಗಿದೆ. ಪ್ರಮುಖ ಸಂಚುಕೋರ ಲಲಿತ್ ಝಾ ಅವರ ಮಾಹಿತಿಯಂತೆ ಮೊಬೈಲ್ ಫೋನ್‌ನ ಚೂರುಗಳನ್ನು ಶನಿವಾರ ಪತ್ತೆ ಮಾಡಲಾಗಿದೆ. ಝಾ, ಡಿಸೆಂಬರ್ 13ರಂದು ನಡೆದ ಘಟನೆಯ ಬೆನ್ನಲ್ಲೇ ದೆಹಲಿಯಿಂದ ರಾಜಸ್ಥಾನದ ನಾಗೌರ್‌ಗೆ ಪ್ರಯಾಣಿಸಿ ಇನ್ನೊಬ್ಬ ಆರೋಪಿ ಮಹೇಶ್ ಕುಮಾವತ್ ಜತೆ ತಂಗಿದ್ದರು. ಮರುದಿನ ಇಬ್ಬರೂ ದೆಹಲಿಯ ಕರ್ತವ್ಯಪಥ ಪೊಲೀಸ್ ಠಾಣೆಯಲ್ಲಿ ಶರಣಾಗಿದ್ದರು.

ಪ್ರಕರಣದ ತನಿಖೆ ಕೈಗೆತ್ತಿಕೊಂಡಿರುವ ದೆಹಲಿ ಪೊಲೀಸ್ ವಿಶೇಷ ಘಟಕದ ತಂಡವು ಝಾ ಅವರನ್ನು ಶನಿವಾರ ನಾಗೌರ್‌ಗೆ ಕರೆದೊಯ್ದು ಮಾಹಿತಿ ಕಲೆಹಾಕಿದೆ. ಝಾ ಮತ್ತು ಕುಮಾವತ್ ಅವರು ಸಾಕ್ಷ್ಯಗಳನ್ನು ನಾಶಪಡಿಸುವ ಉದ್ದೇಶಪೂರ್ವಕವಾಗಿ ಮೊಬೈಲ್ ಫೋನ್‌ಗಳನ್ನು ಸುಟ್ಟು ಹಾಕಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

‘ಹಗುರವಾಗಿ ಪರಿಗಣಿಸಲಾಗದು’

ಒಂದನೇ ಪುಟದಿಂದ

‘ಇದು ರಾಜಕೀಯಕ್ಕೆ ಮಾತ್ರ ಸೀಮಿತವಾಗಿಲ್ಲ. ಎಲ್ಲ ರಂಗಗಳಲ್ಲಿಯೂ ಈ ಸ್ಥಿತಿಯು ಸಮಸ್ಯೆ ಸೃಷ್ಟಿಸುತ್ತಿದೆ. ಯಾವುದೇ ಕ್ಷೇತ್ರದಲ್ಲಿ ಕೆಲವರು ದೊಡ್ಡ ಹೆಸರು ಸಂಪಾದಿಸಿದರೆ, ಇತರರ ಕಡೆ ಗಮನವೇ ಹರಿಯುವುದಿಲ್ಲ. ರಾಜಕಾರಣದಲ್ಲಿಯೂ ಇದೇ ಆಗುತ್ತದೆ. ಕೆಲವು ದಶಕಗಳವರೆಗೆ ಮಾಧ್ಯಮಗಳ ಗಮನವು ದೇಶದ ಕೆಲವು ಕುಟುಂಬಗಳ ಮೇಲೆ ಮಾತ್ರ ಇತ್ತು. ಇದರಿಂದಾಗಿ, ಹೊಸಬರ ಪ್ರತಿಭೆ ಹಾಗೂ ಅವರಿಂದ ಪ್ರಯೋಜನ ಪಡೆದುಕೊಳ್ಳುವ ಸಾಧ್ಯತೆಗಳ ಬಗ್ಗೆ ಚರ್ಚೆ ಆಗುತ್ತಿರಲಿಲ್ಲ’ ಎಂದಿದ್ದಾರೆ. ‘ಹೀಗಾಗಿಯೇ, ಕೆಲವರು ನಿಮಗೆ ಹೊಸಬರಾಗಿ ಕಾಣಿಸುತ್ತಾರೆ. ಆದರೆ ವಾಸ್ತವ ಏನೆಂದರೆ, ಅವರು ಹೊಸಬರಲ್ಲ, ಅವರು ಕಷ್ಟಪಟ್ಟು ಕೆಲಸ ಮಾಡಿದ್ದಾರೆ ಹಾಗೂ ಅನುಭವ ಸಂಪಾದಿಸಿದ್ದಾರೆ’ ಎಂದಿದ್ದಾರೆ.

ಚುನಾವಣೆ ಕಾರ್ಯತಂತ್ರ ಚರ್ಚೆ

ಗುರುವಾರ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ

ನವದೆಹಲಿ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಯ ಕಾರ್ಯತಂತ್ರದ ಬಗ್ಗೆ ಚರ್ಚಿಸಲು ಮತ್ತು ಬಿಜೆಪಿಯನ್ನು ಮಣಿಸಲು ಭಿನ್ನ ರೀತಿಯ ಪ್ರಚಾರ ಅಭಿಯಾನ ರೂಪಿಸಲು ಕಾಂಗ್ರೆಸ್, ಡಿಸೆಂಬರ್ 21ರಂದು ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆ ಕರೆದಿದೆ ಎಂದು ಮೂಲಗಳು ತಿಳಿಸಿವೆ.

ಡಿಸೆಂಬರ್ 19ರಂದು ನಡೆಯಲಿರುವ ‘ಇಂಡಿಯಾ’ ಮೈತ್ರಿ ಕೂಟದ ಸಭೆಯ ಬೆನ್ನಲ್ಲೇ ಈ ಸಭೆ ಆಯೋಜನೆಯಾಗಿದೆ. 2024ರ ಲೋಕಸಭೆ ಚುನಾವಣೆಯ ಸೀಟು ಹಂಚಿಕೆ ಮತ್ತು ಪ್ರಚಾರ ಅಭಿಯಾನದ ರೂಪುರೇಷೆ ಸಿದ್ಧಪಡಿಸುವುದು ಇದರ ಉದ್ದೇಶ. ಕೇಂದ್ರ ಕಚೇರಿಯಲ್ಲಿ ನಡೆಯಲಿರುವ ಸಭೆಯ ಪ್ರಮುಖ ಅಜೆಂಡಾ ಇದಾಗಿರಲಿದೆ.

ನಿರುದ್ಯೋಗ ಮತ್ತು ಬೆಲೆ ಏರಿಕೆ ವಿಚಾರ ಮುಂದಿಟ್ಟುಕೊಂಡು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಚುನಾವಣೆಯ ಮುನ್ನ ಎರಡನೇ ಹಂತದ ಭಾರತ್ ಜೋಡೊ ಯಾತ್ರೆ ಕೈಗೊಳ್ಳುವ ಬಗ್ಗೆಯೂ ಚರ್ಚೆಯಾಗಲಿದೆ ಎಂದು ಮೂಲಗಳು ಹೇಳಿವೆ.

ಪಾದಯಾತ್ರೆ ಸೇರಿದಂತೆ ದೇಶದ ಪೂರ್ವ ಭಾಗದಿಂದ ಪಶ್ಚಿಮಕ್ಕೆ ‘ಹೈಬ್ರಿಡ್ ಮಾದರಿ’ ಯಾತ್ರೆ ಕೈಗೊಳ್ಳುವ ಚಿಂತನೆಯನ್ನು ಪಕ್ಷ ನಡೆಸಿದ್ದು, ಆ ಬಗ್ಗೆ ಶೀಘ್ರದಲ್ಲೇ ಅಂತಿಮ ತೀರ್ಮಾನ ಹೊರಬೀಳುವ ನಿರೀಕ್ಷೆಯಿದೆ. ಈಶಾನ್ಯ ರಾಜ್ಯವೊಂದರಿಂದ ಆರಂಭಿಸಿ ಗುಜರಾತ್‌ವರೆಗೆ ಯಾತ್ರೆ ನಡೆಸಲು ಕಾಂಗ್ರೆಸ್ ಬಯಸಿದೆ. ಈಚೆಗೆ ನಡೆದ ವಿಧಾನಸಭಾ ಚುನಾವಣೆಯ ಫಲಿತಾಂಶದ ವಿಶ್ಲೇಷಣೆಯೂ ಸಭೆಯಲ್ಲಿ ಆಗಲಿದೆ. ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ಹೀನಾಯ ಸೋಲು ಅನುಭವಿಸಿದ್ದ ಪಕ್ಷ, ತೆಲಂಗಾಣದಲ್ಲಿ ಮಾತ್ರ ಅಧಿಕಾರ ತನ್ನದಾಗಿಸಿಕೊಂಡಿದೆ.

ಮುಖ್ಯಾಂಶಗಳು

- ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷರಾದ ಬಳಿಕ ಮೂರನೇ ಸಿಡಬ್ಲ್ಯುಸಿ ಸಭೆ
- 2ನೇ ಹಂತದ ಭಾರತ್ ಜೋಡೊ ಯಾತ್ರೆ ಬಗ್ಗೆ ಚರ್ಚೆ ಸಾಧ್ಯತೆ

‘ಇಂಡಿಯಾ’ ಸಭೆ ನಾಳೆ

ವಿರೋಧ ಪಕ್ಷಗಳ ‘ಇಂಡಿಯಾ’ ಮೈತ್ರಿಕೂಟದ ನಾಲ್ಕನೇ ಸಭೆಯು ಡಿಸೆಂಬರ್ 19ರಂದು ಮಧ್ಯಾಹ್ನ 3 ಗಂಟೆಗೆ ದೆಹಲಿಯಲ್ಲಿ ನಡೆಯಲಿದೆ. ಲೋಕಸಭೆ ಚುನಾವಣೆಗೆ ಸೀಟು ಹಂಚಿಕೆ ಮತ್ತು ಜಂಟಿಯಾಗಿ ರ್‍ಯಾಲಿಗಳನ್ನು ಆಯೋಜಿಸುವ ಬಗ್ಗೆ ಚರ್ಚೆ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪ್ರತಿಸ್ಪರ್ಧೆ ನೀಡುವ ಸಲುವಾಗಿ ‘ನಾನಲ್ಲ, ನಾವು’ ಎಂಬ ಘೋಷಣೆಯಡಿ ಕೆಲಸ ಮಾಡುವ ನಿರ್ಧಾರವನ್ನು ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳು ತೆಗೆದುಕೊಂಡಿವೆ ಎನ್ನಲಾಗಿದೆ.

ಕಾಶಿ ತಮಿಳು ಸಂಗಮಂಗೆ ಚಾಲನೆ

ವಾರಾಣಸಿ (ಉತ್ತರಪ್ರದೇಶ) (ಪಿಟಿಐ): ಇಲ್ಲಿನ ನಮೋ ಘಾಟ್‌ನಲ್ಲಿ ತಮಿಳುನಾಡು ಮತ್ತು ಉತ್ತರಪ್ರದೇಶದ ಜನರ ನಡುವಿನ ಬಾಂಧವ್ಯ ಮತ್ತು ಸಂಸ್ಕೃತಿ ಬೆಸೆಯುವ ಉದ್ದೇಶದ ಕಾಶಿ ತಮಿಳು ಸಂಗಮಂನ ಎರಡನೇ ಆವೃತ್ತಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಚಾಲನೆ ನೀಡಿದರು.

ಅಲ್ಲದೆ, ವಾರಾಣಸಿ ಮತ್ತು ಕನ್ಯಾಕುಮಾರಿ ನಡುವೆ ಸಂಚರಿಸುವ ಕಾಶಿ ತಮಿಳ್ ಸಂಗಮಂ ಎಕ್ಸ್‌ಪ್ರೆಸ್ ರೈಲಿಗೂ ಅವರು ಇದೇ ವೇಳೆ ಹಸಿರು ನಿಶಾನೆ ತೋರಿದರು.

ಡಿಸೆಂಬರ್ 17ರಿಂದ 31ರವರೆಗೆ ನಡೆಯಲಿರುವ ಕಾಶಿ ತಮಿಳು ಸಂಗಮಮಂನಲ್ಲಿ ತಮಿಳುನಾಡು ಮತ್ತು ಪುದುಚೇರಿಯ 1,400 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಇವರೆಲ್ಲರೂ ವಾರಾಣಸಿ, ಪ್ರಯಾಗ್ ರಾಜ್ ಮತ್ತು ಅಯೋಧ್ಯೆಗೆ ಭೇಟಿ ನೀಡಲಿದ್ದಾರೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ರಾಜ್ಯದ ನಾನಾ ಭಾಗಗಳಿಂದ ‘ಗಂಗಾ’ ಹೆಸರಿನ ವಿದ್ಯಾರ್ಥಿಗಳ ತಂಡವನ್ನು ಒಳಗೊಂಡ ತಮಿಳು ನಿಯೋಗದ ಮೊದಲ ತಂಡವು ಭಾನುವಾರ ವಾರಾಣಸಿಯನ್ನು ತಲುಪಿದೆ.

ಕಾರ್ಯಕ್ರಮದಲ್ಲಿ ಭಾಗವಹಿಸಲು ಶಿಕ್ಷಕರು (ಯಮುನಾ), ವೃತ್ತಿಪರರು (ಗೋದಾವರಿ), ಆಧ್ಯಾತ್ಮಿಕ ನಾಯಕರು (ಸರಸ್ವತಿ), ರೈತರು ಮತ್ತು ಕುಶಲಕರ್ಮಿಗಳು (ನರ್ಮದಾ), ಬರಹಗಾರರು (ಸಿಂಧು) ಮತ್ತು ವ್ಯಾಪಾರಿಗಳು ಹಾಗೂ ಉದ್ಯಮಿಗಳನ್ನು (ಕಾವೇರಿ) ಒಳಗೊಂಡ ಇನ್ನೂ ಆರು ಗುಂಪುಗಳು ಇನ್ನಷ್ಟೇ ನಗರಕ್ಕೆ ಆಗಮಿಸಲಿವೆ.

ತಮಿಳುನಾಡು ಮತ್ತು ಕಾಶಿಯ ಜನರ ನಡುವೆ ಬಾಂಧವ್ಯ ಬೆಸೆಯುವುದು, ಸಾಂಸ್ಕೃತಿಕ ವಿನಿಮಯದ ಜೊತೆಗೆ ಎರಡೂ ಪ್ರದೇಶಗಳ ಕಲೆ, ಸಂಗೀತ, ಕೈಮಗ್ಗ, ಕರಕುಶಲ ವಸ್ತುಗಳು, ಪಾಕಪದ್ಧತಿಗಳು ಮತ್ತು ಇತರ ವಿಶಿಷ್ಟ ಉತ್ಪನ್ನಗಳ ಪ್ರದರ್ಶನವೂ ಕಾರ್ಯಸೂಚಿಯಲ್ಲಿದೆ. ಕಾಶಿ ತಮಿಳು ಸಂಗಮಂ ಸಾಹಿತ್ಯ, ಪ್ರಾಚೀನ ಗ್ರಂಥಗಳು, ತತ್ವಶಾಸ್ತ್ರ, ಅಧ್ಯಾತ್ಮ, ಸಂಗೀತ, ನೃತ್ಯ, ನಾಟಕ, ಯೋಗ ಮತ್ತು ಆಯುರ್ವೇದ ಒಳಗೊಂಡ ಉಪನ್ಯಾಸಗಳು ಇರಲಿವೆ. ನಾವೀನ್ಯತೆ, ವ್ಯಾಪಾರ, ಜ್ಞಾನ ವಿನಿಮಯ, ಶಿಕ್ಷಣ ಮತ್ತು ಮುಂದಿನ ಪೀಳಿಗೆ ತಂತ್ರಜ್ಞಾನದ ಕುರಿತು ವಿಚಾರಣ ಸಂಕಿರಣಗಳು ನಡೆಯಲಿವೆ.



ಕಾಶಿ ತಮಿಳು ಸಂಗಮಂ ಎರಡನೇ ಆವೃತ್ತಿಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ತಮಿಳುನಾಡಿನ ‘ಗಂಗಾ’ ಹೆಸರಿನ ವಿದ್ಯಾರ್ಥಿಗಳ ತಂಡ ಭಾನುವಾರ ವಾರಾಣಸಿಗೆ ಆಗಮಿಸಿತು — ಪಿಟಿಐ ಚಿತ್ರ

ಪ್ರಾಂಶುಪಾಲೆ, ಶಿಕ್ಷಕ ಬಂಧನ

ಒಂದನೇ ಪುಟದಿಂದ

‘ತಲೆಮರೆಸಿಕೊಂಡಿರುವವರ ಪತ್ತೆಗೆ ಶೋಧ ನಡೆದಿದೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು ಒತ್ತಡ, ಪ್ರಭಾವಕ್ಕೆ ಮಣಿಯುವುದಿಲ್ಲ. ವಸತಿ ಶಾಲೆಗೆ ತೆರಳಿ ಪರಿಶೀಲಿಸಿದ್ದೇನೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ‘ಪ್ರಜಾವಾಣಿ’ಗೆ ತಿಳಿಸಿದರು.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಕಾರ್ಯನಿರ್ವಾಹಕ ನಿರ್ದೇಶಕ ನವೀನ್ ಕುಮಾರ್ ರಾಜು ಹಾಗೂ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಆರ್. ಶ್ರೀನಿವಾಸ್ ಶಾಲೆಗೆ ಭೇಟಿ ನೀಡಿ ಶಿಕ್ಷಕರು ಹಾಗೂ ಮಕ್ಕಳಿಂದ ಮಾಹಿತಿ ಕಲೆಹಾಕಿದರು.

‘ಮಕ್ಕಳಿಂದ ಈ ಮೂವರು ಸಿಬ್ಬಂದಿಯು ಶಾಲಾ ಆವರಣ, ಇಂಗು ಗುಂಡಿ ಸ್ವಚ್ಛಗೊಳಿಸಿದ್ದಾರೆ. ಶಿಕ್ಷಕರ ನಡುವೆ ಸಮನ್ವಯ ಕೊರತೆ, ಅಸಮರ್ಪಕ ನಿರ್ವಹಣೆ ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಈ ಕ್ರಮ ವಹಿಸಲಾಗಿದೆ’ ಎಂದು ಅಮಾನತು ಆದೇಶದಲ್ಲಿ ತಿಳಿಸಲಾಗಿದೆ.

‘ಮೆನು ಚಾರ್ಟ್ ಪ್ರಕಾರ ಮಕ್ಕಳಿಗೆ ತಿಂಡಿ, ಆಹಾರ ನೀಡುತ್ತಿಲ್ಲ. ಅತಿಥಿ ಶಿಕ್ಷಕ ಅಭಿಷೇಕ್, ಮಕ್ಕಳಿಗೆ ಹೊಡೆದು, ದೈಹಿಕ ಹಿಂಸೆ ನೀಡಿರುವುದು ಕಂಡುಬಂದಿದೆ. ಸ್ವಚ್ಛತಾ ಸಿಬ್ಬಂದಿ ಕಲಾವತಿ, ಮಕ್ಕಳನ್ನು ಶಾಲಾ ಆವರಣ, ಇಂಗು ಗುಂಡಿ ಸ್ವಚ್ಛತೆಗೆ ಬಳಸಿಕೊಂಡಿದ್ದಾರೆ. ಪ್ರಾಂಶುಪಾಲರು ಅದನ್ನು ಗಮನಿಸಿ ಕಲಾವತಿ ಹಾಗೂ ವಿದ್ಯಾರ್ಥಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ಕಾಯಂ ಹಾಗೂ ಅತಿಥಿ ಶಿಕ್ಷಕರ ನಡುವೆ ಹೊಂದಾಣಿಕೆ ಇಲ್ಲ. ಮುನಿಯಪ್ಪ ಹಾಗೂ ಅತಿಥಿ ಶಿಕ್ಷಕ ಮಾರೇಶ್ ಅವರು ಫೋಟೊ ಹಾಗೂ ವಿಡಿಯೊ ತೆಗೆದು ಹಂಚಿಕೊಂಡಿರುವುದು ಗೊತ್ತಾಗಿದೆ’ ಎಂದು ತನಿಖಾಧಿಕಾರಿ ಹೇಳಿದ್ದಾರೆ.

ಆದರೆ, ವಸತಿ ನಿಲಯದಲ್ಲಿ ಮಕ್ಕಳ ಮೇಲೆ ನಡೆಯುತ್ತಿದ್ದ ಹಿಂಸೆ ಹಾಗೂ ಇತರ ದೌರ್ಜನ್ಯ ವಿರೋಧಿಸಿದ್ದ ಮುನಿಯಪ್ಪ ಅವರನ್ನು ಅಮಾನತುಗೊಳಿಸಿರುವುದಕ್ಕೆ ಪೋಷಕರಿಂದ ಆಕ್ಷೇಪ ವ್ಯಕ್ತವಾಗಿದೆ.

ನ್ಯಾಯಾಧೀಶ, ಅಧಿಕಾರಿಗಳ ಭೇಟಿ: ಕೋಲಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ನ್ಯಾಯಾಧೀಶ ಸುನಿಲ್ ಎಸ್. ಹೊಸಮನಿ ಕೂಡ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಭೇಟಿ ನೀಡಿದ್ದರು. ಮಕ್ಕಳೊಂದಿಗೆ ಪ್ರತ್ಯೇಕ ಮಾತುಕತೆ ನಡೆಸಿ ಅಡುಗೆ ಕೋಣೆ, ಮಕ್ಕಳ ವಾಸ್ತವ್ಯ ಕೊಠಡಿ ಹಾಗೂ ಹಾಸ್ಟೆಲ್‌ನ ವಿವಿಧೆಡೆ ಪರಿಶೀಲಿಸಿದರು.

ಜಿಲ್ಲಾ ಪಂಚಾಯಿತಿ ಸಿಇಒ ಪದ್ಮಾ ಬಸವಂತಪ್ಪ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಆರ್.ಶ್ರೀನಿವಾಸ್, ಮಾಲೂರು ತಹಶೀಲ್ದಾರ್ ರಮೇಶ್, ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಮಾಲೂರು ಎನ್. ವೆಂಕಟರಾಂ, ಸಫಾಯಿ ಕರ್ಮಚಾರಿ ರಾಜ್ಯ ಸಮಿತಿ ಸದಸ್ಯೆ ಪದ್ಮಾ ವಸತಿ ನಿಲಯಕ್ಕೆ ಭೇಟಿ ನೀಡಿ ಶಿಕ್ಷಕರನ್ನು ತರಾಟೆಗೆ ತೆಗೆದುಕೊಂಡರು.



ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಕ್ರೈಸ್ ಕಾರ್ಯನಿರ್ವಾಹಕ ನಿರ್ದೇಶಕ ನವೀನ್ ಕುಮಾರ್ ರಾಜು ಅವರಿಗೆ ಪೋಷಕರು, ಮಕ್ಕಳು ದೂರು ನೀಡಿದರು

ಮಲದ ಗುಂಡಿ ತೋರಿಸಿದ ವಿದ್ಯಾರ್ಥಿಗಳು

ವಸತಿ ಶಾಲೆಯ ಆವರಣದ ಮಲದ ಗುಂಡಿಯನ್ನು ವಿದ್ಯಾರ್ಥಿಗಳೇ ಮಾಧ್ಯಮದವರಿಗೆ ತೋರಿಸಿದರು.ಈ ಗುಂಡಿಯೊಳಗೆ ಐದಾರು ಮಕ್ಕಳನ್ನು ಇಳಿಸಿ ಸ್ವಚ್ಛಗೊಳಿಸಲಾಗಿತ್ತು.

ವಸತಿ ಶಾಲೆಯ ಶಿಕ್ಷಕರಿಂದ ಕಿರುಕುಳ, ಕಳಪೆ ಆಹಾರ, ಮಲದ ಗುಂಡಿ ಸ್ವಚ್ಛಗೊಳಿಸಿದ ವಿಚಾರವನ್ನು ಪೈಪೋಟಿಗೆ ಬಿದ್ದು ಹೇಳಿಕೊಂಡರು.

‘ದಿನ ಹೊಡೆಯುತ್ತಾರೆ, ಊಟ ಸರಿ ಇಲ್ಲವೆಂದು ಹೇಳಿದರೆ ಕೆಟ್ಟದಾಗಿ ಬೈಯುತ್ತಾರೆ. ಯಾರಿಗಾದರೂ ಹೇಳಿದರೆ ಶಾಲೆ ಬಿಟ್ಟು ಕಳುಹಿಸುವುದಾಗಿ ಹೆದರಿಸುತ್ತಾರೆ’ ಎಂದು ವಿದ್ಯಾರ್ಥಿಗಳು ನೋವು ತೋಡಿಕೊಂಡರು.

> ಮಕ್ಕಳ ಮೇಲಿನ ದೌರ್ಜನ್ಯ ಹೇಯ ಘಟನೆ. ಪರಿಶಿಷ್ಟ ಸಮುದಾಯದವರೇ ಶೋಷಣೆಗೆ ಗುರಿಯಾಗುತ್ತಿರುವುದು ಆತಂಕಕಾರಿ
>
> **ಬಿ.ವೈ.ವಿಜಯೇಂದ್ರ**, ರಾಜ್ಯ ಬಿಜೆಪಿ ಅಧ್ಯಕ್ಷ

ವಿಷ್ಣುವರ್ಧನ್ ಪುಣ್ಯಭೂಮಿಗಾಗಿ ಬೃಹತ್ ಪ್ರತಿಭಟನೆ

ಒಂದನೇ ಪುಟದಿಂದ

ಒಕ್ಕೂಟದ ಮುಖಂಡ ವೀರಕಪುತ್ರ ಶ್ರೀನಿವಾಸ್ ಮಾತನಾಡಿ. ‘ಕನ್ನಡ ಚಿತ್ರರಂಗದ ಮೇರುನಟ ವಿಷ್ಣುವರ್ಧನ್. ಅಭಿಮಾನ್ ಸ್ಟುಡಿಯೊದಲ್ಲಿ ಅವರ ಪುಣ್ಯಭೂಮಿ ಇದೆ. ಅಭಿಮಾನಿಗಳು ಪುಣ್ಯಭೂಮಿಗೆ ಹೋಗಲು ಸ್ಟುಡಿಯೊ ಮಾಲೀಕರು ನಿರ್ಬಂಧ ವಿಧಿಸುತ್ತಿದ್ದಾರೆ. ವಿಷ್ಣುವರ್ಧನ್ ಅವರ ಜನ್ಮದಿನ ಮತ್ತು ಪುಣ್ಯಸ್ಮರಣೆ ಆಚರಿಸಲು ತೊಂದರೆ ಉಂಟಾಗುತ್ತಿದೆ’ ಎಂದು ದೂರಿದರು.

‘ಮೈಸೂರಿನಲ್ಲಿ ವಿಷ್ಣುವರ್ಧನ್ ಅವರ ಸ್ಮಾರಕವಿದೆ. ಬೆಂಗಳೂರಿನ ಅಭಿಮಾನ್ ಸ್ಟುಡಿಯೊದಲ್ಲಿಯೇ ವಿಷ್ಣುವರ್ಧನ್ ಇರುವುದಾಗಿ ಅಭಿಮಾನಿಗಳು ನಂಬಿದ್ದಾರೆ. ಜನ್ಮದಿನ ಮತ್ತು ಪುಣ್ಯಸ್ಮರಣೆ ದಿನದಂದು ಸಾವಿರಾರು ಮಂದಿ ಸ್ಟುಡಿಯೊಗೆ ಬಂದು ಹೋಗುತ್ತಿದ್ದಾರೆ. ಅಂತ್ಯಸಂಸ್ಕಾರವಾದ ಸ್ಥಳದಲ್ಲಿಯೇ ಪುಣ್ಯಭೂಮಿ ಅಭಿವೃದ್ಧಿಪಡಿಸಬೇಕು ಎಂಬುದು ನಮ್ಮೆಲ್ಲರ ಒತ್ತಾಯ. ನಮ್ಮ ಈ ಬೇಡಿಕೆ ಈಡೇರಿಸುವವರೆಗೂ ಹೋರಾಟ ಮುಂದುವರಿಯಲಿದೆ’ ಎಂದು ಹೇಳಿದರು.

> ಡಾ. ವಿಷ್ಣು ಅಪ್ಪಾಜಿ ಸ್ಮಾರಕ ಕುರಿತು ನನ್ನದು ಅಂದು - ಇಂದು ಒಂದೇ ನಿಲುವು. ಮೈಸೂರಿನಲ್ಲಿ ಸ್ಮಾರಕವಾದರೂ, ಅಂತ್ಯಸಂಸ್ಕಾರಗೊಂಡ ಸ್ಥಳದಲ್ಲಿ ಪುಣ್ಯಭೂಮಿ ಆಗಬೇಕು. ನನ್ನಿಂದಾಗುವ ಎಲ್ಲವನ್ನೂ ಪುಣ್ಯಭೂಮಿಗಾಗಿ ಮಾಡುವೆ
>
> – **ಕಿಚ್ಚ ಸುದೀಪ್,** ನಟ
>
> ವಿಷ್ಣು ಸರ್ ಪುಣ್ಯಭೂಮಿಗೆ ರಾಜಧಾನಿಯಲ್ಲಿ ಅಂಗೈಯಗಲ ಜಾಗವಿಲ್ಲವೆಂಬುದನ್ನು ಯಾಕೋ ಅರಗಿಸಿಕೊಳ್ಳಲಾಗುತ್ತಿಲ್ಲ. ಸರ್ಕಾರ ಕೂಡಲೇ ಡಾ. ವಿಷ್ಣು ಸರ್ ಪುಣ್ಯಭೂಮಿ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದು ವಿನಂತಿಸುವೆ.
>
> - **ಡಾಲಿ ಧನಂಜಯ,** ನಟ
>
> ಇದು ಬರೀ ಸಮಾಧಿಯ ವಿಷಯವಲ್ಲ. ಎಲ್ಲ ಅಭಿಮಾನಿಗಳಿಗಾಗುವ ನೋವು. ಬೇಗ ಸರ್ಕಾರ ಇದನ್ನು ಬಗೆಹರಿಸಲಿ
>
> – **ನೀನಾಸಂ ಸತೀಶ್,** ನಟ

ಕೇರಳದಲ್ಲಿ ಶಾಂತಿ ಕದಡಲು ರಾಜ್ಯಪಾಲರ ಯತ್ನ: ಸಿ.ಎಂ



ಪಿಣರಾಯಿ ವಿಜಯನ್

ಪತ್ತನಂತಿಟ್ಟ (ಕೇರಳ) (ಪಿಟಿಐ): ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಪ್ರಚೋದನಕಾರಿ ಹೇಳಿಕೆಗಳನ್ನು ನೀಡುವ ಮೂಲಕ ರಾಜ್ಯದಲ್ಲಿ ಶಾಂತಿಯನ್ನು ಕದಡಲು ಉದ್ದೇಶಪೂರ್ವಕವಾಗಿ ಪ್ರಯತ್ನಿಸುತ್ತಿದ್ದಾರೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಆರೋಪಿಸಿದ್ದಾರೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯಪಾಲ ಆರೀಫ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಪ್ರತಿಭಟನಾನಿರತ ಎಸ್‌ಎಫ್‌ಐ ಕಾರ್ಯಕರ್ತರನ್ನು ರಾಜ್ಯಪಾಲರು ‘ಕ್ರಿಮಿನಲ್’ ಎಂದು ಉಲ್ಲೇಖಿಸಿದ್ದಾರೆ ಎಂದು ಸುದ್ದಿಗಾರರು ಗಮನಸೆಳೆದಾಗ, ‘ಮನಸ್ಸಿಗೆ ಅನ್ನಿಸಿದ್ದನ್ನು ಹೇಳುವ ಹಂತವನ್ನು ರಾಜ್ಯಪಾಲ ಆರೀಫ್ ಅವರು ತಲುಪಿದ್ದಾರೆ’ ಎಂದು ವಿಜಯನ್ ಟೀಕಿಸಿದರು.

‘ಕೇರಳದ ರಾಜ್ಯಪಾಲ ಎಂಬುದನ್ನೇ ಅವರು ಮರೆತಂತಿದೆ. ರಾಜ್ಯಪಾಲರು ರಾಜ್ಯದಲ್ಲಿ ಶಾಂತಿ ಕದಡಲು ಯತ್ನಿಸುತ್ತಿದ್ದಾರೆ ಎಂದು ಹಿಂದೆಯೂ ಹೇಳಿದ್ದೆ. ಅದನ್ನು ರಾಜ್ಯಪಾಲರು ನಂತರದ ತಮ್ಮ ಕ್ರಿಯೆಗಳ ಮೂಲಕ ಸಾಬೀತುಪಡಿಸುತ್ತಿದ್ದಾರೆ‘ ಎಂದು ಹೇಳಿದರು.

’ಯಾವುದೇ ವಿಷಯವಿರಲಿ. ಆದಷ್ಟು ಪ್ರಚೋದನೆಗೆ ಒಳಪಡಿಸಲು ಅವರು ಯತ್ನಿಸುತ್ತಾರೆ. ಎಸ್‌ಎಫ್‌ಐಯ ಕಾರ್ಯಕರ್ತರನ್ನು ಕ್ರಿಮಿನಲ್, ಗೂಂಡಾಗಳು ಎನ್ನುತ್ತಾರೆ. ಪ್ರತಿಭಟನಕಾರರ ವಿರುದ್ಧ ಕ್ರೂರ ಪದ ಬಳಕೆ ಹೇಗೆ ಸಾಧ್ಯ‘ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪ್ರಶ್ನಿಸಿದರು.

ಅದಾನಿ ಸಮೂಹಕ್ಕೆ ಧಾರಾವಿ ಅಭಿವೃದ್ಧಿ ಹೊಣೆ: ‘ಕೈ’ ತರಾಟೆ

ನವದೆಹಲಿ (ಪಿಟಿಐ): ಮುಂಬೈನ ಧಾರಾವಿಯ ಮರು ಅಭಿವೃದ್ಧಿ ಯೋಜನೆಯನ್ನು ಅದಾನಿ ಸಮೂಹಕ್ಕೆ ಒಪ್ಪಿಸಿರುವರ ರಾಜ್ಯ ಸರ್ಕಾರದ ನಿಲುವನ್ನು ಪ್ರತಿಪಕ್ಷಗಳು ತೀವ್ರವಾಗಿ ಟೀಕಿಸಿವೆ.‘ಆಧುನಿಕ ಭಾರತದಲ್ಲಿ ಅತಿದೊಡ್ಡ ಲೂಟಿ ಮುಂದುವರಿದಿದೆ’ ಎಂದೂ ಕಾಂಗ್ರೆಸ್ ಆರೋಪಿಸಿದೆ.

ಜನರಿಗೆ ಹೊರೆಯಾಗುವಂತೆ ಅದಾನಿ ಸಮೂಹ ಹೇಗೆ ಇನ್ನಷ್ಟು ಶ್ರೀಮಂತ ವಾಗುತ್ತಿದೆ ಎಂಬುದಕ್ಕೆ ಇದೊಂದು ಉದಾಹರಣೆ ಎಂದು ಕಾಂಗ್ರೆಸ್ ಟೀಕಿಸಿದೆ. ರಾಜ್ಯ ಸರ್ಕಾರದ ನಿರ್ಧಾರವನ್ನು ಖಂಡಿಸಿ ಪಕ್ಷ ಶನಿವಾರ ವಷ್ಟೇ ಪ್ರತಿಭಟನೆಯನ್ನೂ ನಡೆಸಿತ್ತು.

ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು, ‘ಇದು, ಅಭಿವೃದ್ಧಿ ಹಕ್ಕುಗಳನ್ನು ವರ್ಗಾಯಿಸುವ ವಿಶ್ವದ ಅತಿದೊಡ್ಡ ಹಗರಣ’ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಅತ್ಯಾಚಾರ ಆರೋಪ: ಸಜ್ಜನ್ ಜಿಂದಾಲ್ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ

ದುಬೈನಲ್ಲಿ ನಡೆದ ಕ್ರಿಕೆಟ್ ಪಂದ್ಯವೊಂದರ ವೇಳೆ ಮಹಿಳೆಯು ಜಿಂದಾಲ್ ಅವರನ್ನು ಮೊದಲ ಬಾರಿ ಭೇಟಿಯಾಗಿದ್ದರು. ‘2022ರ ಜನವರಿ 24ರಂದು ಮುಂಬೈನ ಜೆಎಸ್‌ಡಬ್ಲ್ಯು ಸಮೂಹದ ಕೇಂದ್ರ ಕಚೇರಿಯಲ್ಲಿರುವ ಪೆಂಟ್‌ಹೌಸ್‌ನಲ್ಲಿ ಜಿಂದಾಲ್ ಅವರು ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ’ ಎಂದು ಮಹಿಳೆ ದೂರಿನಲ್ಲಿ ಹೇಳಿದ್ದಾರೆ. ಮದುವೆಯಾಗುವುದಾಗಿ ನಂಬಿಸಿ ಸ್ನೇಹ ಬೆಳೆಸಿದ್ದರು ಎಂದೂ ಹೇಳಿದ್ದಾರೆ.

ಸಂತ್ರಸ್ತೆಯು 2023ರ ಫೆಬ್ರುವರಿ 16ರಂದು ದೂರು ನೀಡಿದ್ದರೂ, ಬಿಕೆಸಿ ಠಾಣೆಯಲ್ಲಿ ತಡವಾಗಿ ಅಂದರೆ, ಡಿಸೆಂಬರ್ 13ರಂದು ಐಪಿಸಿಯ ಸೆಕ್ಷನ್ 376 (ಅತ್ಯಾಚಾರ), 354 (ಮಹಿಳೆಯರ ಗೌರವಕ್ಕೆ ಧಕ್ಕೆ) ಹಾಗೂ 506ರ (ಬೆದರಿಕೆ) ಅಡಿಯಲ್ಲಿ ಎಫ್‌ಐಆರ್ ದಾಖಲಾಗಿದೆ. ಈ ಪ್ರಕರಣದ ಬಗ್ಗೆ ಮುಂಬೈ ಪೊಲೀಸರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಈ ಸಂಬಂಧ ಪ್ರಕಟಣೆ ಹೊರಡಿಸಿರುವ ಜಿಂದಾಲ್, ತಮ್ಮ ಮೇಲಿನ ಆರೋಪ ಸುಳ್ಳು ಮತ್ತು ಆಧಾರರಹಿತ ಎಂದು ಹೇಳಿದ್ದಾರೆ. ‘ತನಿಖೆಗೆ ಸಂಪೂರ್ಣ ಸಹಕಾರ ನೀಡಲು ಬದ್ಧನಾಗಿದ್ದೇನೆ. ತನಿಖೆ ಪ್ರಗತಿಯಲ್ಲಿರುವುದರಿಂದ, ಈ ಹಂತದಲ್ಲಿ ಹೆಚ್ಚಿನ ಪ್ರತಿಕ್ರಿಯೆ ನೀಡಲು ಬಯಸುವುದಿಲ್ಲ. ಕುಟುಂಬದ ಖಾಸಗಿತನವನ್ನು ಗೌರವಿಸಲು ನಾವು ವಿನಂತಿಸುತ್ತೇವೆ’ ಎಂದಿದ್ದಾರೆ.

ಏಕ ಕಾಲದಲ್ಲಿ ನಾಲ್ಕು ಗುರಿ ಭೇದಿಸಿದ ‘ಆಕಾಶ್’

ನವದೆಹಲಿ (ಪಿಟಿಐ): 25 ಕಿ.ಮೀ. ವ್ಯಾಪ್ತಿಯಲ್ಲಿ ಏಕ ಕಾಲದಲ್ಲಿ ನಾಲ್ಕು ವೈಮಾನಿಕ ಗುರಿಗಳನ್ನು ಹೊಡೆದುರುಳಿಸುವ ಆಕಾಶ್ ಕ್ಷಿಪಣಿ ವ್ಯವಸ್ಥೆಯ ಸಾಮರ್ಥ್ಯವನ್ನು ಭಾರತ ಪ್ರದರ್ಶಿಸಿದೆ ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಭಾನುವಾರ ಹೇಳಿದೆ.

‘ಒಮ್ಮೆಗೆ ಉಡಾಯಿಸುವ ಕ್ಷಿಪಣಿ ವ್ಯವಸ್ಥೆ (ಸಿಂಗಲ್ ಫೈರಿಂಗ್ ಯುನಿಟ್) ಬಳಸಿ ಕಮಾಂಡ್ ಮಾರ್ಗದರ್ಶನದ ಮೂಲಕ 25 ಕಿ.ಮೀ. ವ್ಯಾಪ್ತಿಯಲ್ಲಿ ಮೊದಲೇ ನಿಗದಿಪಡಿಸಿದ್ದ ನಾಲ್ಕು ವೈಮಾನಿಕ ಗುರಿಗಳನ್ನು ಏಕಕಾಲದಲ್ಲಿ ಭೇದಿಸುವ ಸಾಮರ್ಥ್ಯ ಪ್ರದರ್ಶಿಸಲಾಯಿತು. ಈ ಪರೀಕ್ಷೆಯನ್ನು ಭಾರತೀಯ ವಾಯು ಪಡೆಯು ಆಕಾಶ್ ಕ್ಷಿಪಣಿ ವ್ಯವಸ್ಥೆ ಬಳಸಿ ನಡೆಸಿತು. ಇಂತಹ ಸಾಮರ್ಥ್ಯ ಹೊಂದಿದ ಮೊದಲ ದೇಶವಾಗಿ ಭಾರತ ಹೊರಹೊಮ್ಮಿದೆ’ ಎಂದು ಡಿಆರ್‌ಡಿಒ ‘ಎಕ್ಸ್’ ಪೋಸ್ಟ್‌ನಲ್ಲಿ ಭಾನುವಾರ ತಿಳಿಸಿದೆ.

ಭಾರತೀಯ ವಾಯುಪಡೆ ಡಿ.12ರಂದು ನಡೆಸಿದ ‘ಅಸ್ತ್ರಶಕ್ತಿ’ ಸೇನಾ ಸಮರಾಭ್ಯಾಸದಲ್ಲಿ ಸ್ವದೇಶಿ ಕ್ಷಿಪಣಿ ವ್ಯವಸ್ಥೆಯ ಸಾಮರ್ಥ್ಯ ಪ್ರದರ್ಶಿಸಲಾಯಿತು.

ನೌಕಾತುಕಡಿ ಹೊಂದಲು ಬಿಎಸ್‌ಎಫ್ ಚಿಂತನೆ

ಕೋಲ್ಕತ್ತ (ಪಿಟಿಐ): ಭಾರತ–ಬಾಂಗ್ಲಾದೇಶ ಗಡಿಯಲ್ಲಿ ಕಳ್ಳಸಾಗಣೆ ಮತ್ತು ಒಳನುಸುಳುವಿಕೆ ತಡೆಯಲು ಸುಮಾರು 1,100 ಯೋಧರ ನೌಕಾತುಕಡಿ ಹೊಂದಲು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ತೀರ್ಮಾನಿಸಿದೆ.

ಇದರ ಜೊತೆಗೆ 40 ಆಧುನಿಕ ಡ್ರೋನ್‌ಗಳು ಹಾಗೂ 12–14 ಸರ್ವಋತು ವಾಹನಗಳು (ಎಟಿವಿ) ಬಿಎಸ್‌ಎಫ್‌ನ ಸಾಮರ್ಥ್ಯ ವೃದ್ಧಿ ಭಾಗವಾಗಿ ಸೇರ್ಪಡೆ ಆಗಲಿವೆ. ಗಡಿಗೆ ಹೊಂದಿಕೊಂಡಂತೆ ಇರುವ ಸುಂದರಬನ ವಲಯದಲ್ಲಿ ಗಸ್ತು ಬಲಪಡಿಸುವುದು ಇದರ ಗುರಿಯಾಗಿದೆ.

‘ಸೂರತ್ ಡೈಮಂಡ್ ಬೌರ್ಸ್’ ಉದ್ಘಾಟಿಸಿದ ಪ್ರಧಾನಿ ಮೋದಿ

ವಜ್ರಾಭರಣ ವಹಿವಾಟು ಕೇಂದ್ರ ಆರಂಭ

ಸೂರತ್ (ಪಿಟಿಐ): ವಿಶ್ವದಲ್ಲಿಯೇ ಅತಿದೊಡ್ಡದಾದ, ಆಧುನಿಕ ಶೈಲಿಯ ಅಂತರರಾಷ್ಟ್ರೀಯ ವಜ್ರ ಮತ್ತು ಚಿನ್ನ ವಹಿವಾಟು ಕೇಂದ್ರ ‘ಸೂರತ್ ಡೈಮಂಡ್ ಬೌರ್ಸ್’ (ಎಸ್‌ಡಿಬಿ) ಅನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಇಲ್ಲಿ ಉದ್ಘಾಟಿಸಿದರು.

ಸೂರತ್‌ನ ಖಾಜೋದ್ ಗ್ರಾಮದಲ್ಲಿ ಎಸ್‌ಡಿಬಿ ನಿರ್ಮಾಣವಾಗಿದೆ. ಕಟ್ಟಡದ ಒಟ್ಟು ನಿರ್ಮಾಣ ವಿಸ್ತೀರ್ಣ 67 ಲಕ್ಷ ಚದರ ಅಡಿ. 4,500 ಮಳಿಗೆಗಳಿವೆ. ಇದು ಕಚ್ಚಾ, ಸಿದ್ಧ ವಜ್ರ ಮತ್ತು ಚಿನ್ನಾಭರಣಗಳ ವಹಿವಾಟು ಕೇಂದ್ರವಾಗಿರಲಿದೆ.


ಎಸ್‌ಡಿಬಿ ಉದ್ಘಾಟಿಸಿದ ಪ್ರಧಾನಿಯವರು, ‘ಸೂರತ್‌ನ ಹಿರಿಮೆಗೆ ಹೊಸ ವಜ್ರವೊಂದು ಸೇರ್ಪಡೆಯಾಗಿದೆ. ಆದರೆ, ಇದು ಸಾಮಾನ್ಯವಾದುದಲ್ಲ. ವಿಶ್ವದಲ್ಲಿಯೇ ಅತ್ಯುತ್ತಮವಾದುದು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತಲಾ 15 ಮಹಡಿಗಳ ಒಟ್ಟು 9 ಸಂಕೀರ್ಣಗಳಿವೆ. ಪ್ರತಿ ಕಚೇರಿಯ ವಿಸ್ತೀರ್ಣವು ಕನಿಷ್ಠ 300 ಚದರ ಅಡಿಯಿಂದ 1 ಲಕ್ಷ ಚದರ ಅಡಿಯವರೆಗೂ ಇದೆ. ಡ್ರೀಮ್ ಸಿಟಿ ಯೋಜನೆಯಡಿ 35.54 ಎಕರೆ ಭೂಮಿಯಲ್ಲಿ ಈ ಸಂಕೀರ್ಣಗಳನ್ನು ನಿರ್ಮಿಸಲಾಗಿದೆ.

ಆಭರಣಗಳ ಆಮದು– ರಫ್ತು ವಹಿವಾಟಿಗೆ ನೆರವಾಗಲು ಅತ್ಯಾಧುನಿಕ ಕಸ್ಟಮ್ಸ್ ಕ್ಲಿಯರೆನ್ಸ್ ಹೌಸ್ ಇದೆ. ಆಭರಣಗಳ ಬಿಡಿ ಮಾರಾಟಕ್ಕೆ ಜ್ಯುವೆಲ್ಲರಿ ಮಾಲ್ ಇದೆ. ಸುರಕ್ಷತಾ ಕ್ರಮಗಳಿರುವ ಅಂತರರಾಷ್ಟ್ರೀಯ ಬ್ಯಾಂಕಿಂಗ್ ವಹಿವಾಟು ಸೌಲಭ್ಯವಿದೆ.

ಹಿಂದೆ ಮುಂಬೈನಲ್ಲಿ ನೆಲೆಹೊಂದಿದ್ದ ವ್ಯಾಪಾರಿಗಳು ಸೇರಿದಂತೆ ಹಲವು ಪ್ರಮುಖ ವಜ್ರದ ವ್ಯಾಪಾರಿಗಳು ಈಗಾಗಲೇ ಎಸ್‌ಡಿಬಿಯಲ್ಲಿ ಮಳಿಗೆ ಹೊಂದಿದ್ದು, ವಹಿವಾಟು ಆರಂಭಿಸಿದ್ದಾರೆ ಎಂದು ಎಸ್‌ಡಿಬಿಯ ಮಾಧ್ಯಮ ಸಂಯೋಜಕ ದಿನೇಶ್ ನವದೀಯ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಎಸ್‌ಡಿಬಿ ಅನ್ನು ‘ಡ್ರೀಮ್’ ಸಿಟಿ (ಡೈಮಂಡ್ ರೀಸರ್ಚ್ ಅಂಡ್ ಮರ್ಸಂಟೈಲ್) ಯೋಜನೆಯ ಭಾಗವಾಗಿ ನಿರ್ಮಿಸಲಾಗಿದೆ. ಗುಜರಾತ್‌ನ ಮಾಜಿ ಮುಖ್ಯಮಂತ್ರಿ ಆನಂದಿಬೆನ್ ಪಟೇಲ್ ಅವರು ಫೆಬ್ರುವರಿ 2015ರಲ್ಲಿ ಶಂಕುಸ್ಥಾಪನೆ ನೆರವೇರಿಸಿದ್ದರು.



ಸೂರತ್‌ನಲ್ಲಿ ಅಂತರರಾಷ್ಟ್ರೀಯ ವಜ್ರ ಮತ್ತು ಚಿನ್ನ ವಹಿವಾಟು ಕೇಂದ್ರವನ್ನು ಪ್ರಧಾನಿ ನರೇಂದ್ರ ಮೋದಿ ವೀಕ್ಷಿಸಿದರು — ಪಿಟಿಐ ಚಿತ್ರ

‘ನವಭಾರತದ ಶಕ್ತಿಯ ದ್ಯೋತಕ’

ಸೂರತ್ (ಪಿಟಿಐ): ‘ಸೂರತ್ ಡೈಮಂಡ್ ಬೌರ್ಸ್’ (ಎಸ್‌ಡಿಬಿ) ಅಂತರರಾಷ್ಟ್ರೀಯ ವಜ್ರಾಭರಣಗಳ ವಹಿವಾಟು ಕೇಂದ್ರವು ನವಭಾರತದ ಶಕ್ತಿ ಮತ್ತು ಬದ್ಧತೆಯ ದ್ಯೋತಕವಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಸೂರತ್‌ನ ವಜ್ರಾಭರಣ ಉದ್ಯಮವು ಈಗಾಗಲೇ 8 ಲಕ್ಷ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದೆ. ಈಗ ಎಸ್‌ಡಿಬಿ ನಿರ್ಮಾಣದಿಂದ ಹೆಚ್ಚುವರಿಯಾಗಿ 1.5 ಲಕ್ಷ ಜನರಿಗೆ ಉದ್ಯೋಗಾವಕಾಶಗಳು ಸಿಗಲಿವೆ ಎಂದು ಹೇಳಿದರು.

ತಮ್ಮ ನೇತೃತ್ವದ ಕೇಂದ್ರ ಸರ್ಕಾರದ ಮೂರನೇ ಅವಧಿಯಲ್ಲಿ ಭಾರತವು ಜಗತ್ತಿನ ಮೂರು ಅತಿದೊಡ್ಡ ಆರ್ಥಿಕತೆಯ ದೇಶಗಳಲ್ಲಿ ಒಂದಾಗಲಿದೆ ಎಂದು ಪ್ರಧಾನಿ ವಿಶ್ವಾಸ ವ್ಯಕ್ತಪಡಿಸಿದರು.

ಇತ್ತೀಚಿನ ದಿನಗಳಲ್ಲಿ ‘ಮೋದಿ ಗ್ಯಾರಂಟಿ’ ಹೆಚ್ಚಾಗಿ ಚರ್ಚೆಗೆ ಒಳಪಡುತ್ತಿದೆ. ಈಚೆಗೆ ನಡೆದ ವಿಧಾನಸಭೆಗಳ ಚುನಾವಣಾ ಫಲಿತಾಂಶದ ಬಳಿಕ ಈ ಕುರಿತ ಚರ್ಚೆ ಇನ್ನಷ್ಟು ಹೆಚ್ಚಾಗಿದೆ ಎಂದು ಮೋದಿ ಹೇಳಿದರು.

ಇದೇ ವೇಳೆ ಪ್ರಧಾನಿಯವರು ಸೂರತ್ ಅಂತರರಾಷ್ಟ್ರೀಯ ವಿಮಾನನಿಲ್ದಾಣದ ಆಧುನಿಕ ಟರ್ಮಿನಲ್ ಅನ್ನೂ ಉದ್ಘಾಟಿಸಿದರು.

ಏಕದಿನ ಕ್ರಿಕೆಟ್ ಪಂದ್ಯ: ರಾಹುಲ್ ಬಳಗದ ಶುಭಾರಂಭ ● ಸಾಯಿ ಸುದರ್ಶನ್, ಶ್ರೇಯಸ್ ಅರ್ಧಶತಕ

ಅರ್ಷದೀಪ್ ದಾಳಿಗೆ ಕುಸಿದ ದಕ್ಷಿಣ ಆಫ್ರಿಕಾ

ಜೋಹಾನ್ಸ್‌ಬರ್ಗ್ (ಪಿಟಿಐ): ಐದು ವಿಕೆಟ್ ಗೊಂಚಲು ಗಳಿಸಿದ ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರ ದಾಳಿಯ ಮುಂದೆ ದಕ್ಷಿಣ ಆಫ್ರಿಕಾ ತಂಡವು ಮೊದಲ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಹೀನಾಯವಾಗಿ ಸೋತಿತು.

ಭಾನುವಾರ ವಾಂಡರರ್ಸ್ ಕ್ರೀಡಾಂಗಣದಲ್ಲಿ ನಡೆದ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡವು 8 ವಿಕೆಟ್‌ಗಳಿಂದ ಜಯಭೇರಿ ಬಾರಿಸಿತು. ಇನಿಂಗ್ಸ್‌ನಲ್ಲಿ ಇನ್ನೂ 200 ಎಸೆತಗಳು ಬಾಕಿ ಇದ್ದವು. ಮೂರು ಪಂದ್ಯಗಳ ಸರಣಿಯಲ್ಲಿ ಕೆ.ಎಲ್. ರಾಹುಲ್ ಬಳಗವು 1–0 ಮುನ್ನಡೆ ಸಾಧಿಸಿತು.

ಅರ್ಷದೀಪ್ (37ಕ್ಕೆ5) ದಕ್ಷಿಣ ಆಫ್ರಿಕಾ ವಿರುದ್ಧ ಏಕದಿನ ಕ್ರಿಕೆಟ್‌ನಲ್ಲಿ ಐದು ವಿಕೆಟ್ ಗಳಿಸಿದ ಭಾರತದ ಮೊದಲ ವೇಗದ ಬೌಲರ್ ಆದರು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಆತಿಥೇಯ ತಂಡವು 27.3 ಓವರ್‌ಗಳಲ್ಲಿ 116 ರನ್ ಗಳಿಸಿತು. ಪದಾರ್ಪಣೆ ಪಂದ್ಯದಲ್ಲಿ ಅರ್ಧಶತಕ ಹೊಡೆದ ಸಾಯಿ ಸುದರ್ಶನ್ (ಔಟಾಗದೆ 55, 43ಎ, 4X9) ಮತ್ತು ಶ್ರೇಯಸ್ ಅಯ್ಯರ್ (52; 45ಎ, 4X6, 6X1) ಅವರಿಬ್ಬರ ವೇಗದ ಬ್ಯಾಟಿಂಗ್‌ನಿಂದಾಗಿ ಭಾರತ 16.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 117 ರನ್ ಪೇರಿಸಿ ಗೆದ್ದಿತು.

ಅರ್ಷದೀಪ್ ಸಿಂಗ್ ತಮ್ಮ ಮೊದಲ ಸ್ಪೆಲ್‌ನಲ್ಲಿಯೇ ಆತಿಥೇಯ ತಂಡದ ಪ್ರಮುಖ ಬ್ಯಾಟರ್‌ಗಳಿಗೆ ಪೆವಿಲಿಯನ್ ದಾರಿ ತೋರಿಸಿದರು. ಇನಿಂಗ್ಸ್‌ನ ಎರಡನೇ ಓವರ್ ಹಾಕಿದ ಅವರು ರೀಜಾ ಹೆನ್ರಿಕ್ಸ್ ಮತ್ತು ವ್ಯಾನ್ ಡೆರ್ ಡಸೆ ವಿಕೆಟ್‌ಗಳನ್ನು ಕಬಳಿಸಿದರು.



ಆವೇಶ್ ಖಾನ್

ಇನಿಂಗ್ಸ್‌ನ ಎಂಟನೇ ಓವರ್‌ನಲ್ಲಿ ಟೋನಿ ಡಿ ಝೂರ್ಜಿ (28ರನ್) ಮತ್ತು ಹತ್ತನೇ ಓವರ್‌ನಲ್ಲಿ ಕ್ಲಾಸನ್ (6 ರನ್) ಅವರ ವಿಕೆಟ್‌ಗಳನ್ನೂ ತಮ್ಮ ಬುಟ್ಟಿಗೆ ಹಾಕಿಕೊಂಡ ಅರ್ಷದೀಪ್ ಮೆರೆದಾಡಿದರು.

ಇನ್ನೊಂದು ಬದಿಯಿಂದ ಆವೇಶ್ ಖಾನ್(27ಕ್ಕೆ4) ಕೂಡ ಚುರುಕಾದ ದಾಳಿ ನಡೆಸಿ ಬ್ಯಾಟರ್‌ಗಳೂ ಕ್ರೀಸ್‌ನಲ್ಲಿ ನಿಲ್ಲದಂತೆ ನೋಡಿಕೊಂಡರು. ಇದರಿಂದಾಗಿ ತಂಡವು 73 ರನ್‌ಗಳಿಗೆ ಎಂಟು ವಿಕೆಟ್ ಕಳೆದುಕೊಂಡಿತು. ಆದರೆ ಆ್ಯಂಡಿಲೆ ಪಿಶುವಾಯೊ (33; 49ಎ, 4X3,6X2) ಒಂದಿಷ್ಟು ಬೀಸಾಟವಾಡಿದ್ದರಿಂದ ತಂಡವು ನೂರರ ಗಡಿ ದಾಟಿತು.

ಎರಡನೇ ಸ್ಪೆಲ್ ಬೌಲಿಂಗ್ ಮಾಡಿದ ಅರ್ಷದೀಪ್ ಆ್ಯಂಡಿಲೆ ಆಟಕ್ಕೂ ಕಡಿವಾಣ ಹಾಕಿದರು. ಅರ್ಷದೀಪ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಆ್ಯಂಡಿಲೆ ವಿಕೆಟ್ ಒಪ್ಪಿಸಿದರು.

ಕೊನೆಯ ಬ್ಯಾಟರ್ ತಬ್ರೇಜ್ ಶಂಸಿ ಎರಡು ಬೌಂಡರಿಗಳು ಇದ್ದ 11 ರನ್ ಗಳಿಸಿದರು.

ಸಾಯಿ ಸುದರ್ಶನ್ ಅರ್ಧಶತಕ: ಚೆನ್ನೈ ಬ್ಯಾಟರ್ ಸಾಯಿ ಸುದರ್ಶನ್ ಚೆಂದದ ಬ್ಯಾಟಿಂಗ್ ಮಾಡಿದರು. ಬ್ಯಾಕ್‌ಫುಟ್ ಡ್ರೈವ್ ಮತ್ತು ಸ್ವಿನ್ ಎಸೆತಗಳಿಗೆ ಮುಂದಡಿ ಇಟ್ಟು ಪ್ರಯೋಗಿಸಿದ ವಿಶ್ವಾಸಭರಿತ ಬ್ಯಾಟಿಂಗ್ ಕಣ್ಮನ ಸೆಳೆಯಿತು.

ಪದಾರ್ಪಣೆ ಪಂದ್ಯದಲ್ಲಿ ಅರ್ಧಶತಕ ಹೊಡೆದ ಭಾರತದ 17ನೇ ಆಟಗಾರನೆಂಬ ಹೆಗ್ಗಳಿಕೆ ಅವರದ್ದಾಯಿತು.



ಭಾರತ ತಂಡದ ಬ್ಯಾಟರ್ ಸಾಯಿ ಸುದರ್ಶನ್ ಕೈಯಿಂದ ಜಾರಿದ ಬ್ಯಾಟ್ –ಎಎಫ್‌ಪಿ ಚಿತ್ರ



ಭಾರತ ಕ್ರಿಕೆಟ್ ತಂಡದ ಬೌಲರ್ ಅರ್ಷದೀಪ್ ಸಿಂಗ್ –ಎಪಿ/ಪಿಟಿಐ ಚಿತ್ರ

ದಕ್ಷಿಣ ಆಫ್ರಿಕಾ ವಿರುದ್ಧ 5 ವಿಕೆಟ್ ಪಡೆದ ಭಾರತೀಯರು

ಬೌಲರ್	ವಿಕೆಟ್	ವರ್ಷ
ಸುನಿಲ್ ಜೋಶಿ	6ಕ್ಕೆ5	1999
ಯಜುವೇಂದ್ರ ಚಾಹಲ್	22ಕ್ಕೆ5	2018
ರವೀಂದ್ರ ಜಡೇಜ	33ಕ್ಕೆ5	2023
ಅರ್ಷದೀಪ್ ಸಿಂಗ್	37ಕ್ಕೆ5	2023

ಕ್ಯಾನ್ಸರ್ ಜಾಗೃತಿಗೆ ಪಿಂಕ್ ಪೋಷಾಕು

ಸ್ತನ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಲು ದಕ್ಷಿಣ ಆಫ್ರಿಕಾ ತಂಡದ ಆಟಗಾರರು ಗುಲಾಬಿ ರಂಗಿನ ಪೋಷಾಕು ಧರಿಸಿ ಪಂದ್ಯ ಆಡಿದರು.

'ಸ್ತನ ಕ್ಯಾನ್ಸರ್ ಪಿಡುಗು ಹೆಚ್ಚುತ್ತಿದ್ದು. ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ. ಇಂತಹದೊಂದು ಅಭಿಯಾನಕ್ಕೆ ನಮ್ಮ ತಂಡವು ಕೈಜೋಡಿಸಿರುವುದು ಹೆಮ್ಮೆಯ ವಿಷಯ'ಎಂದು ಕ್ರಿಕೆಟ್ ದಕ್ಷಿಣ ಆಫ್ರಿಕಾ ಸಿಇಒ ಪೊಲೆಟ್ಸಿ ಮೊಸೆಕಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿಂದೆ ಸರಿದ ಇಶಾನ್: ಭಾರತ ತಂಡದ ವಿಕೆಟ್‌ಕೀಪರ್ ಮತ್ತು ಬ್ಯಾಟರ್ ಇಶಾನ್ ಕಿಶನ್ ಅವರು ವೈಯಕ್ತಿಕ ಕಾರಣಗಳಿಂದ ತವರಿಗೆ ಮರಳಿರುವ ಕಾರಣ ಮುಂಬರುವ ದಕ್ಷಿಣ ಆಫ್ರಿಕಾ ವಿರುದ್ಧದ ಎರಡು ಟೆಸ್ಟ್ ಪಂದ್ಯಗಳ ಸರಣಿಯಿಂದ ಹಿಂದೆ ಸರಿದಿದ್ದಾರೆ. ಭಾರತ 'ಎ' ತಂಡವನ್ನು ಮುನ್ನಡೆಸುತ್ತಿರುವ ಪ್ರಸ್ತುತ ದಕ್ಷಿಣ ಆಫ್ರಿಕಾದಲ್ಲಿರುವ ಕೆ.ಎಸ್. ಭರತ್ (ಕೋನಾ ಶ್ರೀಕರ್ ಭರತ್) ಅವರನ್ನು ಟೆಸ್ಟ್ ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

ಸ್ಕೋರ್ ಕಾರ್ಡ್

ದಕ್ಷಿಣ ಆಫ್ರಿಕಾ 116 (27.3 ಓವರ್‌ಗಳಲ್ಲಿ)
ಹೆಡ್ರಿಕ್ಸ್ ಬಿ ಅರ್ಷದೀಪ್ 0 (8ಎ)
ಟೋನಿ ಸಿ ರಾಹುಲ್ ಬಿ ಅರ್ಷದೀಪ್ 28 (22ಎ, 4x2, 6x2)
ಡೆರ್ ಡಸೆ ಎಲ್‌ಬಿಡಬ್ಲ್ಯು ಬಿ ಅರ್ಷದೀಪ್ 0 (1ಎ)
ಮರ್ಕರಂ ಬಿ ಆವೇಶ್ 12 (21ಎ, 4x2)
ಹೆನ್ರಿಚ್ ಬಿ ಅರ್ಷದೀಪ್ 6 (9ಎ, 4x1)
ಮಿಲ್ಲರ್ ಸಿ ರಾಹುಲ್ ಬಿ ಆವೇಶ್ 2 (7ಎ)
ಮುಲ್ಡರ್ ಎಲ್‌ಬಿಡಬ್ಲ್ಯು ಬಿ ಆವೇಶ್ 0 (1ಎ)
ಆ್ಯಂಡಿಲೆ ಎಲ್‌ಬಿಡಬ್ಲ್ಯು ಬಿ ಅರ್ಷದೀಪ್ 33 (49ಎ, 4x3, 6x2)
ಕೇಶವ್ ಸಿ ಗಾಯಕವಾಡ್ ಬಿ ಆವೇಶ್ 4 (7ಎ, 4x1)
ನಾಂಡ್ರೆ ಬಿ ಕುಲದೀಪ್ 7 (32ಎ)
ತಬ್ರೇಜ್ ಔಟಾಗದೆ 11 (8ಎ, 4x2)
ಇತರೆ: 13 (ಬೈ 1, ಲೆಗ್‌ಬೈ 2, ವೈಡ್ 10)
ವಿಕೆಟ್ ಪತನ: 1-3 (ರೀಜಾ ಹೆನ್ರಿಕ್ಸ್; 1.4), 2-3 (ವ್ಯಾನ್ ಡೆರ್ ಡಸೆ; 1.5), 3-42 (ಟೋನಿ ಡಿ ಝೂರ್ಜಿ; 7.5), 4-52 (ಹೆನ್ರಿಚ್ ಕ್ಲಾಸನ್; 9.6), 5-52 (ಏಡನ್ ಮರ್ಕರಂ; 10.1), 6-52 (ವಿಯಾನ್ ಮುಲ್ಡರ್; 10.2), 7-58 (ಡೇವಿಡ್ ಮಿಲ್ಲರ್; 12.6), 8-73 (ಕೇಶವ್ ಮಹಾರಾಜ್; 16.1), 9-101 (ಆ್ಯಂಡಿಲೆ ಪಿಶುವಾಯೊ; 25.1), 10-116 (ನಾಂಡ್ರೆ ಬರ್ಗರ್; 27.3)
ಬೌಲಿಂಗ್: ಮುಕೇಶ್ ಕುಮಾರ್ 7–0–46–0, ಅರ್ಷದೀಪ್ ಸಿಂಗ್ 10–0–37–5, ಆವೇಶ್ ಖಾನ್ 8–3–27–4, ಕುಲದೀಪ್ 2.3–0–3–1

ಭಾರತ 2ಕ್ಕೆ 117 (16.4 ಓವರ್‌ಗಳಲ್ಲಿ)
ಗಾಯಕವಾಡ್ ಎಲ್‌ಬಿಡಬ್ಲ್ಯು ಬಿ ಮುಲ್ಡರ್ 5 (10ಎ, 4x1)
ಸುದರ್ಶನ್ ಔಟಾಗದೆ 55 (43ಎ, 4x9)
ಶ್ರೇಯಸ್ ಸಿ ಮಿಲ್ಲರ್ ಬಿ ಪಿಶುವಾಯೊ 52 (45ಎ, 4x6, 6x1)
ತಿಲಕ್ ಔಟಾಗದೆ 1 (3ಎ)
ಇತರೆ: 4 (ನೋಬಾಲ್ 1, ವೈಡ್ 3)
ವಿಕೆಟ್ ಪತನ: -1–23 (ಋತುರಾಜ್ ಗಾಯಕವಾಡ್; 3.4), 2–111 (ಶ್ರೇಯಸ್ ಅಯ್ಯರ್; 15.5)
ಬೌಲಿಂಗ್: ನಾಂಡ್ರೆ ಬರ್ಗರ್ 5.4–1–35–0, ವಿಯಾನ್ ಮುಲ್ಡರ್ 4–0–26–1, ಕೇಶವ್ ಮಹಾರಾಜ್ 3–0–19–0, ತಬ್ರೇಜ್ ಶಂಸಿ 3–0–22–0, ಆ್ಯಂಡಿಲೆ ಪಿಶುವಾಯೊ 1–0–15–1
ಪಂದ್ಯದ ಆಟಗಾರ: ಅರ್ಷದೀಪ್ ಸಿಂಗ್

ಫಲಿತಾಂಶ: ಭಾರತಕ್ಕೆ 8 ವಿಕೆಟ್‌ಗಳ ಜಯ

ಬ್ಯಾಡ್ಮಿಂಟನ್: ಸತೀಶ್‌ಗೆ ಸಿಂಗಲ್ಸ್ ಕಿರೀಟ

ಕಟಕ್ (ಪಿಟಿಐ): ಭಾರತದ ಸತೀಶ್ ಕುಮಾರ್ ಕರುಣಾಕರನ್ ಅವರು ಒಡಿಶಾ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡರು. ಅವರು ಫೈನಲ್‌ನಲ್ಲಿ ಸ್ವದೇಶದ ಆಯುಷ್ ಶೆಟ್ಟಿ ಅವರನ್ನು ಮಣಿಸಿ ಸೂಪರ್ 100 ಮಟ್ಟದ ಚೊಚ್ಚಲ ಪ್ರಶಸ್ತಿ ಗೆದ್ದರು.



ಸತೀಶ್ ಕುಮಾರ್

ಭಾನುವಾರ ನಡೆದ ಫೈನಲ್‌ನಲ್ಲಿ 22 ವರ್ಷದ ಸತೀಶ್ ಅವರು 21–18, 19–21, 21–14ರಿಂದ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತ, 18 ವರ್ಷದ ಆಯುಷ್ ಅವರನ್ನು ಮಣಿಸಿದರು. ಮೊದಲ ಗೇಮ್‌ನಲ್ಲಿ ಸತೀಶ್ ಮೇಲುಗೈ ಸಾಧಿಸಿದರೆ, ಎರಡನೇ ಗೇಮ್ ಅನ್ನು ಆಯುಷ್ ಹಿಡಿತ ಸಾಧಿಸಿದರು. ಆದರೆ, ನಿರ್ಣಾಯಕ ಗೇಮ್‌ನಲ್ಲಿ ಮತ್ತೆ ಸತೀಶ್ ಪರಾಕ್ರಮ ಮೆರೆದು ಪ್ರಶಸ್ತಿಗೆ ಮುತ್ತಿಕ್ಕಿದರು.

ತನಿಶಾ– ಧ್ರುವ್ ಜೋಡಿಗೆ ಪ್ರಶಸ್ತಿ: ಭಾರತದ ತನಿಶಾ ಕ್ರಾಸ್ಟೊ ಮತ್ತು ಧ್ರುವ್ ಜೋಡಿಯು ಮಿಶ್ರ ಡಬಲ್ಸ್‌ನಲ್ಲಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಫೈನಲ್‌ನಲ್ಲಿ 20 ವರ್ಷದ ತನಿಶಾ ಹಾಗೂ 23 ವರ್ಷದ ಧ್ರುವ್ ಅವರು 17-21, 21-19, 23-21ರಿಂದ ಸಿಂಗಪುರದ ಹೀ ಯಾಂಗ್ ಕೈ ಟೆರ್ರಿ ಮತ್ತು ತಾನ್ ವೀ ಹಾನ್ ಜೆಸ್ಸಿಕಾ ವಿರುದ್ಧ ಗೆಲುವು ಸಾಧಿಸಿದರು. .

ಪುರುಷರ ಡಬಲ್ಸ್‌ನಲ್ಲಿ ಆರನೇ ಶ್ರೇಯಾಂಕದ ಭಾರತದ ಕೃಷ್ಣಪ್ರಸಾದ್ ಗರಗ ಮತ್ತು ಸಾಯಿಪ್ರತೀಕ್ ಕೆ. ಜೋಡಿಯು ಫೈನಲ್‌ನಲ್ಲಿ 22–20, 18–21, 17–21ರಿಂದ ಏಳನೇ ಶ್ರೇಯಾಂಕದ ಚೀನಾ ತೈಪೆಯ ಲಿನ್ ಬಿಂಗ್-ವೀ ಮತ್ತು ಸು ಚಿಂಗ್ ಹೆಂಗ್ ಅವರ ವಿರುದ್ಧ ಸೋತು ರನ್ನರ್ ಅಪ್ ಸ್ಥಾನ ಪಡೆಯಿತು.

ಮಹಿಳೆಯರ ಡಬಲ್ಸ್‌ನ ಫೈನಲ್‌ನಲ್ಲಿ ಭಾರತದ ತನಿಶಾ ಮತ್ತು ಅಶ್ವಿನಿ ಪೊನ್ನಪ್ಪ ಜೋಡಿಯು 14–21, 17–21ರಿಂದ ಇಂಡೊನೇಷ್ಯಾದ ಮೈಲಿಸಾ ಟ್ರಿಯಾಸ್ ಪುಷ್ಪಿತಾಸರಿ ಮತ್ತು ರಾಚೆಲ್ ಅಲ್ಲೆಸ್ಯಾ ರೋಸ್ ಅವರಿಗೆ ಶರಣಾಯಿತು.

ಭಾರತ ತಂಡದಲ್ಲಿ ರಾಮಕುಮಾರ್

ನವದೆಹಲಿ (ಪಿಟಿಐ): ಪಾಕಿಸ್ತಾನ ಎದುರಿನ ಡೇವಿಸ್ ಕಪ್ ವಿಶ್ವ ಮೊದಲ ಗುಂಪಿನ ಪ್ಲೇ ಆಫ್ ಪಂದ್ಯದಲ್ಲಿ ಆಡಲಿರುವ ಭಾರತದ ಆರು ಆಟಗಾರರ ತಂಡವನ್ನು ಶನಿವಾರ ಪ್ರಕಟಿಸಲಾಗಿದೆ.

ಇದರೊಂದಿಗೆ ಭಾರತ ತಂಡವು 60 ವರ್ಷಗಳ ನಂತರ ಪಾಕಿಸ್ತಾನದಲ್ಲಿ ಡೇವಿಸ್ ಕಪ್ ಪಂದ್ಯ ಆಡುವುದು ಬಹುತೇಕ ಖಚಿತವಾದಂತಾಗಿದೆ.

ತಂಡದಲ್ಲಿ ರಾಮಕುಮಾರ್ ರಾಮನಾಥನ್, ಎನ್. ಶ್ರೀರಾಮ್ ಬಾಲಾಜಿ, ಯೂಕಿ ಬಾಂಭ್ರಿ, ನಿಕಿ ಕಲಿಯಂಡ ಪೂಣಚ್ಚ, ಸಾಕೇತ್ ಮೈನೇನಿ ಮತ್ತು ಮೀಸಲು ಆಟಗಾರ ದಿಗ್ವಿಜಯ್ ಪ್ರತಾಪ್ ಸಿಂಗ್ ಸ್ಥಾನ ಪಡೆದಿದ್ದಾರೆ.

ರಾಮನಾಥನ್ ಮತ್ತು ಪೂಣಚ್ಚ ಅವರು ಸಿಂಗಲ್ಸ್ ಆಡುವ ಸಾಧ್ಯತೆ ಇದೆ. ಯೂಕಿ, ಬಾಲಾಜಿ ಮತ್ತು ಮೈನೇನಿ ಅವರು ಡಬಲ್ಸ್‌ನಲ್ಲಿ ಆಡುವ ನಿರೀಕ್ಷೆ ಇದೆ.

ರೋಹಿತ್ ರಾಜಪಾಲ್ ಅವರು ನಾನ್‌ಪ್ಲೇಯಿಂಗ್ ಕ್ಯಾಪ್ಟನ್ ಮತ್ತು ಜೀಶನ್ ಅಲಿ ಮುಖ್ಯ ಕೋಚ್ ಆಗಿದ್ದಾರೆ ಎಂದು ಅಖಿಲ ಭಾರತ ಟೆನಿಸ್ ಸಂಸ್ಥೆ (ಎಐಟಿಎ) ಪ್ರಕಟಣೆಯಲ್ಲಿ ತಿಳಿಸಿದೆ.

ಭಾರತ ತಂಡವು ಕೊನೆಯ ಸಲ ಪಾಕಿಸ್ತಾನಕ್ಕೆ ತೆರಳಿದ್ದು 1964ರಲ್ಲಿ. ಭಾರತ ಮತ್ತು ಪಾಕ್ ತಂಡಗಳು 2019ರಲ್ಲಿ ತಟಸ್ಥ ತಾಣದಲ್ಲಿ ಮುಖಾಮುಖಿಯಾಗಿದ್ದವು. ಭಾರತವು ಪಾಕ್ ತಂಡವನ್ನು ಎಂಟು ಬಾರಿ ಸೋಲಿಸಿದೆ.

ಮುಂದಿನ ವರ್ಷದ ಫೆಬ್ರುವರಿ 3 ಮತ್ತು 4ರಂದು ಪಂದ್ಯವು ಇಸ್ಲಾಮಾಬಾದ್‌ನಲ್ಲಿ ನಡೆಯಲಿದೆ.

ಆಸ್ಟ್ರೇಲಿಯಾಗೆ ಶರಣಾದ ಪಾಕ್

ಟೆಸ್ಟ್: 500 ವಿಕೆಟ್ ಮೈಲಿಗಲ್ಲು ಸಾಧಿಸಿದ ನೇಥನ್ ಲಯನ್

ಪರ್ತ್ (ಎಪಿ): ಆತಿಥೇಯ ಆಸ್ಟ್ರೇಲಿಯಾ ತಂಡವು ಇಲ್ಲಿ ನಡೆದ ಪಾಕಿಸ್ತಾನ ಎದುರಿನ ಮೊದಲ ಟೆಸ್ಟ್ ಪಂದ್ಯದಲ್ಲಿ ಜಯಭೇರಿ ಬಾರಿಸಿತು. ಸ್ಪಿನ್ನರ್ ನೇಥನ್ ಲಯನ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ 500 ವಿಕೆಟ್ ಗಳಿಸಿದ ಆಟಗಾರರ ಸಾಲಿಗೆ ಸೇರಿದರು.

450 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಪಾಕಿಸ್ತಾನ ತಂಡವು ನಾಲ್ಕನೇ ದಿನದಾಟದಲ್ಲಿ 30.2 ಓವರ್‌ಗಳಲ್ಲಿ 89 ರನ್ ಗಳಿಸಿ ಆಲೌಟ್ ಆಯಿತು. 360 ರನ್‌ಗಳ ಭರ್ಜರಿ ಜಯ ಸಾಧಿಸಿತು. ಪ್ರವಾಸಿ ಪಾಕ್ ತಂಡವು ಆಸ್ಟ್ರೇಲಿಯಾ ನೆಲದಲ್ಲಿ ಸತತ 15ನೇ ಸೋಲು ಅನುಭವಿಸಿತು.

ಆಸ್ಟ್ರೇಲಿಯಾದ ವೇಗಿ ಮಿಚೆಲ್ ಸ್ಟಾರ್ಕ್, ಜೋಶ್ ಹ್ಯಾಜಲ್‌ವುಡ್ ಮತ್ತು ನಾಯಕ ಪ್ಯಾಟ್ ಕಮಿನ್ಸ್ ಅವರ ವೇಗದ ದಾಳಿಗೆ ಪಾಕಿಸ್ತಾನದ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಕುಸಿದರು. ಹ್ಯಾಜಲ್‌ವುಡ್ ಮತ್ತು ಸ್ಟಾರ್ಕ್ ಜೋಡಿ ಆರು ವಿಕೆಟ್ ಪಡೆದರೆ, ಕಮಿನ್ಸ್, ಪಾಕ್ ಮಾಜಿ ನಾಯಕ ಬಾಬರ್ ಅಜಮ್ (14) ಅವರ ವಿಕೆಟ್ ಕಬಳಿಸಿದರು.

ಫಹೀಮ್ ಅಶ್ರಫ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಬೀಳಿಸಿದ ಲಯನ್ 500 ವಿಕೆಟ್‌ಗಳ ಮೈಲಿಗಲ್ಲು ತಲುಪಿದರು.

ಗ್ಲೆನ್ ಮೆಕ್‌ಗ್ರಾ ಮತ್ತು ದಿವಂಗತ ಶೇನ್ ವಾರ್ನ್ ಅವರ ನಂತರ ಈ ಸಾಧನೆ ಮಾಡಿದ ಆಸ್ಟ್ರೇಲಿಯಾ ಆಟಗಾರನೆಂಬ ಶ್ರೇಯ ಅವರದ್ದಾಯಿತು. ಒಟ್ಟಾರೆ ಈ ಸಾಧನೆ ಮಾಡಿದ ಎಂಟನೇ ಬೌಲರ್ ಆಗಿದ್ದಾರೆ.



ನೇಥನ್ ಲಯನ್ ಎಪಿ/ಪಿಟಿಐ ಚಿತ್ರ

ಮೊದಲ 7 ಓವರ್‌ಗಳಲ್ಲಿ ಪಾಕಿಸ್ತಾನ 3 ವಿಕೆಟ್ ನಷ್ಟಕ್ಕೆ 17 ರನ್ ಗಳಿಸಿತ್ತು.ಎಡಗೈ ವೇಗಿ ಸ್ಟಾರ್ಕ್ ತಮ್ಮ ತವರಿನಲ್ಲಿ 200ನೇ ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 487, ಪಾಕಿಸ್ತಾನ: 101.5 ಓವರ್‌ಗಳಲ್ಲಿ 271 (ಇಮಾಮ್ ಉಲ್ ಹಕ್ 62, ಸೌದ್ ಶಕೀಲ್ 28, ಆಘಾ ಸಲ್ಮಾನ್ ಔಟಾಗದೇ 28: ಪ್ಯಾಟ್ ಕಮಿನ್ಸ್ 35ಕ್ಕೆ 2, ನೇಥನ್ ಲಯನ್ 66ಕ್ಕೆ3): ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ 63.2 ಓವರ್‌ಗಳಲ್ಲಿ 233ಕ್ಕೆ5 ಡಿಕ್ಲೇರ್ಡ್ (ಖ್ವಾಜಾ 90, ಮಾರ್ಷ್ ಔಟಾಗದೇ 63: ಖುರ್‍ರಂ ಶೆಹಜಾದ್ 45ಕ್ಕೆ 3): ಪಾಕಿಸ್ತಾನ 30.2 ಓವರ್‌ಗಳಲ್ಲಿ 89 (ಸೌದ್ ಶಕೀಲ್ 24, ಬಾಬರ್ ಅಜಂ 14, ಮಿಚೆಲ್ ಸ್ಟಾರ್ಕ್ 31ಕ್ಕೆ3, ಜೋಶ್ ಹ್ಯಾಜಲ್‌ವುಡ್ 13ಕ್ಕೆ3, ನೇಥನ್ ಲಯನ್ 14ಕ್ಕೆ 2) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 360 ರನ್‌ಗಳ ಜಯ ಹಾಗೂ ಸರಣಿಯಲ್ಲಿ 1–0 ಮುನ್ನಡೆ. ಪಂದ್ಯಶ್ರೇಷ್ಠ: ಮಿಚೆಲ್ ಮಾರ್ಷ್.

ಟೆಸ್ಟ್ ಕ್ರಿಕೆಟ್: 500 ವಿಕೆಟ್ ಸಾಧಕರು

ಬೌಲರ್	ದೇಶ	ಇನ್ನಿಂಗ್ಸ್	ವಿಕೆಟ್
ಮುತ್ತಯ್ಯ ಮುರಳೀಧರನ್	ಶ್ರೀಲಂಕಾ	230	800
ಶೇನ್ ವಾರ್ನ್	ಆಸ್ಟ್ರೇಲಿಯಾ	273	708
ಜೇಮ್ಸ್ ಆಂಡರ್ಸನ್	ಇಂಗ್ಲೆಂಡ್	341	690
ಅನಿಲ್ ಕುಂಬ್ಳೆ	ಭಾರತ	236	619
ಸ್ಟುವರ್ಟ್ ಬ್ರಾಡ್	ಇಂಗ್ಲೆಂಡ್	309	604
ಗ್ಲೆನ್ ಮೆಕ್‌ಗ್ರಾ	ಆಸ್ಟ್ರೇಲಿಯಾ	243	563
ಕರ್ಟ್ನಿ ವಾಲ್ಶ್	ವೆಸ್ಟ್‌ಇಂಡೀಸ್	242	519
ನೇಥನ್ ಲಯನ್	ಆಸ್ಟ್ರೇಲಿಯಾ	230	501

ಹಾಕಿ: ಭಾರತಕ್ಕೆ ಸೋಲು

ವೆಲೆನ್ಸಿಯಾ (ಪಿಟಿಐ): ಭಾರತದ ಪುರುಷರ ಹಾಕಿ ತಂಡವು ಇಲ್ಲಿ ನಡೆಯುತ್ತಿರುವ ಪಂಚ ದೇಶಗಳ ಹಾಕಿ ಟೂರ್ನಿಯಲ್ಲಿ 2–7 ಗೋಲುಗಳಿಂದ ಒಲಿಂಪಿಕ್ ಚಾಂಪಿಯನ್ ಬೆಲ್ಜಿಯಂ ತಂಡದ ವಿರುದ್ಧ ಹೀನಾಯವಾಗಿ ಪರಾಭವಗೊಂಡಿತು. ಮತ್ತೊಂದೆಡೆ ಮಹಿಳಾ ತಂಡವೂ 1–2 ಗೋಲುಗಳಿಂದ ಬೆಲ್ಜಿಯಂ ತಂಡಕ್ಕೆ ಮಣಿಯಿತು.

ಶನಿವಾರ ನಡೆದ ಪುರುಷರ ಪಂದ್ಯದಲ್ಲಿ ಬೆಲ್ಜಿಯಂ ಆಟಗಾರರು ಚುರುಕಿನ ಆಟವಾಡಿ, ಮೊದಲ ಕ್ವಾರ್ಟರ್‌ನಲ್ಲೇ 3 ಗೋಲುಗಳನ್ನು ದಾಖಲಿಸಿ ಉತ್ತಮ ಆರಂಭ ಮಾಡಿದರು.

ಬಾಂಗ್ಲಾದೇಶ ಯುವಪಡೆಗೆ ಏಷ್ಯಾಕಪ್

ದುಬೈ (ಪಿಟಿಐ): ವಿಕೆಟ್‌ಕೀಪರ್ ಮತ್ತು ಬ್ಯಾಟರ್ ಅಶಿಕುರ್ ರೆಹಮಾನ್ ಶಿಬ್ಲಿ ಅವರ ಶತಕದ ನೆರವಿನಿಂದ ಬಾಂಗ್ಲಾದೇಶ ತಂಡವು 19 ವರ್ಷದೊಳಗಿನವರ ಏಷ್ಯಾಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ 195 ರನ್‌ಗಳಿಂದ ಯುಎಇ ತಂಡವನ್ನು ಮಣಿಸಿ, ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾ ತಂಡವು ಅಶಿಕುರ್ (129; 149ಎ, 4x12, 6x1) ಅವರ ಬ್ಯಾಟಿಂಗ್ ಬಲದಿಂದ 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 282 ರನ್ ಗಳಿಸಿತು. ಗುರಿಯನ್ನು ಬೆನ್ನತ್ತಿದ ಯುಎಇ ತಂಡದ ಬ್ಯಾಟರ್‌ಗಳು ಬಾಂಗ್ಲಾದ ಬೌಲರ್‌ಗಳ ಪರಿಣಾಮಕಾರಿ ದಾಳಿಗೆ ತತ್ತರಿಸಿದರು.

24.5 ಓವರ್‌ಗಳಲ್ಲಿ 87 ರನ್ ಗಳಿಸಿದ ತಂಡ ಕುಸಿಯಿತು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 50 ಓವರ್‌ಗಳಲ್ಲಿ 8 ವಿಕೆಟ್‌ಗೆ 282 (ಅಶಿಕುರ್ ರೆಹಮಾನ್ ಶಿಬ್ಲಿ 129, ಚೌಧರಿ ಮೊಹಮ್ಮದ್ ರಿಜ್ವಾನ್ 60, ಅರಿಫುಲ್ ಇಸ್ಲಾಂ 50; ಐಮನ್ ಅಹಮದ್ 52ಕ್ಕೆ 4) ಯುಎಇ: 24.5 ಓವರ್‌ಗಳಲ್ಲಿ 87 (ಧ್ರುವ ಪರಾಶರ ಔಟಾಗದೆ 25; ಮರುಫ್ ಮೃಧಾ 29ಕ್ಕೆ 3, ರೋಹನತ್ ಡೌಲ್ಲಾ ಬೋರ್ಸನ್ 26ಕ್ಕೆ 3). ಫಲಿತಾಂಶ: ಬಾಂಗ್ಲಾದೇಶಕ್ಕೆ 195 ರನ್ ಜಯ

ವಿಲ್ ಯಂಗ್ ಶತಕ: ಕಿವೀಸ್‌ಗೆ ಜಯ

ಡನೇಡಿನ್, ನ್ಯೂಜಿಲೆಂಡ್ (ಎಎಫ್‌ಪಿ): ಆರಂಭಿಕ ಆಟಗಾರ ವಿಲ್ ಯಂಗ್ ಅವರ ಅಬ್ಬರದ ಶತಕದ ನೆರವಿನಿಂದ ನ್ಯೂಜಿಲೆಂಡ್ ತಂಡವು ಭಾನುವಾರ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ 44 ರನ್‌ಗಳಿಂದ ಬಾಂಗ್ಲಾದೇಶವನ್ನು ಮಣಿಸಿತು.

ಮೂರು ಪಂದ್ಯಗಳ ಸರಣಿಯಲ್ಲಿ ಕಿವೀಸ್ ತಂಡವು 1–0 ಮುನ್ನಡೆ ಪಡೆಯಿತು. ಕಿವೀಸ್ ಬ್ಯಾಟಿಂಗ್ ಮಾಡುವ ವೇಳೆ ಮಳೆ ಸುರಿದ ಕಾರಣ ಕೆಲಕಾಲ ಪಂದ್ಯ ಸ್ಥಗಿತವಾಗಿತ್ತು. ಆದ್ದರಿಂದ 30 ಓವರ್‌ಗೆ ಪಂದ್ಯ ನಿಗದಿಗೊಳಿಸಲಾಯಿತು.



ವಿಲ್ ಯಂಗ್ – ಎಪಿ/ಪಿಟಿಐ ಚಿತ್ರ

ಆತಿಥೇಯ ತಂಡವು ವಿಲ್ ಯಂಗ್ (105; 84ಎ, 4x14, 6x4) ಮತ್ತು ನಾಯಕ ಟಾಮ್ ಲೇಥಮ್ (92; 77ಎ, 4x9, 6x3) ಬ್ಯಾಟಿಂಗ್ ಬಲದಿಂದ 30 ಓವರ್‌ಗಳಿಗೆ 7 ವಿಕೆಟ್‌ಗೆ 239 ರನ್ ಕಲೆಹಾಕಿತು. ಡಕ್ವರ್ಥ್–ಲೂಯಿಸ್ ನಿಯಮದನ್ವಯ 245 ರನ್‌ಗಳ ಗುರಿ ನೀಡಲಾಯಿತು. ಬಾಂಗ್ಲಾ ತಂಡವು 30 ಓವರ್‌ಗಳಲ್ಲಿ 9 ವಿಕೆಟ್‌ಗೆ 200 ರನ್ ಗಳಿಸಲಷ್ಟೇ ಶಕ್ತವಾಯಿತು.

ಸಂಕ್ಷಿಪ್ತ ಸ್ಕೋರ್: ನ್ಯೂಜಿಲೆಂಡ್: 30 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 239 (ವಿಲ್ ಯಂಗ್ 105, ಟಾಮ್ ಲೇಥಮ್ 92, ಶೋರಿಫುಲ್ ಇಸ್ಲಾಂ 28ಕ್ಕೆ 2). ಬಾಂಗ್ಲಾದೇಶ: 30 ಓವರ್‌ಗಳಲ್ಲಿ 9 ವಿಕೆಟ್‌ಗೆ 200 (ಅನಾಮುಲ್ ಹಕ್ 43, ತೌಹಿದ್ ಹೃದೋಯ್ 33, ಅಫೀಫ್ ಹುಸೇನ್ 39; ಆ್ಯಡಂ ಮಿಲ್ನೆ 46ಕ್ಕೆ2, ಈಶ್ ಸೋಧಿ 35ಕ್ಕೆ2, ಜೋಷ್ ಕ್ಲಾರ್ಕ್ಸನ್ 24ಕ್ಕೆ 2) ಫಲಿತಾಂಶ: ನ್ಯೂಜಿಲೆಂಡ್‌ಗೆ 44 ರನ್ ಜಯ (ಡಿಎಲ್‌ಎಸ್ ನಿಯಮದನ್ವಯ)

ಪ್ರೊ ಕಬಡ್ಡಿ: ಪ್ಯಾಂಥರ್ಸ್‌ಗೆ ಗೆಲುವು


ಪುಣೆ: ಅಜಿತ್ ಕುಮಾರ್ ಅವರ ಚುರುಕಾದ ದಾಳಿಯ ಬಲದಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಪಟ್ನಾ ಪೈರೆಟ್ಸ್ ಎದುರು ರೋಚಕ ಜಯ ಸಾಧಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಜೈಪುರ ತಂಡವು 29–28 ರಿಂದ ಪಟ್ನಾ ಪೈರೇಟ್ಸ್ ತಂಡವನ್ನು ಮಣಿಸಿತು. ಪಟ್ನಾ ತಂಡವು 10–1ರಿಂದ ಮುನ್ನಡೆಯೊಂದಿಗೆ ಉತ್ತಮ ಆರಂಭ ಪಡೆದಿತ್ತು. ಮಧ್ಯಂತರದ ವೇಳೆಗೆ 16–8 ಪಾಯಿಂಟ್ಸ್‌ನೊಂದಿಗೆ ಮೇಲುಗೈ ಸಾಧಿಸಿತ್ತು. ನಂತರದಲ್ಲಿ ಪುಟಿದೆದ್ದ ಪ್ಯಾಂಥರ್ಸ್ ಆಟಗಾರರು ಪ್ರಬಲ ಹೋರಾಟ ನಡೆಸಿದರು. ಜಿದ್ದಾಜಿದ್ದಿಯ ಪೈಪೋಟಿ ನಡೆದ ಪಂದ್ಯದಲ್ಲಿ ಕೇವಲ 1 ಅಂಕದಿಂದ ಪೈರೇಟ್ಸ್ ತಂಡ ಸೋತಿತು.

ಅಜಿತ್ ಕುಮಾರ್ ಅವರು 11 ಟಚ್ ಪಾಯಿಂಟ್ಸ್ ಸೇರಿ 16 ಅಂಕಗಳನ್ನು ಸಂಪಾದಿಸಿ ಗೆಲುವಿನ ರೂವಾರಿಯಾದರು. ಪಟ್ನಾ ತಂಡದ ಸಚಿನ್ ಮತ್ತು ಸಂದೀಪ್ ಕುಮಾರ್ ತಲಾ 7 ಪಾಯಿಂಟ್ಸ್ ಗಳಿಸಿದರು.

ಜೈಪುರ ತಂಡವು ಆಡಿರುವ ಐದು ಪಂದ್ಯಗಳಲ್ಲಿ ಎರಡರಲ್ಲಿ ಗೆದ್ದರೆ, ಒಂದನ್ನು ಡ್ರಾ ಮಾಡಿದೆ. ಮತ್ತೆರಡರಲ್ಲಿ ಸೋತು ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಪಟ್ನಾ ತಂಡವು ಐದು ಪಂದ್ಯಗಳಲ್ಲಿ ಎರಡಲ್ಲಿ ಗೆದ್ದು, ಮತ್ತೆ ಮೂರರಲ್ಲಿ ಸೋತು ಪಾಯಿಂಟ್ ಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದೆ.

ಯು ಮುಂಬಾಗೆ ಜಯ: ಮತ್ತೊಂದು ಪಂದ್ಯದಲ್ಲಿ ಗುಮಾನ್‌ಸಿಂಗ್ (11) ಮತ್ತು ಇರಾನ್‌ನ ಅಮೀರ್ ಮೊಹಮ್ಮದ್ ಝಫರ್ ದಾನೇಶ್ (10) ಅವರ ಆಟದ ಬಲದಿಂದ ಯು ಮುಂಬಾ ತಂಡವು 46–33ರಿಂದ ತಮಿಳು ತಲೈವಾಸ್ ತಂಡವನ್ನು ಸೋಲಿಸಿತು.



ಜೈಪುರ ಪಿಂಕ್ ಪ್ಯಾಂಥರ್ಸ್ ಮತ್ತು ಪಟ್ನಾ ಪೈರೇಟ್ಸ್ ತಂಡಗಳ ನಡುವೆ ಹಣಾಹಣಿ

ಸಾಲ್ಟ್ ಮಿಂಚಿನ ಶತಕ

ಗ್ರೆನೆಡಾ (ಎಪಿ): ಆರಂಭಿಕ ಬ್ಯಾಟರ್ ಫಿಲಿಪ್ ಸಾಲ್ಟ್ (ಔಟಾಗದೆ 109, 56ಎ, 4X4, 6X9) ಶತಕದ ಬಲದಿಂದ ಇಂಗ್ಲೆಂಡ್ ಇಲ್ಲಿ ನಡೆದ ಟಿ20 ಪಂದ್ಯದಲ್ಲಿ ವೆಸ್ಟ್ ಇಂಡೀಸ್ ಎದುರು ರೋಚಕ ಜಯ ಸಾಧಿಸಿತು.

ಸೇಂಟ್ ಜಾರ್ಜ್ಸ್ ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಶನಿವಾರ ತಡರಾತ್ರಿ ಮುಗಿದ ಪಂದ್ಯದಲ್ಲಿ ಇಂಗ್ಲೆಂಡ್ 7 ವಿಕೆಟ್‌ಗಳಿಂದ ಗೆದ್ದಿತು.

ಮೊದಲು ಬ್ಯಾಟ್ ಮಾಡಿದ್ದ ಆತಿಥೇಯ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 222 ರನ್ ಗಳಿಸಿತ್ತು. ನಿಕೊಲಸ್ ಪೂರನ್ 45 ಎಸೆತಗಳಲ್ಲಿ 82 ರನ್ ಗಳಿಸಿದ್ದರು. ಈ ಕಠಿಣ ಗುರಿಯನ್ನು ಇಂಗ್ಲೆಂಡ್ ತಂಡವು 19.5 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಸಾಧಿಸಿತು.